₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । **ಬೆಳಗಾವಿ** ಶನಿವಾರ 27.09.2025 ಸಂಪುಟ: 68 ಸಂಚಿಕೆ: 145 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ಕೃಷ್ಣರಾಜ ಸಾಗರದ ಬೃಂದಾವನದಲ್ಲಿ ಶುಕ್ರವಾರ ಇಳಿಸಂಜೆ ಕಾವೇರಿ ನದಿಗೆ ಪುಷ್ಪಾರ್ಚನೆ ಮಾಡಿ, ಆರತಿ ಬೆಳಗುವ ಮೂಲಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಂಗಾರತಿ ಮಾದರಿಯಲ್ಲಿ ರಾಜ್ಯದಲ್ಲೂ ನದಿಗೆ ಆರತಿ ಅರ್ಪಿಸುವ ಹೊಸ ಸಂಪ್ರದಾಯಕ್ಕೆ ಮುನ್ನುಡಿ ಬರೆದರು



ಸೊಂಪಾದ ಪುಟಗಳು

ಆಪರೇಷನ್ ಡೈಮಂಡ್ ಮಿಗ್-21

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ

6

ನವರಾತ್ರಿಯ ಶಕ್ತಿ, ಆಯುರ್ವೇದದ ಯುಕ್ತಿ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ

7

ದಾರಿದೀಪೋಕ್ತಿ



ನಮಗೆ ವಯಸ್ಸಾಗುತ್ತಿದ್ದಂತೆ ಸೌಂದರ್ಯಕ್ಕೆ ಸುಕ್ಕಾಗುವುದಿಲ್ಲ, ಮುಪ್ಪಾಗುವುದಿಲ್ಲ. ಅದು ಮುಖದಿಂದ ಬುದ್ಧಿಯ ಕಡೆಗೆ ಹೆಚ್ಚು ವಾಲಲು ಆರಂಭಿಸುತ್ತದೆ. ಆಗ ವ್ಯಕ್ತಿ ಹೆಚ್ಚು ಪ್ರಬುದ್ಧನಾಗುತ್ತಾನೆ. ಅದರಂಥ ಸೌಂದರ್ಯ ಯಾವುದಿದೆ?

ವಕ್ರತುಂಡೋಕ್ತಿ



ಕ್ಷೌರ ಮಾಡಿಸಿಕೊಳ್ಳುವಾಗ ಎಲ್ಲರೂ ಹೇರ್ ಕಟ್ ಮಾಡುವವನ್ನು ನಂಬುತ್ತಾರೆ. ಅದಕ್ಕಾಗಿ ಕಣ್ಣು ಮುಚ್ಚಿಕೊಳ್ಳುತ್ತಾರೆ.

ಉದ್ದಿಗೆ ಬೆಂಬಲ ಬೆಲೆ ಪ್ರಕಟ

ಬೆಂಗಳೂರು: ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಲ್ಲಿ ಮುಂಗಾರು ಹಂಗಾಮಿನ ಉದ್ದಿನ ಕಾಳು, ಹೆಸರುಕಾಳು



ಹಾಗೂ ಸೂರ್ಯಕಾಂತಿ ಖರೀದಿ ಪ್ರಕ್ರಿಯೆ ಆರಂಭಿಸಬೇಕು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಗಳಿಗೆ ಆದೇಶ ಹೊರಡಿ ಸಿದ್ದಾರೆ. ಕೇಂದ್ರ ಸರಕಾರ ಹೆಸರುಕಾಳಿಗೆ 8,768 ರು., ಉದ್ದಿನಕಾಳಿಗೆ 7,800 ರು, ಸೂರ್ಯಕಾಂತಿಗೆ 7,721 ರು. ನಿಗದಿ ಮಾಡಿದೆ. ನೋಂದಣಿ ಕಾಲಾವಧಿಯನ್ನು 80 ದಿನ ಹಾಗೂ ಖರೀದಿ ಅವಧಿಯನ್ನು 90 ದಿನ ನಿಗದಿಪಡಿಸಲಾಗಿದೆ.

ವಾಂಗ್‌ಚುಕ್ ಬಂಧನ

ಲಡಾಖ್: ಇಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಕನಿಷ್ಠ ನಾಲ್ವರು ಸಾವನ್ನಪ್ಪಿ, 90ಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಘಟನೆಗೆ ಮೂಲ ಕಾರಣ ಸೋನಮ್ ವಾಂಗ್‌ಚುಕ್ ಎಂದು ಆರೋಪಿಸಿ, ಲೇಹ್ ಪೊಲೀಸರು ಶುಕ್ರವಾರ ಅವರನ್ನು ಬಂಧಿಸಿದ್ದಾರೆ. ಲೇಹ್ ಅಪೆಕ್ಸ್ ಬಾಡಿ ಮತ್ತು ಕಾರ್ಗಿಲ್ ಡೆಮಾಕ್ರಟಿಕ್ ಅಲೈಯನ್ಸ್ ಜತೆಗೂಡಿ ವಾಂಗ್ಚುಕ್ ನೇತೃತ್ವದಲ್ಲಿ ಲಡಾಖ್‌ಗೆ ಪೂರ್ಣ ರಾಜ್ಯ ಸ್ಥಾನಮಾನ ಮತ್ತು ಭಾರತೀಯ ಸಂವಿಧಾನದ ಆರನೇ ವೇಳಾಪಟ್ಟಿಯ ಅಡಿಯಲ್ಲಿ ಸೇರ್ಪಡೆಗಾಗಿ ಪ್ರತಿಭಟನೆ ನಡೆಸಲಾಗಿತ್ತು.

ಫನ್‌ತರಂಗ

- ರಘುಪತಿ ಶೃಂಗೇರಿ -

"ಕಮಲದ ಮೊಗದೋಳೆ..."ಕನ್ನಡದ ಗೀತೆ ಹಂಚಿಕೊಂಡು ನವರಾತ್ರಿ ಶುಭಾಶಯ ಕೋರಿದ ಪಿಎಂ

ಸುದ್ದಿ



ಅರಮನೆ ಪುರೋಹಿತರಾದ ಚಂದ್ರಶೇಖರ ಶಾಸ್ತ್ರಿ ಮಾರ್ಗದರ್ಶನದಲ್ಲಿ ಪುತ್ರರಾದ ರವಿಶಂಕರ್ ಮತ್ತು ಉದಯಶಂಕರ್ ಭೈರಪ್ಪ ಅವರ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಲೇಖಕಿ ಸಹನಾ ವಿಜಯಕುಮಾರ್, ಮಾಜಿ ಸಂಸದ ಪ್ರತಾಪ್ ಸಿಂಹ, ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಕೈ ಜೋಡಿಸಿದರು. ಇದಕ್ಕೂ ಮುನ್ನ ಸರಕಾರಿ ಗೌರವದ ಸೂಚಕವಾಗಿ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಭೈರಪ್ಪನವರ ಪಾರ್ಥಿವ ಶರೀರದ ಮೇಲೆ ಹೊದಿಸಲು ರಾಷ್ಟ್ರಧ್ವಜವನ್ನು ಅವರ ಮಕ್ಕಳ ಕೈಗೆ ಹಸ್ತಾಂತರಿಸಿದರು.

ಸಹಸ್ರಾರು ಸಾಹಿತ್ಯಾಭಿಮಾನಿಗಳ ಸಮ್ಮುಖದಲ್ಲಿ ಕನ್ನಡದ ಅಕ್ಷರ ತಪಸ್ವಿಗೆ ವಿದಾಯ
ಸರಕಾರಿ ಗೌರವಾದರಗಳೊಂದಿಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ

ಭೈರಪ್ಪ ಅಕ್ಷರಗಳಲ್ಲಿ ಲೀನ

ಕೆ.ಜೆ.ಲೋಕೇಶ್ ಬಾಬು ಮೈಸೂರು

ಸಾವಿರಾರು ಸಾಹಿತ್ಯಾಭಿಮಾನಿಗಳ ಅಶ್ರುತರ್ಪಣದ ಮಧ್ಯೆ, ಸರಸ್ವತಿ ವರಪುತ್ರ, ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಶುಕ್ರವಾರ ಅಚ್ಚಳಿಯದ ಅಕ್ಷರಗಳಲ್ಲಿ ಲೀನವಾದರು.

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ಮೈಸೂರು ಮಹಾನಗರಪಾಲಿಕೆಗೆ ಸೇರಿದ ರುದ್ರಭೂಮಿಯಲ್ಲಿ ಹೊಯ್ಸಳ ಬ್ರಾಹ್ಮಣ ಸಮುದಾಯದ ವಿಧಿವಿಧಾನಗಳನ್ವಯ ಭೈರಪ್ಪ ಅವರ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಅರಮನೆ ಪುರೋಹಿತರಾದ ಚಂದ್ರಶೇಖರ ಶಾಸ್ತ್ರಿ ನೇತೃತ್ವದ ಏಳು ಜನ ಪುರೋಹಿತರ ತಂಡ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿತು. ಭೈರಪ್ಪ ಅವರ ಪುತ್ರರಾದ ರವಿಶಂಕರ್ ಹಾಗೂ ಉದಯಶಂಕರ್ ತಂದೆಯ ಪಾರ್ಥಿವ ಶರೀರವಿದ್ದ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಅವರೊಂದಿಗೆ ಭೈರಪ್ಪ ಅವರು ಮಗಳ ಸಮಾನರೆಂದು ಭಾವಿಸಿದ್ದ ಸಹನಾ ವಿಜಯಕುಮಾರ್, ಮಾಜಿ ಸಂಸದ ಪ್ರತಾಪ್ ಸಿಂಹ, ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಕೂಡ ಅಗ್ನಿಸ್ಪರ್ಶದಲ್ಲಿ ಜತೆಯಾದರು. ಈ ಮೂಲಕ ಕರುನಾಡಿನ ಸಾಕ್ಷಿಪ್ರಜ್ಞೆ ಭೈರಪ್ಪ ಎಂಬ ಮಹಾನ್

> ಭೈರಪ್ಪ ಅವರಿಗೆ ಕೇಂದ್ರ ಸರಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿಯವರ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಿದ್ದೇನೆ. ರಾಜ್ಯ ಸರಕಾರವೂ ಸಕಲ ಗೌರವಾದರಗಳೊಂದಿಗೆ ಅಂತ್ಯಕ್ರಿಯೆಯ ವ್ಯವಸ್ಥೆ ಮಾಡಿದೆ.
> -ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ಚೇತನ ಪ್ರಕೃತಿಯಲ್ಲಿ ಒಂದಾಯಿತು.

ಸೆ.24ರ ಬುಧವಾರ ವಿಧಿವಶರಾದ ಭೈರಪ್ಪ ಅವರ ಪಾರ್ಥಿವ ಶರೀರವನ್ನು ಗುರುವಾರ ಮಧ್ಯಾಹ್ನದವರಗೆ ಬೆಂಗಳೂರಿನಲ್ಲಿ ಸಾರ್ವಜನಿಕ ದರ್ಶನಕ್ಕೆ ಇರಿಸಿ, ಸಂಜೆ 4 ಗಂಟೆ ವೇಳೆಗೆ ಮೈಸೂರಿಗೆ ತರಲಾಯಿತು. ಮೈಸೂರಿನ ಕಲಾಮಂದಿರ ಅವರಣದಲ್ಲಿರುವ ಕಿಂದರಿಜೋಗಿ ಸ್ಥಳದಲ್ಲಿ ಮೈಸೂರಿನ ನಾಗರಿಕರಿಗೆ ದರ್ಶನದ ಅವಕಾಶ ಕಲ್ಪಿಸಿದ ಬಳಿಕ ಸಂಜೆ 6ರ ನಂತರ ಜೆಎಸ್‌ಎಸ್ ಆಸ್ಪತ್ರೆಯ ಶೈತ್ಯಾಗಾರದಲ್ಲಿ ಇರಿಸಲಾಗಿತ್ತು. ಸೆ.26ರ ಶುಕ್ರವಾರ ಬೆಳಗ್ಗೆ 9 ಗಂಟೆಗೆ ಆಸ್ಪತ್ರೆಯಿಂದ ಕುವೆಂಪುನಗರದ ಮನೆಗೆ ತಂದು ಸಾರ್ವಜನಿಕರ ದರ್ಶನಕ್ಕೆ ಮತ್ತೆ ಅನುವು ಮಾಡಿಕೊಡಲಾಯಿತು. ಸುಮಾರು ಎರಡೂವರೆ ತಾಸು ದರ್ಶನದ ಬಳಿಕ ಪತ್ನಿ, ಮಕ್ಕಳು, ಕುಟುಂಬಸ್ಥರು ಹಾಗೂ ನಿಕಟ ಸಂಬಂಧಿಕರು ಮನೆಯಲ್ಲಿ ಅಂತಿಮ ವಿಧಿವಿಧಾನ ನೆರವೇರಿಸಿದರು. ಬಳಿಕ ಪಾರ್ಥಿವ ಶರೀರವನ್ನು ಪೊಲೀಸ್ ವಾಹನದ ಬೆಂಗಾವಲಿನಲ್ಲಿ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯತ್ತ ತೆಗೆದುಕೊಂಡು ಹೋಗಲಾಯಿತು.

ಸರಕಾರಿ ಗೌರವ: ಭೈರಪ್ಪ ಅವರ ಅಂತಿಮ ವಿಧಿವಿಧಾನದ ವೇಳೆ ಸರಕಾರದ ವತಿಯಿಂದ ಬೆಳಗ್ಗೆ 11.45ರ ವೇಳೆಗೆ ಗೌರವ ವಂದನೆ ಸಲ್ಲಿಸಲಾಯಿತು. ನಗರ ಸಶಸ್ತ್ರ ಮೀಸಲು ಪಡೆಯ ಪೊಲೀಸರ ತಂಡ ಮೊದಲಿಗೆ ರಾಷ್ಟ್ರಗೀತೆ ನುಡಿಸಿ, ತದನಂತರ 11.50ರ ವೇಳೆಗೆ ಕುಶಾಲು ತೋಪು ಹಾರಿಸಿ ಗೌರವ ವಂದನೆ ಸಲ್ಲಿಸಿತು. ನೆರೆದಿದ್ದ ಗಣ್ಯರು ಭೈರಪ್ಪ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛ ಇರಿಸುವ ವೇಳೆ ಶೋಕ ಗೀತೆ ನುಡಿಸಲಾಯಿತು.

ರಾಷ್ಟ್ರಧ್ವಜ ಹಸ್ತಾಂತರ: ಸರಕಾರಿ ಶಿಷ್ಟಾಚಾರದನ್ವಯ ಭೈರಪ್ಪ ಅವರ ಪಾರ್ಥಿವ ಶರೀರದ ಮೇಲೆ ಹೊದಿಸಲಾಗಿದ್ದ ರಾಷ್ಟ್ರಧ್ವಜವನ್ನು ಅಂತಿಮ ವಿಧಿವಿಧಾನಗಳ ನಂತರ ತೆಗೆದ ನಗರ ಸಶಸ್ತ್ರ ಮೀಸಲು ಪಡೆ ಪೊಲೀಸರು 11.55ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಮಹಾದೇವಪ್ಪ ಹಾಗೂ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರಿಗೆ ನೀಡಿದರು. ತದನಂತರ ಇಬ್ಬರೂ ಗಣ್ಯರು ಭೈರಪ್ಪ ಪುತ್ರರಾದ ರವಿಶಂಕರ್ ಹಾಗೂ ಉದಯಶಂಕರ್ ಅವರಿಗೆ ರಾಷ್ಟ್ರಧ್ವಜ ಹಸ್ತಾಂತರ ಮಾಡಿದರು. ನಂತರ 12 ಗಂಟೆಗೆ ಸರಿಯಾಗಿ ಪಾರ್ಥಿವ ಶರೀರವನ್ನು ಮರದ ಕಟ್ಟಿಗೆಗಳಿಂದ ಜೋಡಿಸಲಾಗಿದ್ದ ಚಿತಾಗಾರದ ಮೇಲಕ್ಕೆ ಏರಿಸಲಾಯಿತು. ನಂತರ ಒಂದೆರಡು ನಿಮಿಷಗಳಲ್ಲಿ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಆಗುತ್ತಿದ್ದಂತೆ ಅಭಿಮಾನಿಗಳು 'ಅಮರ್ ರಹೇ, ಅಮರ್ ರಹೇ ಭೈರಪ್ಪಾಜಿ, ಅಮರ್ ರಹೇ' ಎಂಬ ಘೋಷಣೆ ಕೂಗುವ ಅಭಿಮಾನ ಮೆರೆದರು.

ಹುಟ್ಟೂರಿನ ಮಂದಿ ಅಶ್ರುತರ್ಪಣ

ತಮ್ಮೂರಿನ ವರಪುತ್ರನ ಅಂತ್ಯಸಂಸ್ಕಾರದಲ್ಲಿ ಕ್ರಿಯೆಯಲ್ಲಿ ಭಾಗವಹಿಸುವ ಸಲುವಾಗಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ ಹಾಗೂ ನೆರೆಯ ಗ್ರಾಮಗಳಾದ ಗಂಗೇನಹಳ್ಳಿ, ದುಗ್ಗೇನಹಳ್ಳಿ, ಹೊಸಹಳ್ಳಿ, ಯಾಚನಘಟ್ಟ ಗ್ರಾಮಗಳ ಗ್ರಾಮಸ್ಥರು ಮೂರು ಬಸ್ ಗಳಲ್ಲಿ ಸುಮಾರು 150 ಜನ ಆಗಮಿಸಿ ತಮ್ಮೂರಿನ ಆಧುನಿಕ ಭಗೀರಥನ ಅಂತ್ಯಕ್ರಿಯೆ ಕಾರ್ಯದಲ್ಲಿ ಬಾಗಿಯಾಗಿ ಕಂಬನಿ ಮಿಡಿದರು. ಮೈಸೂರಿನ ಕುವೆಂಪುನಗರದ ಉದಯರವಿ ರಸ್ತೆಯಲ್ಲಿ ನಿವಾಸಕ್ಕೆ ಭೈರಪ್ಪ ಅವರ ಪಾರ್ಥಿವ ಶರೀರ ತರಲಿರುವ ಮಾಹಿತಿ ತಿಳಿದ ಸಹಸ್ರಾರು ಮಂದಿ ಮೈಸೂರಿಗರು ಅಂತಿಮ ದರ್ಶನ ಪಡೆದರು. ಭೈರಪ್ಪ ನಿವಾಸದ ಬಳಿ ಸರತಿಯಲ್ಲಿ ಕಾದು ನಿಂತ ಸಾರ್ವಜನಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಅಂತಿಮ ನಮನ ಸಲ್ಲಿಸಿದರು.

ಗಣ್ಯರ ದಂಡು

ಭೈರಪ್ಪ ಅವರ ಅಂತ್ಯಕ್ರಿಯೆ ಸಂದರ್ಭದಲ್ಲಿ ನಾಡಿನ ಗಣ್ಯರ ದಂಡು ನೆರೆದಿತ್ತು. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹಾದೇವಪ್ಪ, ರೇಷ್ಮೆ ಸಚಿವ ಕೆ. ವೆಂಕಟೇಶ್, ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಶಿವಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಡಾ. ಲಕ್ಷ್ಮಿನಾರಾಯಣ್, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ನಿವೃತ್ತ ಪ್ರಾಧ್ಯಾಪಕ ಪ್ರಧಾನ್ ಗುರುದತ್ತ, ಡಾ.ಪದ್ಮಾ ಶೇಖರ್, ಡಾ.ಹೇಮಲತಾ ನಂದೀಶ್, ತೇಜಸ್ವಿನಿ ಅನಂತಕುಮಾರ್ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ಆಗಮಿಸಿದ್ದರು. ಭೈರಪ್ಪ ಅವರ ಅಂತಿಮ ದರ್ಶನದ ವೇಳೆ ವ್ಯಾಪಕ ಪೊಲೀಸ್ ಬಿಗಿಬಂದೋಬಸ್ತ್ ಮಾಡಲಾಗಿತ್ತು.

ಕಾಂತಾರಗೆ ಮೈಸೂರು ಸಾಬೂನಿನ ಘಮ

ಬೆಂಗಳೂರು: ಬಹು ನಿರೀಕ್ಷಿತ ಕಾಂತಾರ ಚಾಪ್ಟರ್ 1 ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಇದೀಗ ಈ ಸಿನಿಮಾಗೆ

ಕೆಎಸ್‌ಡಿಎಲ್ ಸಹಪ್ರಾಯೋಜಕತ್ವ ನೀಡಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ. ಕನ್ನಡ ಚಿತ್ರರಂಗ ಚಂದನವನ ಎಂದೇ ಹೆಸರಾಗಿದೆ. ಹಾಗೆಯೇ ಕೆಎಸ್ ಡಿಎಲ್ ಸಂಸ್ಥೆ ಗಂಧದ ಸಾಬೂನು ಮತ್ತು ಗಂಧದ ಎಣ್ಣೆಗೆ ಹೆಸರಾಗಿದೆ. ಈಗ ಸಂಸ್ಥೆ ಮತ್ತು ಸ್ಯಾಂಡಲ್‌ವುಡ್ ಚಿತ್ರತಂಡದ ನಡುವೆ ಒಪ್ಪಂದವಾಗಿದ್ದು, ಚಿತ್ರತಂಡ ಕೆಎಸ್‌ಡಿಎಲ್ ಉತ್ಪನ್ನಕ್ಕೆ ಪ್ರಚಾರ ನೀಡಲಿದೆ.

ರಾಜು ಕಾಗೆ ನಿಗಮ ಅಧ್ಯಕ್ಷತೆ ಬದಲಿಲ್ಲ

ಬೆಂಗಳೂರು: ನಿಗಮ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷಗಳಿಗೆ ಸರಕಾರ ಅಧಿಕೃತ ಮುದ್ರೆ ಬಿದ್ದಿದೆ. ಎಐಸಿಸಿ 39



ನಿಗಮ ಮಂಡಳಿಗಳಿಗೆ ಅಧ್ಯಕ್ಷರ ನೇಮಕಕ್ಕೆ ಪಟ್ಟಿ ಕಳುಹಿಸಿದ್ದರೂ, ಸಿಎಂ ಕಚೇರಿ 34 ಹೆಸರಿಗೆ ಅಂಕಿತ ಹಾಕಿದೆ. ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ರಾಜು ಕಾಗೆ ಮುಂದುವರಿಯಲಿದ್ದು, ಅರುಣ್ ಕುಮಾರ್ ಪಾಟೀಲ್ ಅವರನ್ನು ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ರಷ್ಯಾದ ಮಹಿಳೆ ಮರಳಿ ಸ್ವದೇಶಕ್ಕೆ

ಬೆಂಗಳೂರು: ಚಿಕ್ಕ ಚಿಕ್ಕ ಮಕ್ಕಳೊಂದಿಗೆ ಗೋಕರ್ಣದ ರಾಮತೀರ್ಥ ಬೆಟ್ಟದ ನಡುವಿನ ಗುಹೆಯೊಂದರಲ್ಲಿ

ವಾಸವಾಗಿದ್ದ ರಷ್ಯಾ ಮಹಿಳೆ ನಿನಾ ಕುಟಿನಾ ಮತ್ತು ಇಬ್ಬರು ಮಕ್ಕಳನ್ನು ಅವರ ದೇಶಕ್ಕೆ ಕಳುಹಿಸಲು ಹೈಕೋರ್ಟ್ ಅನುಮತಿ ನೀಡಿದೆ. ರಷ್ಯಾಕ್ಕೆ ಮರಳುವ ಬಗ್ಗೆ ಮಹಿಳೆಯ ಇಚ್ಛೆ ಪರಿಗಣಿಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರ ಹೈಕೋರ್ಟ್ ಪೀಠ, ಮಹಿಳೆಗೆ ಅಗತ್ಯ ದಾಖಲಾತಿ ಒದಗಿಸಲು ಕೇಂದ್ರ ಸರಕಾರಕ್ಕೆ ಸೂಚಿಸಿದೆ.

ಬಿಎಸ್ಸೆನ್ನೆಲ್ 4ಜಿ ನೆಟ್‌ವರ್ಕ್ ಶುರು

ದೆಹಲಿ: ಸರಕಾರಿ ಸ್ವಾಮ್ಯದ ಭಾರತ ಸಂಚಾರ ನಿಗಮ ನಿಯಮಿತದ (ಬಿಎಸ್‌ಎನ್‌ಎಲ್) ಸ್ವದೇಶಿ 4ಜಿ ನೆಟ್‌ವರ್ಕ್‌ಗೆ ಶನಿವಾರ ಪ್ರಧಾನಿ ಮೋದಿ ಚಾಲನೆ ನೀಡಲಿದ್ದಾರೆ. ಭಾರತದ ಸ್ವದೇಶಿ ನಿರ್ಮಿತ ನೆಟ್‌ವರ್ಕ್ ಕ್ಲೌಡ್ ಆಧಾರಿತವಾಗಿದ್ದು, 5ಗೆಗೆ ಸರಾಗವಾಗಿ ಅಪ್‌ಗ್ರೇಡ್ ಮಾಡಬ ಹುದು ಎಂದು ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ. ಬಿಎಸ್ಸೆನ್ನೆಲ್‌ನ 4ಜಿ ಸ್ಟ್ಯಾಕ್ ದೇಶದ ಸುಮಾರು 98,000 ಪ್ರದೇಶಗಳಲ್ಲಿ ಬಿಡುಗಡೆ ಆಗಲಿದೆ.

ಮಿಗ್-21 ಫೈಟರ್ ಜೆಟ್ ಯುಗಾಂತ್ಯ

ದೆಹಲಿ: ಸುಮಾರು ಆರು ದಶಕಗಳ ಸುದೀರ್ಘ ಸೇವೆಯನ್ನು ಸಲ್ಲಿಸಿರುವ ಭಾರತೀಯ ವಾಯುಪಡೆಯ



ಮಿಗ್-21 ಫೈಟರ್ ಜೆಟ್ ಶುಕ್ರವಾರ ತೆರೆಮರೆಗೆ ಸರಿದಿದೆ. 1963ರಲ್ಲಿ ಭಾರತೀಯ ವಾಯುಪಡೆಗೆ ಸೇರಿದ್ದ ಮಿಗ್-21 ಫೈಟರ್ ಜೆಟ್ ಸೆಪ್ಟೆಂಬರ್ ವೇಳೆ ಯುಗಾಂತ್ಯವಾಗಲಿದೆ ಎಂದು ಕಳೆದ ಜುಲೈ ತಿಂಗಳಲ್ಲಿ ಘೋಷಣೆ ಹೊರಬಿದ್ದಿತ್ತು. ವಾಯುಪಡೆ ಚಂಡೀಗಢದಲ್ಲಿ ನಡೆದ ಮಿಗ್-21 ಫೈಟರ್ ಜೆಟ್‌ನ ವಿದಾಯ ಸಮಾರಂಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಪಾಲ್ಗೊಂಡಿದ್ದರು.

ಡಿ.ಸಿಗಳ ಜತೆ ವಿಡಿಯೊ ಕಾನ್ಫರೆನ್ಸ್: ನಿತ್ಯ ಶೇ.10 ಪ್ರಗತಿಗೆ ತಾಕೀತು

ಸಮೀಕ್ಷೆ ತ್ವರಿತಕ್ಕೆ ಸಿಎಂ ಆದೇಶ

ಬೆಂಗಳೂರು: ತೀವ್ರ ವಿವಾದ, ಗೊಂದಲಕ್ಕೆ ಕಾರಣವಾಗಿರುವ ಜಾತಿ ಗಣತಿಗೆ ವೇಗ ನೀಡಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಿತ್ಯ ಶೇ.10ರಷ್ಟು ಪ್ರಗತಿಯನ್ನು ಸಾಧಿಸಬೇಕು ಎಂದು ಕಟ್ಟಾಜ್ಞೆ ನೀಡಿದ್ದಾರೆ. ಜತೆಗೆ ಯಾವುದೇ ಕಾರಣಕ್ಕೂ ಸಮೀಕ್ಷಾ ಅವಧಿಯ ವಿಸ್ತರಣೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭವಾಗಿ ನಾಲ್ಕು ದಿನ ಕಳೆಯುತ್ತಾ ಬಂದರೂ, ರಾಜ್ಯದ ಹಲವು ಭಾಗದಲ್ಲಿ ಸಮೀಕ್ಷೆಯಲ್ಲಿ ಹಲವು ಲೋಪಗಳಿವೆ ಎನ್ನುವ ಆರೋಪ ಕೇಳಿಬಂದಿದೆ. ಇದರೊಂದಿಗೆ ಆಯೋಗ ಅಭಿವೃದ್ಧಿಪಡಿಸಿರುವ ಆ್ಯಪ್‌ನಲ್ಲಿ ಹಲವು ಗೊಂದಲಗಳಿದ್ದು, ಜಿಯೋ ಟ್ಯಾಗಿಂಗ್‌ನಲ್ಲಿ ತೋರಿಸುವ ಸ್ಥಳದಲ್ಲಿ ಮನೆಗಳೇ ಇಲ್ಲ ಎನ್ನುವ ಆರೋಪ ಸೇರಿದಂತೆ ಹಲವು ಗೊಂದಲಗಳಿದ್ದವು. ಈ ಎಲ್ಲ ಗೊಂದಲಗಳಿಗೆ ಪರಿಹಾರ ಹಾಗೂ ಪ್ರಗತಿ ಪರಿಶೀಲನೆಗೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ನಡೆಸಿ, ಮಾಹಿತಿ ಪಡೆದರು.

ಸಭೆಯಲ್ಲಿ ಹಲವು ಜಿಲ್ಲೆಗಳಲ್ಲಿ ಸಮೀಕ್ಷೆಯ ಕಾರ್ಯ ನಿರೀಕ್ಷಿತ ಪ್ರಮಾಣದಲ್ಲಿ ವೇಗ ಪಡೆದಿಲ್ಲ. ಆದರೆ ಇಂದಿನಿಂದ ವೇಗ ಸಿಗಬೇಕು. ನಿಗದಿತ ಸಮಯದಲ್ಲಿ ಸಮೀಕ್ಷೆ ಪೂರ್ಣಗೊಳ್ಳಬೇಕು ಎಂದು ಸೂಚನೆ ನೀಡಿದರು. ಶಿಕ್ಷಕರು ಹೆಚ್ಚುವರಿ ಭತ್ಯೆ ನೀಡುತ್ತಾರೋ ಇಲ್ಲವೋ ಎನ್ನುವ ಗೊಂದಲದಲ್ಲಿ ಸಮೀಕ್ಷೆಗೆ ಹಿಂದೇಟು ಹಾಕುತ್ತಿದ್ದಾರೆ.

→ 8

> ಸಮೀಕ್ಷೆ ಕಾರ್ಯ ರಾಜ್ಯಾದ್ಯಂತ ಆರಂಭವಾಗಿದ್ದು, ಆರಂಭದಲ್ಲಿ ಕೆಲವು ತಾಂತ್ರಿಕ ತೊಂದರೆಗಳ ಕಾರಣ ಸಮೀಕ್ಷೆ ನಿಧಾನವಾಗಿತ್ತು. ಈಗ ಎಲ್ಲಾ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಇಂದಿನಿಂದ ಸಮೀಕ್ಷೆ ಕಾರ್ಯವನ್ನು ಚುರುಕುಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ. ಸಮೀಕ್ಷೆ ಕಾರ್ಯಕ್ಕೆ ಯಾವುದೇ ತಾಂತ್ರಿಕ ತೊಂದರೆಗಳು ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. ತಾಂತ್ರಿಕ ತೊಂದರೆಗಳು ಎದುರಾದರೆ ತಕ್ಷಣ ಅದನ್ನು ಬಗೆಹರಿಸಲು ಕ್ರಮ ಕೈಗೊಳ್ಳಬೇಕು.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

> ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಸಂದರ್ಭದಲ್ಲಿ ಹೈಕೋರ್ಟ್ ನೀಡಿರುವ ನಿರ್ದೇಶನಗಳನ್ನು ತಪ್ಪದೇ ಪಾಲಿಸುತ್ತೇವೆ. ಸಮೀಕ್ಷೆಯಲ್ಲಿ ಭಾಗವಹಿಸಿ ಮಾಹಿತಿ ನೀಡುವಂತೆ ಯಾರನ್ನೂ ಬಲವಂತ ಮಾಡಬಾರದೆಂದು ನ್ಯಾಯಾಲಯ ಆದೇಶಿಸಿದೆ. ನಾವು ಮೊದಲಿನಿಂದಲೂ ಇದನ್ನೆ ಹೇಳುತ್ತಿದ್ದೇವೆ. ಇಚ್ಛೆ ಇರುವವರು ಮಾಹಿತಿ ನೀಡಬಹುದು, ನೀಡದೇ ಇದ್ದವರನ್ನು ಬಲವಂತ ಪಡಿಸುವುದಿಲ್ಲ. ಹೀಗೆಯೇ ಬರೆಸಬೇಕೆಂದು ನಾವು ಯಾರ ಮೇಲೂ ಒತ್ತಡ ಹಾಕುವುದಿಲ್ಲ.
> -ಶಿವರಾಜ ತಂಗಡಗಿ, ಹಿಂದುಳಿದ ವರ್ಗಗಳ ಆಯೋಗದ ಸಚಿವ

ರಾಜಧಾನಿಯಲ್ಲಿ ಇಂದಿನಿಂದ ಸಮೀಕ್ಷೆ

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಸಮೀಕ್ಷೆ ಕಾರ್ಯ ಇಂದಿನಿಂದ ಆರಂಭವಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 50 ಲಕ್ಷ ಮನೆಗಳಿದ್ದು, ಆದಷ್ಟು ಬೇಗನೆ ಗಣತಿ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕು. ರಾಜ್ಯದ ಪ್ರತಿಯೊಂದು ಕುಟುಂಬಗಳ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಬೇಕು. ಯಾವುದೇ ಕುಟುಂಬ ಸಮೀಕ್ಷೆಯಿಂದ ಹೊರಗುಳಿಯದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಗಿದೆ.

ಎಸ್‌ಐಟಿ ರಚಿಸಿದ ಕಾರಣಕ್ಕೆ ಸತ್ಯ ಹೊರಗೆ ಬರುತ್ತಿದೆ: ಸರಕಾರಕ್ಕೆ ಕೃತಜ್ಞತೆ

ನಮ್ಮ ಮೇಲೆ ಏಕಿಷ್ಟು ದ್ವೇಷ: ಹೆಗ್ಗಡೆ ಭಾವುಕ

ಧರ್ಮಸ್ಥಳ: ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಶವ ಹೂತಿಟ್ಟಿದ್ದಾರೆ ಎನ್ನುವ ಆರೋಪದ ತನಿಖೆ

ನಡೆಸಲು ವಿಶೇಷ ತನಿಖಾ ತಂಡ ರಚಿಸಿದ ರಾಜ್ಯ ಸರಕಾರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಕೃತಜ್ಞತೆ ಸಲ್ಲಿಸಿದ್ದಾರೆ. 'ಎಸ್‌ಐಟಿ ರಚಿಸಿದ ಕಾರಣಕ್ಕೆ ಸತ್ಯ ಹೊರಗೆ ಬರುತ್ತಿದೆ. ಆದರೆ ಈಗಲೂ ನನಗೆ ಅರ್ಥವಾಗದ ವಿಚಾರವೆಂದರೆ ನಮ್ಮ ಮೇಲೆ ಯಾಕಿಷ್ಟು ದ್ವೇಷ, ನಾವು ಇಲ್ಲಿ ನಿಮಿತ್ತ ಮಾತ್ರ' ಎಂದು ಹೇಳಿದ್ದಾರೆ.

ಕೋವಿಡ್ ನಂತರದ ದಿನಗಳಲ್ಲಿ ನಾನು ಅನೇಕ ಪುಸ್ತಕಗಳನ್ನು ಓದುತ್ತಿದ್ದೇನೆ. ಸಿದ್ದಗಂಗಾ ಶ್ರೀಗಳ ಹಲವು ಪುಸ್ತಕಗಳನ್ನು ನಾನು ಓದಿದ್ದೇನೆ. ನಮ್ಮನ್ನ ಹೊಗಳಿದ್ದೀರಿ. ಆದರೆ, ನಮ್ಮ ಸೇವೆ, ಧರ್ಮ ನಮಗೆ ಮುಖ್ಯ ಅಂತಾ ಇದೆ. ಸಿದ್ದಗಂಗಾ ಶ್ರೀಗಳು 108 ವರ್ಷ ಬದುಕಿದವರು ಹೇಳಿದ ಮಾತು ಇದು. ಶತ್ರುತ್ವ ಯಾಕೆ ಬಂತು ಅಂತ ನಮಗೆ ಗೊತ್ತಿಲ್ಲ. ಇಷ್ಟು ಹಗೆತನ, ಅಪವಾದ ಯಾಕೆ ಬಂತು ಅಂತನೂ ಗೊತ್ತಿಲ್ಲ. ನಾವು ಸೇವೆ ಮಾಡ್ತೇವೆ, ಆದರೆ ಸೇವೆ ಪ್ರಚಾರದ ವಸ್ತುವಲ್ಲ ಎಂದು ಹೆಗ್ಗಡೆಯವರು ಹೇಳಿದ್ದಾರೆ.

"ಇಷ್ಟು ವರ್ಷ ನಾವು ಆರೋಗ್ಯವಾಗಿರಲು ನಮ್ಮ ನಿಸ್ವಾರ್ಥ ಸೇವೆಯೇ ಕಾರಣ. ನಮ್ಮ ಎಲ್ಲಾ ಕಾರ್ಯಕ್ರಮಗಳನ್ನು ನೀವು ಎಲ್ಲರೂ ಗಮನಿಸಿದ್ದೀರಿ. ನಾವು ಇಲ್ಲಿ ನಿಮಿತ್ತ ಮಾತ್ರ. ಆದರೆ ಮುಂದುವರಿಸಿಕೊಂಡು ಹೋಗಿದ್ದು ಅದಕ್ಕೆ ಸಂಬಂಧಪಟ್ಟ ಇಲಾಖೆಯವರು. ಕೆಲವರು ಪ್ರೀತಿಯಲ್ಲಿ ಟೀಕೆ ಮಾಡಿದ್ದರು.

→ 8

ನಿಲ್ಲದ ಡೊನಾಲ್ಡ್ ಟ್ರಂಪ್ ಸುಂಕದೇಟು

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕ ಸಮರ ಮುಂದುವರಿಸಿದ್ದು ಅಕ್ಟೋಬರ್ ಒಂದರಿಂದ ಬ್ರ್ಯಾಂಡೆಡ್

ಮತ್ತು ಪೇಟೆಂಟ್ ಪಡೆದ ಔಷಧಗಳ ಆಮದಿನ ಮೇಲೆ ಶೇ. 100ರಷ್ಟು ಸುಂಕ ವಿಧಿಸಲಾಗುವುದು ಎಂದು ಘೋಷಿಸಿದ್ದಾರೆ.

ಟ್ರಂಪ್ ಅವರ ಈ ನಿರ್ಧಾರದಿಂದಾಗಿ ಭಾರತದ ಔಷಧ ವಲಯದ ಮೇಲೆ ಗಂಭೀರ ಪರಿಣಾಮ ಗಳು ಬೀರಬಹುದು ಎಂಬ ಆತಂಕ ಎದು ರಾಗಿದೆ. ಇದರ ಪ್ರತಿ ಕ್ರಿಯೆ ಎಂಬಂತೆ ಸತತ 6ನೇ ದಿನವೂ ಷೇರುಪೇಟೆ ಕುಸಿದಿದೆ. ಔಷಧಗಳ ಮೇಲೆ ಅಲ್ಲದೆ ಅಡುಗೆ ಮನೆ ಕಿಚನ್ ಕ್ಯಾಬಿನ್‌ಗಳು ಮತ್ತು ಸ್ನಾನ ಗೃಹದ ವ್ಯಾನಿಟಿಗಳ ಮೇಲೆ ಶೇಕಡಾ 50, ಅಪ್ಹೋಲ್ಸ್ಟರ್ಡ್ ಪೀಠೋ ಪಕರಣಗಳ ಮೇಲೆ ಶೇಕಡಾ 30 ಮತ್ತು ಭಾರೀ ಟ್ರಕ್‌ಗಳ ಮೇಲೆ ಶೇಕಡಾ 25ರಷ್ಟು ಆಮದು ತೆರಿಗೆಯನ್ನು ವಿಧಿಸುವುದಾಗಿ ಟ್ರಂಪ್ ಹೇಳಿದ್ದಾರೆ. ಟ್ರೂತ್ ಸೋಶಿಯಲ್‌ನಲ್ಲಿ ಟ್ರಂಪ್, ಅಮೆರಿಕದಲ್ಲಿ ಉತ್ಪಾದನಾ ಘಟಕಗಳನ್ನು ನಿರ್ಮಿಸುತ್ತಿರುವ ಕಂಪನಿಗಳಿಗೆ ಔಷಧ ಸುಂಕಗಳು ಅನ್ವಯಿ ಸುವುದಿಲ್ಲ ಎಂದು ಹೇಳಿ ದ್ದಾರೆ. 2024 ರಲ್ಲಿ, ಜನಗಣತಿ ಬ್ಯೂರೋ ಪ್ರಕಾರ, ಅಮೆರಿಕ ಸುಮಾರು 233 ಶತಕೋಟಿ ಡಾಲರ್ ಔಷಧ ಮತ್ತು ಔಷಧೀಯ ಉತ್ಪನ್ನಗಳನ್ನು ಆಮದು ಮಾಡಿಕೊಂಡಿದೆ.

ಪೇದೆ, ಎಸ್‌ಐ ಹುದ್ದೆಗೆ ವಯೋಮಿತಿ ಸಡಿಲ

ಬೆಂಗಳೂರು: ಪೊಲೀಸ್ ಹುದ್ದೆಯ ಆಕಾಂಕ್ಷಿಗಳಿಗೆ ರಾಜ್ಯ ಗೃಹ ಇಲಾಖೆಯು ದಸರಾ ಹಬ್ಬಕ್ಕೆ ಸಿಹಿ ಸುದ್ದಿ ನೀಡಿದ್ದು, ಎಸ್‌ಐ ಮತ್ತು ಕಾನ್‌ಸ್ಟೇಬಲ್ ಹುದ್ದೆಗಳಿಗೆ ಗರಿಷ್ಠ 2 ವರ್ಷ ವಯೋಮಿತಿ ಹೆಚ್ಚಿಸಲು ನಿರ್ಧರಿಸಿದೆ. ಪ್ರಸ್ತುತ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಅಭ್ಯರ್ಥಿಗಳಿಗೆ 27 ವರ್ಷ, ಸಾಮಾನ್ಯ ವರ್ಗಕ್ಕೆ 25 ವರ್ಷ ಹಾಗೂ ಪಿಎಸ್‌ಐ ವೃಂದದ ಹುದ್ದೆಗಳ ನೇಮಕಾತಿಗೆ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಅಭ್ಯರ್ಥಿಗಳಿಗೆ 30 ವರ್ಷ, ಸಾಮಾನ್ಯ ವರ್ಗಕ್ಕೆ 28 ವರ್ಷ ಗರಿಷ್ಠ ವಯೋಮಿತಿ ಇದೆ. ಇದನ್ನು ಕ್ರಮವಾಗಿ ಎರಡು ವರ್ಷ ಹೆಚ್ಚಿಸಲು ಗೃಹ ಇಲಾಖೆ ಮುಂದಾಗಿದೆ.

1931-2025



ಹುಬ್ಬಳ್ಳಿ
ವಿಶ್ವವಾಣಿ
27.09.2025
ಶನಿವಾರ
vishwavani.news

ಸರಸ್ವತಿ ಪುತ್ರನ ಪರ್ವಾಂತ್ಯ

ಕಂಬನಿ ಮಿಡಿದ ಡಾ. ಲಕ್ಷ್ಮೀ ನಾರಾಯಣ್

100 ವರ್ಷ ಬದುಕಬೇಕೆಂಬ ಆಸೆ ಹೊಂದಿದ್ದ ಭೈರಪ್ಪ

ಕಡೆಗಾಲದಲ್ಲಿ ವೈದ್ಯರ ಬಳಿ ಹೇಳಿದ್ದ ಮಾತು

ಕನ್ನಡ ಸಾಹಿತ್ಯದ ದಿಗ್ಗಜ ಎಸ್.ಎಲ್. ಭೈರಪ್ಪ ಅವರ ನಿಧನವು ಸಾಹಿತ್ಯ ಲೋಕಕ್ಕೆ ತುಂಬ ಲಾರದ ನಷ್ಟ ಆಗಿದೆ. ಅವರಿಗೆ ಕಳೆದ 25 ವರ್ಷಗಳಿಂದ ಚಿಕಿತ್ಸೆ ನೀಡುತ್ತಿದ್ದ ವೈದ್ಯ ಡಾ. ಲಕ್ಷ್ಮೀ ನಾರಾಯಣ್, ಭೈರಪ್ಪ ಅವರ ಮೈಸೂರಿನ ಕುವೆಂಪು ನಗರದ ನಿವಾಸದ ಮುಂದೆ ಭಾವುಕರಾಗಿ ಅವರ ಆಸೆಗಳನ್ನು ಹಂಚಿಕೊಂಡರು. ಭೈರಪ್ಪನವರು ಸದಾ ಸಾಹಿತ್ಯ ಕುರಿತು ಚರ್ಚೆ ನಡೆಸುತ್ತಿದ್ದರು ಎಂದು ಹೇಳಿದ್ದಾರೆ. ನನ್ನ ಬಳಿ ಚೆಕಪ್‌ಗೆ ಬಂದಾಗಲೆಲ್ಲಾ ಸಾಹಿತ್ಯದ ಬಗ್ಗೆಯೇ ಮಾತನಾಡುತ್ತಿದ್ದರು ಎಂದು ಭೈರಪ್ಪ ಅವರನ್ನು ನೆನೆದು ಕಂಬನಿ ಮಿಡಿದಿದ್ದಾರೆ.

ಭೈರಪ್ಪ ಅವರು ವೈದ್ಯರ ಬಳಿ ಹೋದಾಗಲೆಲ್ಲಾ ಸಾಹಿತ್ಯದ ಬಗ್ಗೆ ಮಾತನಾಡುತ್ತಿದ್ದ ಅಷ್ಟೇ ಅಲ್ಲದೇ ತಮ್ಮ ಆಸೆಯನ್ನು ಹೇಳಿ ಕೊಳ್ಳುತ್ತಿದ್ದರು ಎಂದು ವೈದ್ಯ ಡಾ. ಲಕ್ಷ್ಮೀ ನಾರಾಯಣ್ ಹೇಳಿದ್ದಾರೆ. ಇದೀಗ ಅವರ ಅಗಲಿಕೆ ತುಂಬ ನೋವು ತಂದಿದೆ ಎಂದಿದ್ದಾರೆ.

ಡಾ. ಲಕ್ಷ್ಮೀ ನಾರಾಯಣ್ ಬಳಿ ಸಾಹಿತಿ ಭೈರಪ್ಪರವರು ನಾನು 100 ವರ್ಷಗಳ ಕಾಲ ಬದುಕಬೇಕೆಂದು ಹೆಬ್ಬಯಕೆ ಹೊಂದಿದ್ದರು ಎಂದು ಹೇಳಿದ್ದಾರೆ. ಭೈರಪ್ಪ ಅವರೊಂದಿ ಗಿನ ಸಂಬಂಧವು ಕೇವಲ ವೈದ್ಯ-ರೋಗಿಯದ್ದಲ್ಲ, ಆಳವಾದ ಸ್ನೇಹದ್ದಾಗಿತ್ತು ಎಂದು ನೆನೆದು ಕಣ್ಣೀರಾಕಿದ್ದಾರೆ. ಪ್ರತಿ ವರ್ಷ ನಿಮ್ಮ ತೋಟ ದಲ್ಲಿ ಬೆಳೆದ ಮಾವಿನ ಹಣ್ಣನ್ನು ತಂದು ಕೊಡಿ ಎಂದು ಹೇಳುತ್ತಿದ್ದರು. ನನ್ನನ್ನು ಯುದ್ದಕ್ಕೆ ಹೋಗುವ ಯೋಧನಂತೆ ತಯಾರಿ ಮಾಡಿ ಎಂದೂ ಹೇಳುತ್ತಿದ್ದರು ಎಂದು ಡಾ. ನಾರಾಯಣ ಸ್ಮರಿಸಿದರು.

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ:08174-232201 ಫ್ಯಾಕ್ಸ್ ನಂ:08174-233274
ಈ ಮೇಲ್ ವಿಳಾಸ: itstaff_ulb_arasikere@yahoo.com
ವೆಬ್‌ಸೈಟ್ ವಿಳಾಸ: www.arasiketown.mrc.gov.in
ನಂ:ನ.ಸ.ಅ/ಘ.ವ.ನಿ/ಎಸ್.ಬಿ.ಎಂ(ನ)-2.0/ಅಧ್ಯಯನ ಪ್ರವಾಸ/02/2025-26 ದಿನಾಂಕ: 24.09.2025

ಟೆಂಡರ್ ಪ್ರಕಟಣೆ (ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ ಎಸ್.ಬಿ.ಎಂ(ನ)-2.0ರ ಯೋಜನೆಯಡಿಯಲ್ಲಿ ಸಾಮರ್ಥ್ಯಾಭಿವೃದ್ಧಿ ಘಟಕದಡಿ ಸ್ವಚ್ಛತೆ ಮತ್ತು ನೈರ್ಮಲ್ಯದ ಕುರಿತಾದ ಘನತ್ಯಾಜ್ಯ ವಸ್ತು ನಿರ್ವಹಣೆ ಸಂಬಂಧಿಸಿದಂತೆ ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ ಸಾಮರ್ಥ್ಯಾಭಿವೃದ್ಧಿ ಯಡಿ ಅರಸೀಕೆರೆ ನಗರದಿಂದ ಗೋವಾ ರಾಜ್ಯಕ್ಕೆ ಅಧ್ಯಯನ ಪ್ರವಾಸ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999-2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document – KC-2 ರ ಪ್ರಕಾರ ಎರಡು ಲೋಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್:- http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಕ್ರಸಂ.1)ವಿವರ DMA/2025-26/SE6271 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) 23.60 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಅರಸೀಕೆರೆ/ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಅರಸೀಕೆರೆ ಈ ಕಛೇರಿಯಲ್ಲಿ ಪಡೆಯಬಹುದು.

ಸಹಿ/- ಅಧ್ಯಕ್ಷರು, ನಗರಸಭೆ, ಅರಸೀಕೆರೆ.
ಸಹಿ/- ಪೌರಾಯುಕ್ತರು, ನಗರಸಭೆ, ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/622/ಕೆಎಸ್ಎಂಸಿಎ/2025-26

ಪುರಸಭೆ ಕಾರ್ಯಾಲಯ ನವಲಗುಂದ
(ಜಿಲ್ಲೆ: ಧಾರವಾಡ, ರಾಜ್ಯ: ಕರ್ನಾಟಕ)
ಸಂಖ್ಯೆ: ಪುಸನ/ಅಮೃತ್-2.0/ಟೆಂಡರ್/ವಹಿ/2025-26 ದಿನಾಂಕ: 26-09-2025

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನವಲಗುಂದ ಪುರಸಭೆಯಿಂದ ಅಮೃತ್-2.0 ಅನುದಾನದಲ್ಲಿ ಕನಿಷ್ಠ ಮೊತ್ತ **63.27** ಲಕ್ಷ ಗರಿಷ್ಠ ಮೊತ್ತ **63.27** ಲಕ್ಷಗಳು ಇಂಡೆಂಟ್ ನಂ. **DMA/2025-26/OW/WORK_INDENT48556,** ನೇದ್ದರ **1 ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲು** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಡ್‌ನ ನಿಯಮದನ್ವಯ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **13-10-2025** ರಂದು ನಿಗದಿ ಪಡಿಸಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಮುಖಾಂತರ ದ್ವಿ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.
ಸೂಚನೆ: ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ಸಹಿ/- (ಎಸ್.ಎಫ್. ತಡಸಿ) ಅಧ್ಯಕ್ಷರು ಪುರಸಭೆ ನವಲಗುಂದ
ಸಹಿ/- (ಎಸ್.ಪಿ. ಪೂಜಾರ) ಮುಖ್ಯಾಧಿಕಾರಿ ಪುರಸಭೆ ನವಲಗುಂದ
ವಾಸಾಸಂಇ/ಧಾರವಾಡ/714/ಅಡ್ವರ್ಟೋರ್/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ. 3 ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.
ಫೋನ್/ಫ್ಯಾಕ್ಸ್:08192-200255 Email:eeknnlmbr@gmail.com

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.3 ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು ಇಂದ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಲೆಕ್ಕ ಶೀರ್ಷಿಕೆ 4701-ಭದ್ರಾ & 2700 R & M ಅಡಿಗಳಲ್ಲಿನ ಕಾಮಗಾರಿಗಳಿಗೆ ದ್ವಿ ಲಕೋಟೆ & ಏಕ ಲಕೋಟೆ ಪದ್ಧತಿಯಡಿ ಕೆಪಿಪಿಪಿ-ಪೋರ್ಟ್‌ಲ್ ಮುಖಾಂತರ ಟೆಂಡರ್‌ಗಳನ್ನು ಅಹ್ವಾನಿಸಲಾಗಿದ್ದು. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕೆಪಿಪಿಪಿ-ಪೋರ್ಟ್‌ಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ ದಿನಾಂಕ: 25.09.2025 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: 10.10.2025ರ ಸಂಜೆ 4.30ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ಮತ್ತು ಪ್ರೀ ಬಿಡ್ ಸಭೆಯನ್ನು ದಿನಾಂಕ: 30.09.2025 ರಂದು 12.00 ಘಂಟೆಗೆ ವಿಭಾಗ ಕಛೇರಿಯ ವಿಳಾಸದಲ್ಲಿ ಸಂಪರ್ಕಿಸಬಹುದಾಗಿರುತ್ತದೆ ಹಾಗೂ ತಾಂತ್ರಿಕ & ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 13.10.2025 ರಂದು ಸಂಜೆ 4.35ಘಂಟೆಗೆ ಆಗಿರುತ್ತದೆ.

ಒಟ್ಟು ಕಾಮಗಾರಿ ಸಂಖ್ಯೆ :- 10 ಸಂಖ್ಯೆಗಳು.

1) KNNL/2024-25/BR/W_INDENT2161/CALL-6 ರೂ. 74.81 ಲಕ್ಷಗಳು
2) KNNL/2024-25/BR/W_INDENT2570/CALL-5 ರೂ. 99.89 ಲಕ್ಷಗಳು
3) KNNL/2024-25/BR/W_INDENT2577/CALL-5 ರೂ. 99.90 ಲಕ್ಷಗಳು
4) KNNL/2025-26/ IW/W_INDENT2947/CALL-3 ರೂ. 199.23 ಲಕ್ಷಗಳು
5) KNNL/2025-26/ CN /W_INDENT2949/CALL-3 ರೂ. 199.17 ಲಕ್ಷಗಳು
6) KNNL/2024-25/BR/W_INDENT2586/CALL-5 ರೂ. 97.96 ಲಕ್ಷಗಳು
7) KNNL/2024-25/IW/W_INDENT2579/CALL-4 ರೂ. 97.99 ಲಕ್ಷಗಳು
8) KNNL/2024-25/BR/ W_INDENT2582/CALL-5 ರೂ. 78.34 ಲಕ್ಷಗಳು
9) KNNL/2025-26/IW/ W_INDENT3117/CALL-2 ರೂ. 48.98 ಲಕ್ಷಗಳು
10) KNNL/2025-26/SE0187/CALL-2 ರೂ. 173.86 ಲಕ್ಷಗಳು

ಈ ಮೇಲ್ಕಂಡ ಎಲ್ಲಾ ಕಾಮಗಾರಿಗಳಿಗೆ (ಜಿ.ಎಸ್.ಟಿ. ಒಳಗೊಂಡಂತೆ)
ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ-ಪೋರ್ಟ್‌ಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/381/ಕೆಎಸ್ಎಂಸಿಎ/2025-26
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.3, ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.

ಕೇಂದ್ರ ಸಚಿವ ಜೋಶಿ ಸ್ಮರಣೆ | ದೇಶಾದ್ಯಂತ ಅಪಾರ ಅಭಿಮಾನಿಗಳನ್ನು ಹೊಂದಿದ್ದ ಅಪರೂಪದ ಸಾಹಿತಿ

ಸಾಹಿತಿ ಭೈರಪ್ಪ ಅತ್ಯಂತ ಸರಳಾತಿ ಸರಳ ವ್ಯಕ್ತಿತ್ವದವರು

ನಾಡಿನ ಹೆಸರಾಂತ ಸಾಹಿತಿ, ಸರಸ್ವತಿ ಸಮ್ಮಾನ್, ಪದ್ಮಶ್ರೀ ಪುರಸ್ಕೃತ ಕಾದಂಬರಿಕಾರ, ಸಂಶೋಧಕರಾದ ಡಾ.ಎಸ್.ಎಲ್. ಭೈರಪ್ಪ ಅವರ ಪಾರ್ಥಿವ ಶರೀರಕ್ಕೆ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಕೇಂದ್ರ ಸರಕಾರದ ಪ್ರತಿನಿಧಿಯಾಗಿ ಅಂತಿಮ ಗೌರವಾರ್ಪಣೆ ಸಲ್ಲಿಸಿದರು.

ಪ್ರಧಾನಿ ಕಂಬನಿ, ಶೋಕ ಸಂದೇಶ

ಭಾರತದ ಆತ್ಮವನ್ನು ಆಳವಾಗಿ ಅಧ್ಯ ಯನ ಮಾಡಿದ ಒಬ್ಬ ಧೀಮಂತ ಸಾಹಿತಿ, ಸಂಶೋಧಕರನ್ನು ಕಳೆದುಕೊಂಡಂತಾಗಿದೆ. ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಹ ಕಂಬನಿ ಮಿಡಿದಿದ್ದು, ಶೋಕ ಸಂದೇಶ ಕಳಿಸಿದ್ದಾರೆ. ಭೈರಪ್ಪ ಅವರ ಕುಟುಂಬಕ್ಕೆ ಸ್ಥೈರ್ಯ ನೀಡಿದ್ದಾರೆ. ಭಾರತ ಸರಕಾರ, ಪ್ರಧಾನಿ ಮೋದಿ ಅವರ ಪರವಾಗಿ ಮತ್ತು ವೈಯಕ್ತಿಕವಾಗಿ ಭೈರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ನಮನ ಸಲ್ಲಿಸಿದ್ದೇನೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ಸಾಹಿತಿ, ಸರಸ್ವತಿ ಸಮ್ಮಾನ್, ಪದ್ಮಶ್ರೀ ಪುರಸ್ಕೃತ ಕಾದಂಬರಿಕಾರ, ಡಾ.ಎಸ್.ಎಲ್. ಭೈರಪ್ಪ ಅವರ ಪಾರ್ಥಿವ ಶರೀರಕ್ಕೆ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಅವರು ಪುಷ್ಪ ಗುಚ್ಛ ಇಟ್ಟು ಅಂತಿಮ ನಮನ ಸಲ್ಲಿಸಿದರು.

ಶುಕ್ರವಾರ ಬೆಳಗ್ಗೆ ಮೈಸೂರಿಗೆ ತೆರಳಿ ಭೈರಪ್ಪ ಅವರ ಕುಟುಂಬಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಶೋಕ ಸಂದೇಶ ನೀಡಿದರಲ್ಲದೆ, ಪಾರ್ಥಿವ ಶರೀರಕ್ಕೆ ಕೇಂದ್ರ ಸರಕಾರ ಮತ್ತು ಪ್ರಧಾನಿ ಅವರ ಪರವಾಗಿ ಪುಷ್ಪಗುಚ್ಛವಿರಿಸಿ ಅಂತಿಮ ನಮನ ಸಲ್ಲಿಸಿದರು. ಚಾಮುಂಡಿ ಬೆಟ್ಟದ ಬಳಿ ರುದ್ರಭೂಮಿಗೂ ತೆರಳಿ ಅಂತ್ಯ ಕ್ರಿಯೆಯಲ್ಲಿ ಪಾಲ್ಗೊಂಡು ಶ್ರದ್ಧಾಂಜಲಿ ಸಲ್ಲಿಸಿದರು.

ನಂತರ ಮಾತನಾಡಿ ಸಚಿವರು, ಮೇರು ಸಾಹಿತಿ ಭೈರಪ್ಪ ಅವರು ಪಂಚಭೂತಗಳಲ್ಲಿ ಲೀನರಾಗಿದ್ದು, ಅವರೆಂದೂ ನೇಮ್-ಫೇಮ್ ಬಂದರೂ ಬೀಗುತ್ತಿರಲಿಲ್ಲ. ಅತ್ಯಂತ ಸರಳಾತಿ ಸರಳ ವ್ಯಕ್ತಿತ್ವದವರಾಗಿದ್ದರು. ಪ್ರಶಸ್ತಿ ಮೌಲ್ಯವನ್ನೆಲ್ಲ ಬಡವರಿಗೆ, ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಿದ್ದಂತಹ ಸಹೃದಯಿ ಸಾಹಿತಿಯಾಗಿದ್ದರು ಎಂದು ಸಚಿವ ಪ್ರಲ್ಹಾದ್ ಜೋಶಿ ಸ್ಮರಿಸಿದರು.

ನಾಡು ಕಂಡ ಅತ್ಯಂತ ಪ್ರತಿಭಾನ್ವಿತ ಬರಹಗಾರ: ಡಾ.ಎಸ್.ಎಲ್.ಭೈರಪ್ಪ ಅವರು ನಾಡು ಕಂಡಂತ ಅತ್ಯಂತ ಪ್ರತಿಭಾನ್ವಿತ ಬರಹಗಾರರು. ಅವರು ಯಾವುದೇ ಕಾದಂಬರಿಯನ್ನೂ ಸಮಗ್ರ ಅಧ್ಯಯನ ಇಲ್ಲದೆ ಬರೆಯುತ್ತಿರಲಿಲ್ಲ. ವಿಷಯಾಧಾರಿತವಾಗಿ ಓದಿ, ಅಧ್ಯಯನ, ವಿಮರ್ಶೆ ಮಾಡಿ ತಮ್ಮದೇ ವಿಶಿಷ್ಠ ದಾಟಿಯಲ್ಲಿ ಬರೆಯುತ್ತಿದ್ದರು ಎಂದು ನೆನಪಿಸಿಕೊಂಡರು.

ದೇಶಾದ್ಯಂತ ದೊಡ್ಡ ಅಭಿಮಾನಿ ಬಳಗ: ಭೈರಪ್ಪ ಅವರದ್ದು ಒಂದು ಐತಿಹಾಸಿಕ ಅಧ್ಯಯನ. ಅವರ 25ಕ್ಕೂ ಹೆಚ್ಚಿನ ಕಾದಂಬರಿಗಳು ಭಾಷಾಂತರಗೊಂಡಿವೆ. ಮರಾಠಿ, ತೆಲುಗು ಮಾತ್ರವಲ್ಲದೆ ಚೀನಾ, ರಷ್ಯಾ ಹೀಗೆ ಅನೇಕ ಭಾಷೆಗಳಲ್ಲಿ ಅನುವಾದವಾಗಿವೆ. ಅವರ ಸಾಕಷ್ಟು ಕೃತಿಗಳು ಬಹು ಸಂಖ್ಯೆಯಲ್ಲಿ ಮರುಮುದ್ರಣವಾಗಿವೆ. ಕನ್ನಡ ನಾಡಿನ ಹೊರತಾಗಿಯೂ ಅವರು ದೇಶಾದ್ಯಂತ ದೊಡ್ಡ ಅಭಿಮಾನಿ ಬಳಗವನ್ನು ಹೊಂದಿದ್ದಾರೆ ಎಂದು ಸಚಿವ ಪ್ರಲ್ಹಾದ್ ಜೋಶಿ ಬಣ್ಣಿಸಿದರು.

ಯಾವುದೇ ಪ್ರಶಸ್ತಿಯನ್ನೂ ಭೈರಪ್ಪ ಅವರು ಕೇಳಿರಲಿಲ್ಲ. ಯಾವುದೇ ಶಿಫಾರಸ್ಸು ಮಾಡುತ್ತಿರಲಿಲ್ಲ. ಅವರ ಸಾಹಿತ್ಯ ಕೃಷಿಗೆ ಸರಸ್ವತಿ ಸಮ್ಮಾನ್, ಪದ್ಮಭೂಷಣ, ಪದ್ಮಶ್ರೀ ಗಳಂತಹ ಪ್ರತಿಷ್ಠಿತ ಪ್ರಶಸ್ತಿಗಳೇ ಅವರನ್ನು ಅರಸಿ ಹೋಗಿದ್ದು, ನಾಡಿನಾದ್ಯಂತ ಪ್ರಶಸ್ತಿ-ಪುರಸ್ಕಾರಗಳಿಗೆ ಭಾಜನರಾದ ಹಿರಿಮೆಯ ಸಾಹಿತಿ ಎಂದು ಭಾವುಕರಾಗಿ ನುಡಿದರು.

ಎಡ-ಬಲವೆಂಬ ಗೊಂದಲಗಳ ನಡುವೆಯೂ ಸಾಹಿತ್ಯದ ಜೀವಂತಿಕೆಯನ್ನು ಜತನವಾಗಿಟ್ಟಿದ್ದ ಸಂತೇಶಿವರದ ಭೈರಪ್ಪ ಇನ್ನು ನೆನಪು ಮಾತ್ರ. ಹಾಸನ ಜನ್ಮ ನೀಡಿದ ನೆಲವಾದರೂ, ಬದುಕು ಕೊಟ್ಟದ್ದು ಮೈಸೂರಿನಂತಹ ಸಾಂಸ್ಕೃತಿಕ ನಗರ. ಇದು ಭೈರಪ್ಪನವರಿಗೆ ಮಾತ್ರವಲ್ಲ, ಯಾರೇ ಬಂದರೂ ಮೈಸೂರಿಗರು ಅವರನ್ನು ಅಪ್ಪಿಕೊಳ್ಳುತ್ತಾರೆ. ಅಂತಹ ಒಂದು ಗುಣ ಈ ನೆಲಕ್ಕಿದೆ. ಅದಕ್ಕೆ ಸಾಕ್ಷಿ ಹೆಜ್ಜೆ ಹೆಜ್ಜೆಗೂ ಸಿಗುತ್ತವೆ. ಮೈಸೂರಿನ ರಾಜಕೀಯ, ಸಾಹಿತ್ಯ, ಶಿಕ್ಷಣ, ಸಾಮಾಜಿಕ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಮೂಲ ಮೈಸೂರಿಗರಿಗಿಂತ ಹೆಚ್ಚಿನ ಪಾರಮ್ಯ ಮೆರೆದವರು ಹೊರಗಿನವರೇ ಆಗಿದ್ದಾರೆ. ಅದು ಹಿಂದೆಯೂ ಆಗಿದೆ, ಈಗಲೂ ಇದೆ, ಮುಂದೆಯೂ ಸಾಗಲಿದೆ. ಇಂತಹ ನಗರದಲ್ಲಿ ಭೈರಪ್ಪ ಅವರಂತಹ ಒಂದು ಮೇರು ಪ್ರತಿಭೆಯ ಮುಗಿಲೆತ್ತರದ ಬೆಳವಣಿಗೆಯ ಹಿಂದೆ ಬೆನ್ನು ತಟ್ಟಿದವರು ಹಲವರು. ಅನ್ನ ಹಾಕಿ, ಅಕ್ಷರ ಕಲಿಸಿ, ಬದುಕಿನ ದಿಕ್ಕು ಬದಲಿಸಿದವರು ಲೆಕ್ಕಕ್ಕೆ ಸಿಗದಷ್ಟು ಮಂದಿ ಇದ್ದಾರೆ. ಅದನ್ನು ಹೊರತುಪಡಿಸಿ ಭೈರಪ್ಪ ಅವರ ಶ್ರಮ, ಶ್ರದ್ಧೆ, ವಿಶ್ವಾಸ, ನೈತಿಕ ಮೌಲ್ಯ ಅವರ ಕೈಹಿಡಿದಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಂತಹ ಮೇರು ಪ್ರತಿಭೆಯಿಲ್ಲದ ಮೈಸೂರು ಸೂತಕದ ಮನೆ ಯಂತಾಗಿದೆ. ಡಜನ್ ಗಟ್ಟಲೆ ಇದ್ದ ಘಟಾನುಘಟಿ ಸಾಹಿತಿಗಳ ಸಂಖ್ಯೆ ಇಂದು ಬೆರಳೆಣಿಕೆ ಹಂತಕ್ಕೆ ಬಂದು ನಿಂತಿದೆ.

ಇರುವ ಸಾಹಿತಿಗಳಲ್ಲೂ ಒಂದಷ್ಟು ಮಂದಿ ಎಡ ಪಂಥೀಯ ಚಿಂತನೆಯನ್ನು ಹೊಂದಿದ್ದರೆ, ಒಂದಷ್ಟು ಮಂದಿ ಬಲಪಂಥೀಯ ಚಿಂತನೆ ಉಳ್ಳವರು. ಅವರವರ ಚಿಂತನೆ ಅವರವರಿಗೆ ಎನ್ನಬಹುದಾದರೂ ಕೆಲವೊಮ್ಮೆ ಸೈದ್ಧಾಂತಿಕ ವಾಗಿ ಎರಡೂ ಪಂಥಗಳ ನಡುವೆ ಸಂಘರ್ಷ ನಡೆದಿದೆ. ಆದರೂ, ಯಾವುದೂ ಅತಿರೇಕಕ್ಕೆ ಹೋಗದಿರುವುದು ಮೈಸೂರಿನ ನೆಲದ ಗುಣ. ಅದಕ್ಕೆ ಪುಷ್ಟಿ ನೀಡಿದ್ದುದು ಭೈರಪ್ಪ ಅವರ ಸಾವಿನ ಸಂದರ್ಭದಲ್ಲಿ. ಮಾತಿನಲ್ಲಿ ಎಡ-ಬಲ ಎಂದೆನ್ನಬಹುದಾದರೂ ಭೈರಪ್ಪ ಸಾವಿನ ಸಂದರ್ಭದಲ್ಲಿ ಆ ರೀತಿಯ ಯಾವುದೇ ಸನ್ನಿವೇಶ ಎದುರಾಗಲಿಲ್ಲ. ಅಲ್ಲಿ ಸಾಹಿತ್ಯ, ಕಾದಂಬರಿ, ಮೇರು ವ್ಯಕ್ತಿತ್ವ, ಈ ನೆಲದ ಅಸ್ಮಿತೆ, ಕನ್ನಡದ ಸಾಕ್ಷಿಪ್ರಜ್ಞೆ ಮುನ್ನೆಲೆಗೆ ಬಂದಿತ್ತು. ಅದು ಮೈಸೂರಿಗರ ಹಾಗೂ ಮೈಸೂರಿನ ಸಾಹಿತ್ಯ ವಲಯದ ಶಕ್ತಿ.



ಭೈರಪ್ಪನವರ ತಲೆಮಾರಿನಿಂದ ಸಾಹಿತ್ಯ ಜೀವಂತ

ಭೈರಪ್ಪ ಅವರ ತಲೆಮಾರಿನ ಕೆಲವೇ ಮಂದಿ ಮಾತ್ರ ಇಂದಿಗೂ ಸಾಹಿತ್ಯವನ್ನು ಜೀವಂತವಾಗಿ ಇರಿಸುವ ತುಡಿತ ಹೊಂದಿದ್ದಾರೆ. ಆನಂತರದ ಒಂದಷ್ಟು ಸಾಹಿತಿಗಳು ಹಾಗೂ ಕನ್ನಡದ ನಿವೃತ್ತ ಪ್ರಾಧ್ಯಾಪಕರು ಕನ್ನಡ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಆ ಪೈಕಿ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ, ವಿಜಯಾಹರನ್, ಡಾ.ಸಿಪಿಕೆ, ಡಾ.ಪಿ.ಕೆ.ರಾಜಶೇಖರ್, ಡಾ. ಅರವಿಂದ ಮಾಲಗತ್ತಿ, ಪ್ರೊ.ಚ.ಸರ್ವಮಂಗಳ, ದೇವನೂರು ಮಹಾದೇವ, ಕಾಳೇಗೌಡ ನಾಗವಾರ, ಡಾ.ರಾಗೌ, ಪ್ರೊ.ನಾಗಣ್ಣ, ಡಾ.ಡಿ.ಕೆ.ರಾಜೇಂದ್ರ, ಡಾ.ಪದ್ಮಾ ಶೇಖರ್, ಡಾ. ಲತಾ ರಾಜಶೇಖರ್, ಲತಾ ಮೈಸೂರು, ಮೀನಾ ಮೈಸೂರು, ಪ್ರೊ.ಇಂದಿರಾ, ಡಾ. ಸುಮಿತ್ರಾ ಬಾಯಿ ಸೇರಿದಂತೆ ಒಂದಷ್ಟು ಮಂದಿ ಇಂದಿಗೂ ಸಾಹಿತ್ಯದ ಕೃಷಿ ಯಲ್ಲಿ ತೊಡಗಿರುವುದು ಮೈಸೂರಿನಲ್ಲಿ ಸಾಹಿತ್ಯ ವಲಯದ ಜೀವಂತಿಕೆಗೆ ಸಾಕ್ಷಿಯಾಗಿದೆ.

ಅಭಿಮಾನಿಗಳ ಮಾತು

ಭೈರಪ್ಪನವರು ಜನಮಾಸದಲ್ಲಿ ಶಾಶ್ವತ

ಕನ್ನಡದ ಕಾದಂಬರಿ ಲೋಕಕ್ಕೆ ತಮ್ಮ ವಿಶಿಷ್ಟ ಕೊಡುಗೆ ನೀಡಿ ಪ್ರಖ್ಯಾತರಾದವರು ಡಾ.ಎಸ್. ಎಲ್. ಭೈರಪ್ಪನವರು. ಅವರ ಆರಂಭಿಕ ರಚನೆಗಳಾದ ವಂಶವೃಕ್ಷ, ಮತದಾನ, ದಾಟು, ಗೃಹಭಂಗ, ನಿರಾಕರಣ, ನಾಯಿ ನೆರಳು, ತಬ್ಬಲಿಯು ನೀನಾದೆ ಮಗನೆ, ಗ್ರಹಣ ಇತ್ಯಾದಿ ಪ್ರತಿಯೊಂದು ಕೃತಿಯೂ ಓದುಗರನ್ನು ಚಿಂತನೆಗೆ ಹಚ್ಚುವಂತಹ ಗಂಭೀರ ವಿಷಯಗಳನ್ನೊಳಗೊಂಡಿದ್ದವು. ಕನ್ನಡ ದಲ್ಲಿ ಅತಿಹೆಚ್ಚು ಪುನರ್ ಮುದ್ರಣ ಮಾತ್ರವಲ್ಲದೆ ಸಂಸ್ಕೃತವೂ ಸೇರಿದಂತೆ ಕನ್ನಡೇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿರುವ ಅತಿ ಹೆಚ್ಚಿನ ಕಾದಂಬರಿಗಳೆಂದರೆ ಭೈರಪ್ಪನವರದು. ಕನ್ನಡಕ್ಕೆ ಮೊದಲ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಗಳಿಸಿಕೊಟ್ಟವರೇ ಭೈರಪ್ಪನವರು. ತಮ್ಮ ಇಹಯಾತ್ರೆ ಮುಗಿಸಿದ್ದರೂ ಸಹ ತಮ್ಮ ಮೌಲಿಕ ಕೃತಿಗಳ ಮೂಲಕ ಜನಮಾನಸದಲ್ಲಿ ಶಾಶ್ವತ ಸ್ಥಾನ ಗಳಿಸಿರುವ ಭೈರಪ್ಪ ವರಿಗೆ ಇದೋ ನಮೋನ್ನಮಃ. ಅವರಿಗೆ ಸದ್ಗತಿಯು ಪ್ರಾಪ್ತವಾಗಲಿ.

- ವಿ.ಎಸ್.ಕಳಸೇಶ್ವರ

ಮರೆಯಲಾರದ ಸಾಹಿತಿ



ಸಾಹಿತ್ಯ ಶ್ರೀಮಂತ ಗೊಳಿಸಿದ್ದ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಸ್ ಎಲ್ ಭೈರಪ್ಪ ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದರು. ಓದುಗರನ್ನು ಸೂಜಿಗಲ್ಲಿನಂತೆ ಆಕರ್ಷಿಸಿದ್ದ ಭೈರಪ್ಪನವರು ಅವರ ಕೃತಿಗಳು ಪ್ರಕಟ ಗೊಳ್ಳುವ ಮುಂಚೆ, ಚಲನಚಿತ್ರದ ಟಿಕೆಟ್ ರೀತಿ ಮುಂಚೆಯೇ ಕಾಯ್ದಿರಿಸುತ್ತಿದ್ದದ್ದನ್ನು ನೋಡಿದ್ದೇನೆ. ಸಾಹಿತ್ಯದಲ್ಲಿ ಸಾಹಿತಿ ಹೇಗಿರಬೇಕು ಹೇಗೆ ಅಧ್ಯಯನ ಮಾಡಿ ಬರೆಯಬೇಕು ಎನ್ನುವುದನ್ನು ಕಲಿತು ಅನೇಕ ಯುವ ಪೀಳಿಗೆ ಅವರ ಕಾದಂಬರಿ ಓದುತ್ತಾ ಕನ್ನಡ ಓದುಗರ ಬಳಗವನ್ನು ಹೆಚ್ಚು ಮಾಡಿಕೊಂಡಿದ್ದನ್ನು ನೋಡಿದ್ದೇವೆ. ಒಟ್ಟಾರೆ ಮರೆಯಲಾರದ ಧ್ರುವತಾರೆ ಎಸ್.ಎಲ್. ಭೈರಪ್ಪ ಭೌತಿಕವಾಗಿ ಇಲ್ಲದಿದ್ದರೂ ಕನ್ನಡ ಸಾಹಿತ್ಯದಲ್ಲಿಅವರ ಬರವಣಿಗೆಗಳು ಅಮರ ವಾಗಿದ್ದಾರೆ.

-ಎಂ.ಪರಮೇಶ್ವರ, ಮದ್ದಿಹಳ್ಳಿ ,ಹಿರಿಯೂರು ತಾಲೂಕು

ಸಾಹಿತ್ಯ ಯಾನ ಮುಗಿಸಿದ ಭೈರಪ್ಪ

ಬದುಕಿದಂತೆ ಬರೆದು ಮತ್ತೆ ಬರೆದಂತೆ ಬದುಕಿ ಬಾಳಿದ ಎಸ್.ಎಲ್ ಭೈರಪ್ಪನವರು ತಮ್ಮ ಬದುಕು ಮತ್ತು ಸಾರಸ್ವತ ಲೋಕದ ಯಾನ ಮುಗಿಸಿದ್ದಾರೆ. ಕನ್ನಡ ಸಾಹಿತ್ಯದ ಸಾಕ್ಷಿ ಪ್ರಜ್ಞೆ (ಅಥವಾ ಸಾಕ್ಷಿ ಪರ್ವ) ಇದೀಗ ಪೂರ್ಣಾಯುಸ್ಸಿನ ಜೀವನಕ್ಕೆ ವಿದಾಯ ಹೇಳಿದ್ದಾರೆ. ಭೈರಪ್ಪನವರ ಎಲ್ಲ ಕಾದಂಬರಿಗಳು ಅವರ ಗಂಭೀರ ಅಧ್ಯಯನ ವ್ಯಾಪಕ ಪ್ರವಾಸ ಆಳ ಚಿಂತನೆಗಳಿಂದ ಪಕ್ವಗೊಂಡಿವೆ. ಶ್ರೀಯುತರು ಭಾರತೀಯ ಸಂಸ್ಕೃತಿಯನ್ನು ವಿಶೇಷ ಆಸೆಯಿಂದ ಅಭ್ಯಾಸ ಮಾಡಿ ಅದರಲ್ಲಿನ ಸತ್ವಪೂರ್ಣ ತತ್ವಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಉದಾಹರಣೆ ವಂಶ ವೃಕ್ಷ. ತಮ್ಮ ಗಳಿಕೆಯ ಬಹು ಪಾಲನ್ನು ಸಾಮಾಜಿಕ ಸೇವೆಗೆ ವಿನಿಯೋಗಿಸಿದ್ದಾರೆ. ಒಟ್ಟಾರೆ ನಮ್ಮ ಭೈರಪ್ಪನವರು ದೈಹಿಕವಾಗಿ ನಮ್ಮನ್ನಾಗಲಿದ್ದಾರೆ. ಆದರೆ ತಮ್ಮ ಅಪೂರ್ವ ಕಾದಂಬರಿಗಳಿಂದ ನಮ್ಮ ಜತೆ ಇದ್ದಾರೆ. ಆ ಹಿರಿಯ ಚೇತನಕ್ಕೊಂದು ಹೃತ್ಪೂರ್ವಕ ನಮನ. ಅವರು ನಮ್ಮನ್ನು ಆಗಲಿದರೂ ಸಾಹಿತ್ಯದ ಮೂಲಕ ಜೀವಂತವಾಗಿದ್ದಾರೆ ಹಾಗೂ ಅದೇ ನಮಗೆ ದಾರಿದೀಪ.

-ಬಿ.ಎಸ್. ಮೋಹನ್ ಕುಮಾರ್, ಬೆಂಗಳೂರು

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)
ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು-560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಮೂಲಕ 16.10.2025 ರಂದು ಬೆಳಿಗ್ಗೆ 10.30ಕ್ಕೆ ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ www.janabank.com ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ-ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	47510670000050	ಪೊಲುಕೊಂಡ ಲಕ್ಷ್ಮಿ	200.6
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.140, ಎಲ್, ಹೆಚ್‌ಎಸ್‌ಆರ್ ಲೇಔಟ್ 5ನೇ ಮೈನ್ 6ನೇ ಸೆಕ್ಟರ್, ಬೆಂಗಳೂರು-560034,	
2	31830670000061	ಲಿಂಗರಾಜು ಎ ಜಿ	102.7
3	31830670000090	ಭುವನೇಶ್ವರಿ ಭುವನೇಶ್ವರಿ ಕೆ	106.9
4	31838730055124	ಎಡ್ವರ್ಡ್ ವಿಲಿಯಮ್	4.5
5	31838730055176	ಪ್ರಶಾಂತ್	4.2
6	31838730055192	ಭೂಮಿಕ ವೈ ಬಿ	30.4
7	31838730055341	ಮೀನಾಕ್ಷಿ ಆರ್	12
8	31838730057640	ಸುಶೀಲಮ್ಮ ಲಕ್ಷ್ಮಣ	28.3
9	31838740000434	ರೇಖಾ ಆರ್	60.1
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ದೇನಾ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು-560061.	
10	32568160004834	ಪಿ ಶಂಕರ್	49.9
11	32568730027188	ಜಗನ್ನಾಥ ವಿ	19.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಹಳೆ ನಂ.1534 ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಬಸ್ ನಿಲ್ದಾಣ ಎದುರು, ಬೆಂಗಳೂರು-562106	
12	46448730039122	ರಾಜೇಶ್ವರಿ ಗೋಪಾಲ್	6.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ-571313.	
13	31878160002241	ಚಂದನ್ ಎನ್	77.1
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273-ಬಿ, ಕೊ-ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು-560078.	
14	31128730037600	ರೇಣುಕ	3.1
15	31128730038247	ನೇತ್ರಾವತಿ ಮಂಜುನಾಥ	7.8
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ-577202.	
16	46458740000021	ಮುರಳಿ ಸಿ ಆರ್ ರಾಮಕೃಷ್ಣಪ್ಪ	26.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ. 02, ಖಾನೇಶುಮಾರಿ ನಂ. 2434/2, ಎಸ್ ಎ ಕಾಂಪ್ಲೆಕ್ಸ್, ರಾಮಕೃಷ್ಣ ರಸ್ತೆ, ಎಂ ವಿ ಎಕ್ಸ್‌ಟೆನ್ಶನ್, ಹೊಸಕೋಟೆ-562114, ಭಾರತ	
17	33818730031657	ಅಶಬಿ ಹೆಚ್	4
18	33818730031822	ಕರಕೆಂಚಿ ರಾಜೇಶ್	12
19	33818730031976	ಕಲ್ಲೇಶ	3.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ-577004	
20	33878730043753	ವಿ ನರಸಿಂಹ ರೆಡ್ಡಿ	26.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34. ಖಾತಾ ನಂ. 159, ಪಿಐಡಿ ನಂ. 14-23-33/34, 1ನೇ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು-560086, ಭಾರತ	
21	45360670000024	ಲತಾ	82.5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಟ್ ನಂ. 1 & 2, ಜಿಎಫ್ & ಎಂಎಫ್, ಕಯ್ಯಾರ್ ಕಾರ್ನರ್ ಸ್ಟೋನ್ ಬಿಲ್ಡಿಂಗ್, 80 ಅಡಿ ರಸ್ತೆ, ಸೈಂಟ್ ಬೆಡ್, ಕೋರಮಂಗಲ, 4ನೇ ಬ್ಲಾಕ್, ಬೆಂಗಳೂರು-560034	
22	30948730022303	ಭೂಮಿಕಾ ಮಂಜುನಾಥ್	5.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು-570009, ಭಾರತ	
23	30488730032515	ಗಣೇಶ್ ಬಸಪ್ಪ ಶಿವಲಿ	4.09
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಕಟ್ಟಡ ಸಂ. 14089/ಎ/3,, ಕಲಘಟಗಿ ಮುಖ್ಯರಸ್ತೆ ಸರಸ್ವತ್‌ಪುರ, ಧಾರವಾಡ-580002	
24	40610670000013	ತೇಜಸ್ವಿನಿ ಧನಾಜಿ ಮೊಗ್ಲೆ	85.68
25	40618740000017	ಮಹೇಶ್ ರಾಜೇಶ್ವರ್ ಸೋಮಾಂಶಿ	6.29
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮೊದಲ ಮಹಡಿ, ರೆಡ್ಡಿ ನಿವಾಸ್ ಎಂಜಿ ಕಾಲೇಜು ರಸ್ತೆ, ಸಾಯಿ ನಗರ, ರೆಡ್ಡಿ ಪೆಟ್ರೋಲ್ ಪಂಪ್ ಎದುರು, ಅಹಮದ್‌ಪುರ ಜಿಲ್ಲೆ, ಲಾತೂರ್, ಮಹಾರಾಷ್ಟ್ರ - 413515	
26	45438730008431	ಗಂಗಾಧರ ಜಿ ಬಿ	10.6
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #3365/6ಎ ಮತ್ತು 6ಬಿ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ಶಾಮನೂರು ರಸ್ತೆ, ದಾವಣಗೆರೆ-577004, ಭಾರತ	
27	47460670000057	ನ್ಯಾನ್ಸಿ ಥೋಮಸ್	119.6
28	47468160000016	ಸುಭಾಶ್ ಎನ್	77.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, 7ಎಂ-414, ಹೆಚ್‌ಆರ್‌ಬಿಆರ್ 1ನೇ ಬ್ಲಾಕ್ ಎಕ್ಸ್‌ಟೆನ್ಶನ್, ಬೆಂಗಳೂರು-560043, ಭಾರತ	
29	45488160006965	ದೊಡ್ಡಬಸಪ್ಪ	95.8
30	45488730016460	ಲಕ್ಷ್ಮಿ ಬಾಯಿ	55.6
31	45488730016855	ಮಂಜುನಾಥ್ ಎಂ	30.8
32	45488730017450	ಹುಸೇರಿ ಡಿ	6
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1-4-380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು-584101, ಭಾರತ	
33	45458730025874	ದತ್ತಪ್ಪ ಎಸ್	9.9
34	45458730027064	ಇಮ್ರಾನ್	10
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2-907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ- 590003,	
35	45398730006510	ತುಲ್ಸಾ ಕಲ್ಲಪ್ಪ ಸುತಾರ್	2.89
36	45398730006520	ತುಲ್ಸಾ ಕಲ್ಲಪ್ಪ ಸುತಾರ್	3.96
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಯುನಿಕ್ ಟವರ್ ಬಿಗ್ ಬಜಾರ್ ಹತ್ತಿರ, ಎಕ್ಸಿಸ್ ಬ್ಯಾಂಕ್ ಎದುರು, ಖಾನಾಪುರ ರಸ್ತೆ, ಅಂಗೋಳ್ ಎಕ್ಸ್‌ಟೆನ್ಶನ್ ಬೆಳಗಾವಿ, ಕರ್ನಾಟಕ-590003	
37	45448730004763	ಐಶ್ವರ್ಯ ಬಸಪ್ಪ ತಲ್ಲಿಕೇರಿ	11.05
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮೆಝುನೈನ್ ಮತ್ತು 1ನೇ ಮಹಡಿ, ಡೋರ್ ನಂ.#00 ಉಣಕಲ್ ಗ್ರಾಮ, ವಿದ್ಯಾನಗರ, ಹುಬ್ಬಳ್ಳಿ ತಾಲೂಕು, ಧಾರವಾಡ ಕರ್ನಾಟಕ-580021	
38	30198730038960	ಎ ಅರೋಕಿಯ ಮೇರಿ ಬ್ಲೆಸ್ಸಿ	16.5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು-560027.	
39	31880670000019	ರಮ್ಜಾನ್ ಮೊಹಮ್ಮದ್ ಎ	93.2
40	31888740000138	ವಿನ್ಸ ವಿಜಯನ್	11.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85-6-22 ಸರ್ವಜ್ಞನಗರ, ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-560005.	

ಸ್ಥಳ: ಕರ್ನಾಟಕ
ದಿನಾಂಕ: 27.09.2025
ಸಹಿ/-ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕ ಸರಕಾರ
ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101
ಜಿಲ್ಲಾ: ಗದಗ ರಾಜ್ಯ: ಕರ್ನಾಟಕ
ದೂ: 08372-259932 ಇ-ಮೇಲ್: ka.gadag.betageri.cmc@gmail.com
ನಂ.ಗಬೆನಸ/ತಾಂ.ವಿ/15ನೇಹ.ಸು&ಅಮೃತ್2.0/ವಹಿ/ಟೆಂಡರ್/2025-26 ದಿನಾಂಕ: 26-09-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ 2025-26ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನ ಹಾಗೂ ಅಮೃತ-2.0 ಕೇಂದ್ರ ಪುರಸ್ಕೃತ ಯೋಜನೆಯ ಅನುದಾನದಲ್ಲಿ ಟೆಂಡರಿಗಿಟ್ಟ **ಮೊತ್ತ ರೂ.217.89 ಲಕ್ಷಗಳಿಗೆ ಒಟ್ಟು 03** ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, ಇಂಡೆಂಟ್ ನಂ: **(1) DMA/2025-26/OW/WORK_INDENT49654, (2) DMA/2025-26/OW/WORK_INDENT49655, (3) DMA/2025-26/OW/WORK_INDENT47954, http://kppp.karnataka.gv.in** ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ. ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗಧಿ ಪಡಿಸಿದ ದಿನಾಂಕಗಳಂದು ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	09-10-2025 Up to 16.00 Hours
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	10-10-2025 Up to 16.30 Hours

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಶ್ರೀ ರಾಜಾರಾಮ ಪವಾರ ಕೆ.ಎ.ಎಮ್.ಎಸ್ ಪೌರಾಯುಕ್ತರು ನಗರಸಭೆ ಗದಗ-ಬೆಟಗೇರಿ
ಸಹಿ/- ಶ್ರೀ ಸಿ. ಎನ್. ಶ್ರೀಧರ ಭಾ.ಆ.ಸೆ ಆಡಳಿತಾಧಿಕಾರಿಗಳು ನಗರಸಭೆ ಗದಗ-ಬೆಟಗೇರಿ ಹಾಗೂ ಜಿಲ್ಲಾಧಿಕಾರಿಗಳು ಗದಗ
ವಾ.ಸಾ.ಇ/ಗದಗ/310/ದೇಶಪಾಂಡೆಪಬ್ಲಿಸಿಟಿ/2025-26

ಸರಸ್ವತಿ ಪುತ್ರನ ಪರ್ವಾಂತ್ಯ



ವಿಶ್ವವಾಣಿ
27.09.2025
ಶನಿವಾರ
vishwavani.news

1931-2025



ಸರಸ್ವತಿ ಪುತ್ರನಿಗೆ ಕಣ್ಣೀರಿನ ವಿದಾಯ

ಹಿರಿಯ ಸಾಹಿತಿ ಡಾ. ಎಸ್.ಎಲ್. ಭೈರಪ್ಪ ಅವರ ಅಂತ್ಯಸಂಸ್ಕಾರ ಶುಕ್ರವಾರ ಮಧ್ಯಾಹ್ನ 12:30ಕ್ಕೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರ ಭೂಮಿಯಲ್ಲಿ ನಡೆಯಿತು. ಪತ್ನಿ ಸರಸ್ವತಿ, ಕುಟುಂಬಸ್ಥರು, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸೇರಿದಂತೆ ಹಲವು ಗಣ್ಯರು ಸರಸ್ವತಿ ಪುತ್ರನಿಗೆ ಕಣ್ಣೀರಿನ ವಿದಾಯ ಹೇಳಿದರು. ಪುತ್ರರಾದ ರವಿಶಂಕರ್, ಉದಯ್ ಶಂಕರ್ ಅಂತಿಮ ವಿಧಿ ವಿಧಾನ ನೆರವೇರಿಸಿದರು. ಸಕಲ ಸರಕಾರಿ ಗೌರವಗಳೊಂದಿಗೆ ಬ್ರಾಹ್ಮಣ ಸಂಪ್ರದಾಯದಂತೆ ಭೈರಪ್ಪ ಅವರ ಅಂತ್ಯ ಸಂಸ್ಕಾರ ನಡೆಯಿತು. ಪೊಲೀಸ್ ಅಧಿಕಾರಿ ಶಿವಾನಂದ ನೇತೃತ್ವದ ತಂಡ ಕುಶಾಲು ತೋಪು ಹಾರಿಸಿ ಗೌರವ ವಂದನೆ ಸಲ್ಲಿಸಿತು.

ಭೈರಪ್ಪನವರಿಗೆ ರಾಷ್ಟ್ರಧ್ವಜ ಗೌರವ.

ಭೈರಪ್ಪ ಅವರಿಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರಿಂದ ಅಂತಿಮ ನಮನ.

ಸಾಹಿತ್ಯ ಪರಿಷತ್ತಿನ ನಾಗರಾಜ್ ಅವರಿಂದ ಕನ್ನಡ ಧ್ವಜ ವಂದನೆ.

ಮಾಜಿ ಶಾಸಕ ರಾಮದಾಸ್ ಅವರು ಅಂತಿಮ ನಮನ ಸಲ್ಲಿಸಿದರು.

ಪೊಲೀಸರಿಂದ ಕುಶಾಲುತೋಪು ಹಾರಿಸಿ ಗೌರವರಕ್ಷೆ.

ಭೈರಪ್ಪ ಅವರ ಪಾರ್ಥಿವ ಶರೀರದ ಎದುರು ಗಣ್ಯರು.

ಅಂತ್ಯಕ್ರಿಯೆ ವೇಳೆ ವಿಶ್ವೇಶ್ವರ ಭಟ್, ಸಹನಾ ವಿಜಯಕುಮಾರ್.

ಭೈರಪ್ಪನವರಿಗೆ ಪೊಲೀಸರಿಂದ ಗೌರವ ಸಲ್ಲಿಕೆ.

ಸಹನಾ ವಿಜಯಕುಮಾರ್, ತೇಜಸ್ವಿನಿ ಅನಂತಕುಮಾರ್, ಸುಷ್ಮಾ ಭಟ್, ವಿಶ್ವೇಶ್ವರ ಭಟ್ ಅಂತಿಮ ನಮನ.

ಭೈರಪ್ಪ ಅವರ ಮೊಮ್ಮಗಳಿಂದ ಗಂಗಾಜಲ ಸಮರ್ಪಣೆ.

ಭೈರಪ್ಪ ಅವರ ಪತ್ನಿ, ಮಕ್ಕಳು, ಕುಟುಂಬ ಸದಸ್ಯರಿಂದ ಅಂತಿಮ ನಮನ.

ಅರ್ಪಿತ ಸಿಂಹ ಅವರಿಂದ ಕೊನೆ ಕ್ಷಣದ ನಮನ.

ಶಾಲಾ ಮಕ್ಕಳಿಂದ ನಮನ.

ಡಾ. ಪದ್ಮಾ ಶೇಖರ್ ಅವರಿಂದ ಕೊನೆಯ ವಿಧಿವಿಧಾನ.

ಮಕ್ಕಳಾದ ಉದಯಶಂಕರ್, ರವಿಶಂಕರ್ ಅವರಿಂದ ಅಂತಿಮ ವಿಧಿವಿಧಾನ.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಶಾಸಕ ಶ್ರೀವತ್ಸ ಜೋಶಿ ಮಾರ್ಗದರ್ಶನ.

ಸಚಿವ ಮಹದೇವಪ್ಪ, ಮಾಜಿ ಶಾಸಕ ರಾಮದಾಸ್ ಅಂತಿಮ ಗೌರವ.

ಸಾಹಿತಿ ಭೈರಪ್ಪ ಚಿತೆಗೆ ಅಗ್ನಿಸ್ಪರ್ಶ.

ರುದ್ರಭೂಮಿಯಲ್ಲಿ ಗಣ್ಯರ ಆಸೀನಕ್ಕೆ ವ್ಯವಸ್ಥೆ.

ಡಾ. ಸುಧಾಕರ ಹೊಸಹಳ್ಳಿ ಅವರಿಂದ ನಮನ.

ಸ್ಟಾರ್ ಆಫ್ ಮೈಸೂರು ಪತ್ರಿಕಾ ಸಮೂಹದ ಪ್ರಧಾನ ಸಂಪಾದಕ ವಿಕ್ರಮ್ ಮುತ್ತಣ್ಣ ಅವರಿಂದ ಗೌರವ ಸಮರ್ಪಣೆ.

ಮನೆ ಬಳಿ ಸಾರ್ವಜನಿಕ ದರ್ಶನ.

ಎನ್ ಐ ಇ ಕಾಲೇಜು ವರ್ಗದಿಂದ ಅಂತಿಮ ನಮನ.

ಕುವೆಂಪುನಗರ ನಿವಾಸಿಗಳಿಂದ ನಮನ.

ಪತ್ರಕರ್ತರಾದ ಕೂಡ್ಲಿ ಗುರುರಾಜ್ ಮತ್ತಿತರರಿಂದ ಅಂತಿಮ ದರ್ಶನ.

ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಹಾಗೂ ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಅವರಿಂದ ನಮನ.

ಜೈನಹಳ್ಳಿ ಸತ್ಯನಾರಾಯಣ ಗೌಡ ಅವರಿಂದ ನಮನ.

ಮೈಸೂರಿನ ಗಣ್ಯರಿಂದ ಅಂತಿಮ ದರ್ಶನ.



ವಿಶ್ವವಾಣಿ
27.09.2025
ಶನಿವಾರ
vishwavani.news

ಸರಸ್ವತಿ ಪುತ್ರನ ಪರ್ವಾಂತ್ಯ

ಸಾಂಗವಾಗಿ ನೆರವೇರಿದ ಭೈರಪ್ಪ ಅಂತ್ಯಕ್ರಿಯೆ | ಅಧಿಕಾರಿಗಳ ಕಾರ್ಯಕ್ಕೆ ಪ್ರಶಂಸೆ

ಸಚಿವ ಮಹದೇವಪ್ಪ, ಜಿಲ್ಲಾಡಳಿತದ ಉಸ್ತುವಾರಿಗೆ ಸಾರ್ವಜನಿಕರ ಮೆಚ್ಚುಗೆ

ಮೈಸೂರು: ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಅವರ ಅಂತಿಮ ದರ್ಶನ ಮತ್ತು ಅಂತ್ಯ ಕಿಲು ನೆರವೇರಿಸಲು ರಾಜ್ಯ ಸರಕಾರ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಮೈಸೂರು ಜಿಲ್ಲಾಡಳಿತ ತೆಗೆದುಕೊಂಡ ಕ್ರಮಗಳು ಸಾರ್ವಜನಿಕವಾಗಿ ಪ್ರಶಂಸೆಗೆ ಪಾತ್ರವಾಯಿತು.

ಭೈರಪ್ಪ ಅವರ ಸಾವಿನ ಬಗ್ಗೆ ರಾಷ್ಟ್ರೋತ್ಥಾನ ಆಸ್ಪತ್ರೆ ಮಾಧ್ಯಮ ಪ್ರಕಟಣೆ ಹೊರಡಿಸಿದ ಬೆನ್ನಲ್ಲೇ ಸರಕಾರದ ಸೂಚನೆ ಮೇರೆಗೆ ಮೈಸೂರು ಜಿಲ್ಲಾಡಳಿತ ಎಚ್ಚೆತ್ತುಕೊಂಡು ಅಗತ್ಯ ಸಿದ್ಧತೆ ನಡೆಸಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರೇ ಗುರುವಾರ ಹಾಗೂ ಶುಕ್ರವಾರ ಎರಡೂ ದಿನಗಳ ಕಾಲ ಮೈಸೂರಿ ನಲ್ಲಿ ಖುದ್ದು ಹಾಜರಿದ್ದು ಅಂತ್ಯಸಂಸ್ಕಾರ ಯಶಸ್ವಿಯಾಗುವಂತೆ ನೋಡಿಕೊಂಡರು. ಅದಕ್ಕೆ ಪೂರಕವಾಗಿ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸೂಚನೆ ನೀಡುವ ಮೂಲಕ ಅಗತ್ಯ ಕೆಲಸ ಮಾಡಿಸಿದರೆ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಬಂದೋಬಸ್ತ್‌ನಲ್ಲಿ ಯಾವುದೇ ರೀತಿಯ ಲೋಪವಾಗದಂತೆ ಖುದ್ದು ಹಾಜರಿದ್ದರು. ಅವರಿಗೆ ಬೆನ್ನೆಲುಬಾಗಿ ಡಿಸಿಪಿಗಳಾದ ಬಿಂದುಮಣಿ ಹಾಗೂ ಸುಂದರರಾಜ್ ಮೇಲುಸ್ತುವಾರಿ ನೋಡಿಕೊಂಡರು.

ಸಾಹಿತಿ ಎಸ್.ಎಲ್. ಭೈರಪ್ಪ ಅವರಿಗೆ ಸಚಿವ ಎಚ್.ಮಹದೇವಪ್ಪ ಅವರು ಅಂತಿಮ ನಮನ ಸಲ್ಲಿಸಿದರು.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ

ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್

ಗುರುವಾರ ಮೈಸೂರಿನ ಕಲಾಮಂದಿರ ಹಾಗೂ ಶುಕ್ರವಾರ ಭೈರಪ್ಪ ಅವರ ಮನೆ ಹಾಗೂ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರ ಭೂಮಿಯಲ್ಲಿ ಕಾರ್ಯ ಮುಗಿಯುವವರೆಗೆ ಡಿಸಿಪಿ ಬಿಂದುಮಣಿ ಅಗತ್ಯ ಸಿಬ್ಬಂದಿಗಳೊಂದಿಗೆ ಖುದ್ದು ಉಪಸ್ಥಿತರಿದ್ದು, ಪರಿಸ್ಥಿತಿ ನಿಯಂತ್ರಣ ಮಾಡಿದರು. ಇನ್ನುಳಿದಂತೆ ಜಿಲ್ಲಾಡಳಿತದ ಪರವಾಗಿ ಎಡಿಸಿ ಶಿವರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಸುದರ್ಶನ್ ಎರಡೂ ದಿನಗಳ ಕಾಲ ಭೈರಪ್ಪ ಅವರ ಕಾರ್ಯ ನಡೆಯುವ ಸ್ಥಳಗಳಲ್ಲಿ ಇದ್ದು ಪರಿಸ್ಥಿತಿ ನಿಭಾಯಿಸಿದರು. ಒಟ್ಟಾರೆ, ಭೈರಪ್ಪ ಅವರ ಅಂತಿಮ ಗಳಿಗೆಯಲ್ಲಿ ಮೈಸೂರು ಜಿಲ್ಲಾಡಳಿತ ತೆಗೆದುಕೊಂಡ ಜವಾಬ್ದಾರಿ ಜನ ಮೆಚ್ಚುಗೆಗೆ ಪಾತ್ರವಾಯಿತು.

ನಾಳೆ ಚಿತಾಭಸ್ಮದ ಮೆರವಣಿಗೆ

ಸಾಹಿತಿ ಎಸ್.ಎಲ್. ಭೈರಪ್ಪನವರ ಚಿತಾಭಸ್ಮ ವಿಸರ್ಜನೆ ಸೆ. 28ರಂದು ಮೈಸೂರಿನಿಂದ ಹೊರಡಲಿದೆ. ಅಸ್ತಿ ವಿಸರ್ಜನೆಗಾಗಿ ಸಂತೇಶಿವರ ಗ್ರಾಮಕ್ಕೆ, ತೆರಳುವ ಮಾರ್ಗ ಮಧ್ಯೆ ವಾಹನ ಚನ್ನರಾಯಪಟ್ಟಣಕ್ಕೆ ಆಗಮಿಸಲಿದೆ ಎಂದು ಭೈರಪ್ಪನವರ ಕುಟುಂಬ ವರ್ಗ ತಿಳಿಸಿದೆ. ಎರಡು ಕಳಶಗಳಲ್ಲಿ ಶ್ರೀಯುತರ ಚಿತಾಭಸ್ಮ ಬರಲಿದ್ದು, ಒಂದು ಕಳಶದ ಚಿತಾಭಸ್ಮವನ್ನು ಸಂತೇಶಿವರದ ತುಂಬಿದ ಕೆರೆಯಲ್ಲಿ ತೆಪ್ಪದ ಮೂಲಕ ವಿಸರ್ಜನೆ ಮಾಡಲಾಗುತ್ತದೆ. ಮತ್ತೊಂದು ಕಳಶದ ಚಿತಾಭಸ್ಮವನ್ನು ಸಂತೇಶಿವರ ಗ್ರಾಮದಲ್ಲಿ ಪುತ್ಥಳಿ ನಿರ್ಮಾಣ ಮಾಡುವ ಸ್ಥಳದಲ್ಲಿ ಇಡಲಾಗುತ್ತದೆ. ಚನ್ನರಾಯಪಟ್ಟಣಕ್ಕೆ ಬೆಳಗ್ಗೆ 10 ಗಂಟೆಗೆ ವಾಹನ ಆಗಮಿಸಲಿದ್ದು, ಮೈಸೂರು ರಸ್ತೆ ನವೋದಯ ಸರ್ಕಲ್, ಆಸ್ಪತ್ರೆ ರಸ್ತೆ, ಹಾಗೂ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರ ನಡೆಸಿ ಭೈರಪ್ಪನವರ ಹುಟ್ಟೂರಾದ ಸಂತೇಶಿವರಕ್ಕೆ ತೆರಳಲಿದೆ. ಮೆರವಣಿಗೆಯಲ್ಲಿ ವೇದ ಘೋಷ, ಭಜನೆ, ಹಾಗೂ ಶ್ರೀ ಯುತರ ಚಿತಾಭಸ್ಮಕ್ಕೆ ಪುಷ್ಪ ನಮನ ಅರ್ಪಿಸಲು ಅವಕಾಶವಿದೆ. ಸಾಹಿತ್ಯ ದಿಗ್ಗಜ, ಡಾ. ಭೈರಪ್ಪನವರ ಅಭಿಮಾನಿಗಳು ಸಾಹಿತ್ಯಸಕ್ತರು, ಚನ್ನರಾಯಪಟ್ಟಣ ತಾಲೂಕಿನ ಎಲ್ಲಾ ಗ್ರಾಮಸ್ಥರು ಆಗಮಿಸಿ, ಡಾ.ಭೈರಪ್ಪನವರ ಆತ್ಮಕ್ಕೆ ಶಾಂತಿ ಕೋರಲು ಮನವಿ ಮಾಡಲಾಗಿದೆ.



ಪೊಲೀಸರಿಂದಲೂ ಗೌರವ ನಮನ.

ಭೈರಪ್ಪ ಅವರ ಅಭಿಮಾನಿಗಳಿಂದ ಅಂತಿಮ ನಮನ .

ಡಾ. ಪದ್ಮಾ ಶೇಖರ್ ಮತ್ತು ಡಾ. ಹೇಮಲತಾ ನಂದೀಶ್ ಅವರಿಂದ ನಮನ.

ಮನೆಯಿಂದ ರುದ್ರಭೂಮಿಯತ್ತ ಭೈರಪ್ಪ ಪಯಣ.

ನಗರಪಾಲಿಕೆ ಮಾಜಿ ಸದಸ್ಯ ಕುಶಲ್ ಕುಮಾರ್ ಅವರಿಂದ ನಮನ

ಡಾ. ಸುಶ್ರುತ್ ಗೌಡ ಇತರ ಗಣ್ಯರಿಂದ ನಮನ

ಭೈರಪ್ಪ-ಬೃಹದ್ರೂಪ

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

'ಸತ್ಯ ಮತ್ತು ಸೌಂದರ್ಯ' ಇವು
ಕೃತಿಗಳಲ್ಲಿ ಮಾತ್ರವಲ್ಲ,
ಇವರ ನಡೆ-ನುಡಿಗಳಲ್ಲಿಯೂ
ವೇದ್ಯ-ಹೃದ್ಯ.
ಎಂದೇ ಭೈರಪ್ಪ, ಆಗಿದ್ದರು
ಎಲ್ಲರಿಗೂ ಆಪ್ತ.

ಸಾಹಿತ್ಯಪ್ರೇಮಿ ಸಂಪೂರ್ಣ ತೃಪ್ತ.
ಭೈರಪ್ಪ ಮಾತ್ರ,
ಕೀರ್ತಿ-ಮನ್ನಣೆಯೆಡೆಗೆ
ಪೂರ್ಣ ನಿರ್ಲಿಪ್ತ!
ಕಾದಂಬರಿಯ ಪಾತ್ರಗಳ
ಕರುಳ ಕೂಗನು ಅರಿತು
(ಕೊರಳ ಸೋಗನು ಕುರಿತೂ)

ವಿರಳ ಶೈಲಿಯಲೊರೆವ,
ಸರಳ ಓದಿಗು ಸಿಗುವ,
ಇವರ ಕೃತಿಗಳ ಸಕಲ ಪಾತ್ರಗಳೂ
ನಮ್ಮನ್ನು ಕಾಡುತ್ತವೆ, ತಮ್ಮ ಬಗ್ಗೆ
ಚಿಂತಿಸುವಂತೆ ಮಾಡುತ್ತವೆ.

ಪಾತ್ರಗಳ ಅಂತರಂಗವ ಹೊಗ್ಗಿ,
ಸಂಪೂರ್ಣ ಒಗ್ಗಿ,
ಅಲ್ಲಿಯ ಚಿತ್ರಗಳನಿವರು
ಓದುಗನ ಚಿತ್ತ'ಭಿತ್ತಿ'ಯಮೇಲೆ
ಮೂಡಿಸಿದಾಗ ಅದುವೆ ಓದಿನ
ಸುಗ್ಗಿ!
ಭೈರಪ್ಪನವರ ಸಾಹಿತ್ಯವನ್ನು
ಇಟ್ಟು ಹೊರಗೆ, ವಿಶ್ವಸಾಹಿತ್ಯದ
ಒಳಗೆ ಪ್ರವೇಶ ಅಸಾಧ್ಯ.

ಬಿಟ್ಟು ಇವರ ಕೃತಿಗಳನ್ನು,
ವಿಮರ್ಶಿಸಲು
ಒಟ್ಟು ವಿಶ್ವಸಾಹಿತ್ಯವನ್ನು
ಹೇಗೆ ತಾನೇ ಸಾಧ್ಯ?

ಭೈರಪ್ಪ ಎಂಬ ಕನ್ನಡದ ಸಾಕ್ಷಿಪ್ರಜ್ಞೆ

ಉಮಾ ಬೆಟ್ಟಿಗೇರಿ, ಬೆಂಗಳೂರು

ಬೆಂಗಳೂರು ಮಹಾನಗರಿಯ ರಾಜರಾಜೇಶ್ವರಿ ನಗರದ (ಅಂದರೆ ಆರ್.ಆರ್.ನಗರದ) ನಿವಾಸಿ ನಾನು. ನನ್ನ ಅಚ್ಚುಮೆಚ್ಚಿನ ಲೇಖಕರಾದ ಎಸ್.ಎಲ್.ಭೈರಪ್ಪನವರು ಪ್ರಸ್ತುತ ಆರ್.ಆರ್.ನಗರದಲ್ಲೇ ಇರುವರಂತೆ, ವಿಶ್ವೇಶ್ವರ ಭಟ್ಟರ ಮನೆಯಲ್ಲಿದ್ದಾರಂತೆ ಅಂತ ಕೆಲವರು ಹೇಳಿದ್ದನ್ನು ನಾನು ಕೇಳಿಸಿಕೊಂಡಿದ್ದೆ (ಹಾಗಂತ ಭಟ್ಟರೂ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು ಎನ್ನಿ!). ಮಾತ್ರವಲ್ಲ, 'ಮನೆಯ ಹತ್ತಿರದ ಉದ್ಯಾನಕ್ಕೆ ನಿತ್ಯವೂ ಬರುತ್ತಾರೆ, ಅಭಿಮಾನಿಗಳನ್ನು ಪ್ರೀತಿಯಿಂದ ಮಾತನಾಡಿಸುತ್ತಾರೆ, ಫೋಟೋಗೂ ರೆಡಿ' ಹೀಗೆ ಏನೆಲ್ಲಾ ಸುದ್ದಿಗಳು ನನ್ನ ಕಿವಿಯ ಮೇಲೆ ಬಿದ್ದಾಗ, 'ಭೈರಪ್ಪ ಅವರನ್ನು ಒಂದು ಬಾರಿ ದರ್ಶನ ಮಾಡುವ ಅವಕಾಶ ಸಿಗಬಹುದೇನೋ..' ಅಂತ ನನಗೂ ಅನಿಸಿತ್ತು.

ಅವರು ಉದ್ಯಾನಕ್ಕೆ ಹೋಗುವ ಸಮಯ ತಿಳಿದುಕೊಳ್ಳಲೇ? ಅಥವಾ ಭಟ್ಟರ ಮನೆಗೆ ಹೋಗಿ ಅವರನ್ನು ಗೋಗರೆಯಲೇ? ಊಹುಂ, ಎಲ್ಲವೂ ಮನಸ್ಸಿನ ಮಂಡಿಗೆಯ ಕಥೆಯೇ. ನಾನೇನೂ ಅಂಥ ಪ್ರಯತ್ನವನ್ನು ಮಾಡಲೇ ಇಲ್ಲ. ಆದರೆ ಆ ಮಹಾಚೇತನ ಇನ್ನಿಲ್ಲ ಎಂದು ಗೊತ್ತಾದಾಗ, ಮನೆಯ ಹತ್ತಿರವೇ ಇದ್ದ ಆಸ್ಪತ್ರೆಗೆ ಧಾವಿಸಿದೆವು. ಆದರೆ ನಾವು ಹೋದಾಗ, ನಮ್ಮಂಥ ಸಾಮಾನ್ಯ ಜನರಿಗೆ ಅಲ್ಲಿ ದರ್ಶನದ ಅವಕಾಶವಿರಲಿಲ್ಲ. ಇಲ್ಲಿ ನಾನು ಯಾರನ್ನೂ ದೂಷಿಸುತ್ತಿಲ್ಲ, ನಮಗೆ ಲಭ್ಯವಿರಲಿಲ್ಲ ಅಷ್ಟೇ. ಆದರೆ ಮರಳುವಾಗ ಮಾತ್ರ, 'ನಮ್ಮ ನೆಚ್ಚಿನ ಲೇಖಕರು, ನಾಡಿನ ಹಿರಿಯ ಚೇತನ ಈ ಕಟ್ಟಡದ ಕೋಣೆಯೊಂದರಲ್ಲಿ ಚಿರನಿದ್ರೆಗೆ ತೆರಳಿದ್ದಾರೆ' ಎಂದು ಅಲ್ಲಿಯೇ ಗೌರವಪೂರ್ವಕವಾಗಿ ನಮನವನ್ನು ಸಲ್ಲಿಸಿದೆವು ಎನ್ನಿ...

ಕನ್ನಡದ ಸಾಕ್ಷಿಪ್ರಜ್ಞೆ ಡಾ. ಎಸ್.ಎಲ್.ಭೈರಪ್ಪನವರು ಈ ಶತಮಾನ ಕಂಡ ಯುಗಪುರುಷ, ಕನ್ನಡ ಸಾರಸ್ವತ ಲೋಕ ಕಂಡ ಅಪರೂಪದ ಕಾದಂಬರಿಕಾರ, ಅದಮ್ಯ ಚೇತನ, ನೂರಾರು ಪ್ರಶಸ್ತಿಗಳಿಗೆ ಭಾಜನರು ಹೀಗೆ ಅವರ ಬಗ್ಗೆ ಎಷ್ಟು ಬರೆದರೂ ಸಾಲದು. ಆದರೆ ನಮ್ಮಂಥವರ ಪಾಲಿಗೆ ಅವರು 'ಪ್ರೀತಿಯ ಲೇಖಕರು' ಅಷ್ಟೇ! ಅವರೆಂದರೆ ವಿಸ್ಮಯ, ಸೋಜಿಗ, ಕಾತುರ, ಬೆರಗು...! ಏಕೆಂದರೆ, ಸುಮಾರು 40 ವರ್ಷಗಳಿಂದಲೂ ಕಾದಂಬರಿಗಳ ಮೂಲಕವೇ ನಮ್ಮಂಥ ಓದುಗರು ಮತ್ತು ಭೈರಪ್ಪನವರ ನಡುವೆ ಅವ್ಯಕ್ತ ಬಾಂಧವ್ಯ ಬೆಳೆದುಕೊಂಡು ಬಂದಿದೆ. ಧರ್ಮಶ್ರೀ, ದಾಟು, ತಂತು, ವಂಶವೃಕ್ಷ, ಸಾರ್ಥ ಹೀಗೆ ಅವರ ವಿವಿಧ ಕೃತಿಗಳನ್ನು ನಾನು ಹಲವಾರು ಬಾರಿ ಓದಿದ್ದೇನೆ. ಆಶ್ಚರ್ಯವೆಂದರೆ, ನನ್ನ ಜೀವನದ ವಿವಿಧ ಮಜಲು ಗಳಲ್ಲಿ, ಅಂದರೆ ಶಾಲಾದಿನಗಳಿಂದ ಮೊದಲ್ಗೊಂಡು ಅರವತ್ತರ ಅರುಳು- ಮರುಳಿ ನವರೆಗೆ, ಮತ್ತೊಮ್ಮೆ ಮಗದೊಮ್ಮೆ ಓದುತ್ತಾ ಹೋದಂತೆ, ಪ್ರತಿಬಾರಿಯೂ ನನಗೆ ಆಯಾ ಕಾದಂಬರಿಯ ವಸ್ತು-ವಿಷಯದ ಬಗ್ಗೆ ಹೊಸ ಆಯಾಮಗಳೇ ದೊರೆತಿವೆ. 'ಅದಮ್ಯ ಚೇತನ' ಭೈರಪ್ಪನವರು ಭೌತಿಕವಾಗಿ ಮರೆಯಾದರೇನು, ಎಲ್ಲ ಅಭಿಮಾನಿಗಳ ಮನದ 'ಆವರಣ'ದಲ್ಲಿ ಅವರು ದೃಢವಾದ 'ಭಿತ್ತಿ' ಕಟ್ಟಿಕೊಂಡು, ಕನ್ನಡದ ಶ್ರೀಮಂತ ಸಾಹಿತ್ಯದ 'ಸಾಕ್ಷಿ'ಯಾಗಿ 'ನೆಲೆ' ನಿಂತಿದ್ದಾರೆ ಎಂದಷ್ಟೇ ಹೇಳಬಲ್ಲೆ...

(ಲೇಖಕಿ ಹವ್ಯಾಸಿ ಬರಹಗಾರ್ತಿ)











ಭೈರಪ್ಪನವರ ಎಡ-ಬಲ ಸಮಬಲ

ಚೇತನಾ ಹೆಗಡೆ

ಭಾರತ ಕಂಡಂಥ ಶ್ರೇಷ್ಠ ಸಾಹಿತಿ ಭೈರಪ್ಪನವರು ನಮ್ಮನ್ನಗಲಿದ್ದಾರೆ. ಅವರು ಬದುಕಿದ್ದಾಗಲೇ ಅವರನ್ನು ಒಂದು ಪಂಥಕ್ಕೆ, ರಾಜಕೀಯಕ್ಕೆ ತಳಕು ಹಾಕಿದವರೆಲ್ಲರೂ ಯಥಾಪ್ರಕಾರ ಈಗಲೂ ಕೊಸರು ನುಡಿದಿದ್ದಾರೆ. ಫೇಸ್‌ಬುಕ್‌ನ ಗೋಡೆಯ ಮೇಲೆ ಕೊಸರು ನುಡಿದ ಬಹುತೇಕರ ಮಾತು ಒಂದೇ ಧಾಟಿಯದು: ''ಆವರಣ ಕೃತಿಯನ್ನು ಬರೆಯುವ ತನಕ ಅವರನ್ನು ನಾನು ಮೆಚ್ಚುತ್ತಿದ್ದೆ'', ''ಮೊದಲೆಲ್ಲ ಅವರು ಯಾವುದೇ ಪಂಥಕ್ಕೆ ಸೇರಿರಲಿಲ್ಲ, ಆಮೇಲೆ ಪಕ್ಕಾ ಬಿಜೆಪಿ/ಅರೆಸ್ಸೆಸ್ ಆದರು'', ''ಭೈರಪ್ಪ ಒಬ್ಬ ಸ್ತ್ರೀದ್ವೇಷಿ. ಅವರ ಸ್ತ್ರೀ ಪಾತ್ರಗಳು ಜಾಳುಜಾಳು, ಸ್ತ್ರೀದ್ವೇಷದ ಮೂಸೆಯಲ್ಲಿ ಹೊರಬಂದಿವೆ'' ಇತ್ಯಾದಿ.

ಮೊದಲೇ ಹೇಳಿಬಿಡುತ್ತೇನೆ- ನಾನು ಸಾಹಿತಿ ಅಲ್ಲ, ಸಾಮಾನ್ಯ ಲೇಖಕಿಯೂ ಅಲ್ಲ. ಆದರೆ ಸಾಕಷ್ಟು ಕನ್ನಡ ಸಾಹಿತ್ಯ ಓದಿದ್ದೇನೆ. ನಾನು ಯಾರನ್ನೆಲ್ಲ ಓದಿಕೊಂಡಿದ್ದೇನೆ ಎಂಬುದು ಇಲ್ಲಿ ಅಪ್ರಸ್ತುತವಾದರೂ, ಸಂದರ್ಭೋಚಿತವಾಗಿ ಹೇಳುವುದಾದರೆ ಭೈರಪ್ಪ ಮಾತ್ರವಲ್ಲದೆ ಕುವೆಂಪು, ಕಾರಂತ, ಮಾಸ್ತಿ, ತೇಜಸ್ವಿ, ಅನಂತಮೂರ್ತಿ, ಕಾರ್ನಾಡರನ್ನೂ ಓದಿದ್ದೇನೆ!

ಈಗ ವಿಷಯಕ್ಕೆ ಬರುತ್ತೇನೆ. ಬಹುತೇಕರಿಗೆ ಭೈರಪ್ಪನವರ ಬಗ್ಗೆ ತಕರಾರು ಆರಂಭವಾದದ್ದು ಅವರುಗಳೇ ಹೇಳಿಕೊಂಡಂತೆ 'ಆವರಣ' ಕೃತಿಯ ನಂತರ. ಹಾಗಾಗಿ ಅದರ ಮೊದಲಿನ ಕೃತಿಗಳಿಂದ ಶುರು ಮಾಡುವೆ.

ಭೈರಪ್ಪನವರು ಮೊದಲು ಬರೆದ 'ಗತಜನ್ಮ ಮತ್ತು ಇತರ ಕಥೆಗಳು' ಪುಸ್ತಕದ ಶೀರ್ಷಿಕೆ ಕಥೆಯ ವಸ್ತು ಹೀಗಿದೆ: ಯಾವುದೋ ಒಂದು ಕಾಲದ/ಊರಿನ ಪದ್ಧತಿಯ ಪ್ರಕಾರ ಹೆಣ್ಣು ಮಗಳು ಮೈನೆರೆಯುವ ಮೊದಲೇ ಮದುವೆ ಮಾಡಬೇಕು. ಮದುವೆಯಾಗುವ ಮೊದಲು ಮೈನೆರೆದರೆ ಬಹಿಷ್ಕಾರ. ಇಂಥ ಸಂದಿಗ್ಧ ಪರಿಸ್ಥಿತಿಗೆ ಸಿಗುವ ಅಪ್ಪನೊಬ್ಬ ತನ್ನ 12-13 ವರ್ಷದ ಮಗಳನ್ನು ಕಾಡಿನಲ್ಲಿ ಬಿಟ್ಟು ಬಂದುಬಿಡುತ್ತಾನೆ. ಕಾಡು ಪ್ರಾಣಿಗಳಿಂದ ಬಚಾವಾಗುವ ಹುಡುಗಿ ಕಾಡುಜನರ ಕೈಸೇರುತ್ತಾಳೆ, ಕಥೆ ಮುಂದುವರಿಯುತ್ತದೆ, ಇರಲಿ. ಇಲ್ಲಿ ಮಗಳನ್ನು ಕಾಡಿಗೆ ಬಿಟ್ಟ ಅಪ್ಪ ಒಬ್ಬ ಹಿಂದೂ. ತೀರಾ ಕಾಡಿಗೆ ಬಿಡುವಷ್ಟಲ್ಲದಿದ್ದರೂ ಮದುವೆಗೆ ಮೊದಲು ಮೈನೆರೆದ ಹುಡುಗಿಯನ್ನು ಮುದುಕ/ವಿಧುರನಿಗೆ ಮರುಮದುವೆಗೆ ಕೊಡಲಾಗುತ್ತಿತ್ತು ಅಂತ ನನ್ನ ಅಮ್ಮನೇ ತನ್ನ ಹಿಂದಿನ ತಲೆಮಾರಿನ ಬಗ್ಗೆ ಹೇಳುತ್ತಿದ್ದಳು. ಅಂದರೆ ಸುಮಾರು 1950-55ರ ಸಮಯದಲ್ಲೇ ಭೈರಪ್ಪನವರು ಹಿಂದೂ ಸಮಾಜದ ಪಿಡುಗೊಂದರ ಬಗ್ಗೆ ಬರೆದಿದ್ದರು.

'ವಂಶವೃಕ್ಷ'ದ ಶ್ರೀನಿವಾಸ ಶ್ರೋತ್ರೀಯರು ತಮ್ಮ ವಂಶದ ಬಗ್ಗೆ ಅಪಾರ ಹೆಮ್ಮೆ ಇಟ್ಟುಕೊಂಡವರು. ಆದರೆ ಕೊನೆಯಲ್ಲಿ ಸ್ವತಃ ತನ್ನ ಹುಟ್ಟೇ ಯಾವುದೋ ಅನಾಮಿಕ ವ್ಯಕ್ತಿಯಿಂದ ಆಗಿದ್ದು ಎಂದು ತಿಳಿದು ದಿಗ್ಭ್ರಾಂತರಾಗುತ್ತಾರೆ. ಅಂದಹಾಗೆ ಇದೊಂದು ಬ್ರಾಹ್ಮಣ ಪಾತ್ರ ಹಾಗೂ ಬ್ರಾಹ್ಮಣರ ಮನೆಯಲ್ಲಿ ಆಸ್ತಿ ಉಳಿಸಿಕೊಳ್ಳಲು ಹೆಂಡತಿಗೆ ಬೇರೊಬ್ಬನ ಮೂಲಕ ಗರ್ಭಧರಿಸುವಂತೆ ಮಾಡಲಾಯಿತು ಎಂದು ಚಿತ್ರಿತವಾಗಿದೆ. ಸುಮಾರು 1965ರ ಹೊತ್ತಿಗೆ ಬಂದ ಈ ಕೃತಿಯ ಬಗ್ಗೆ ಯಾವ ಬ್ರಾಹ್ಮಣನೂ ತಕರಾರು ಎತ್ತಲಿಲ್ಲ. ಹಾಗೆಯೇ ಇದರಲ್ಲಿ ಕಾತ್ಯಾಯಿನಿ ಮರುಮದುವೆಯಾಗುವ ಕಥೆಯೂ ಇದೆ!

'ಧರ್ಮಶ್ರೀ'ಯಲ್ಲಿ ಬ್ರಾಹ್ಮಣನೊಬ್ಬ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗುತ್ತಾನೆ. ಇದಕ್ಕೂ ಯಾರ ತಕರಾರೂ ಇರಲಿಲ್ಲ. 'ದಾಟು'ವಿನ ಸತ್ಯಳೂ ಅಷ್ಟೇ. ಎಲ್ಲ ಸಂಪ್ರದಾಯಗಳನ್ನು ದಾಟಿದವಳು!

ಇನ್ನು 'ಪರ್ವ'... ಸಮಸ್ತ ಭಾರತೀಯರು ದೇವರೆಂದು ಪೂಜಿಸುವ ಕೃಷ್ಣ ಇಲ್ಲಿ ಕೇವಲ ಒಬ್ಬ ಬುದ್ಧಿವಂತ, ಚಾಣಾಕ್ಷ ಮನುಷ್ಯ. ಹಾಗೆ ನೋಡಿದರೆ ಪರ್ವದ ಮೊದಲ ಪುಟದ ನಂತರ ಯಾವ ಹಿಂದೂ/ಆಸ್ತಿಕ/ಸಂಪ್ರದಾಯವಾದಿಗಳೂ ಓದಲೇಬಾರದಿತ್ತು. ಯಾಕೆಂದರೆ ಮೊದಲ ಪುಟದಲ್ಲೇ- ಮೈನೆರೆದರೂ ಮದುವೆಯಾಗದೇ ಇದ್ದುದರಿಂದ ಗರ್ಭವತಿಯಾಗದೇ ಇದ್ದಿದ್ದಕ್ಕೆ ಪ್ರತಿ ತಿಂಗಳೂ ನಷ್ಟವಾಗುವ ಅಂಡಗಳ ಲೆಕ್ಕವಿದೆ! ಇಡೀ ಪರ್ವ ಧಾರ್ಮಿಕ ಮೂಸೆಯಿಂದ ಹೊರತೆಗೆದು ಕಲಿಯುಗದ ಸಂಭವನೀಯ ತಾರ್ಕಿಕ ಮೂಸೆಯಲ್ಲಿ ಅದ್ದಿ ತೆಗೆದದ್ದು! ಇಲ್ಲ, ಯಾವೊಬ್ಬ ಭಾರತೀಯ ಹಿಂದೂ ಕೂಡ ತಕರಾರೆತ್ತಲಿಲ್ಲ. ಬದಲು 'ಭಲೇ ಭಲೇ' ಎಂದರು. ಯಾಕೆಂದರೆ ಸನಾತನಧರ್ಮದ ಮೂಲವೇ 'ಎಲ್ಲವನ್ನೂ ಪ್ರಶ್ನಿಸು' ಎಂದು. ಇವತ್ತಿಗೂ ಪರ್ವವೊಂದು ಕ್ಲಾಸಿಕ್ ಕೃತಿ ಎಂದು ಗುರುತಿಸಲ್ಪಟ್ಟಿದೆ.

'ಉತ್ತರಕಾಂಡ'ದ ಸೀತೆಯೂ ಅಷ್ಟೇ. ಹೊಲದಲ್ಲಿ ಉಳುಮೆ ಮಾಡುತ್ತಾಳೆ. ಇಡೀ ದೇಶ ದೇವರೆಂದು ಪೂಜಿಸುವ ಶ್ರೀರಾಮನಿಗೆ ಭೈರಪ್ಪನವರ ಸೀತೆ ''ಇನ್ನು ನಿನ್ನೊಂದಿಗೆ ಜೀವನ ಸಾಧ್ಯವಿಲ್ಲ'' ಎನ್ನುತ್ತಾಳೆ. ಇದಕ್ಕಿಂತ ಪ್ರತಿಗಾಮಿತನ/ಧಾರ್ಷ್ಟ್ಯದ ಮಾತನ್ನು ಇನ್ಯಾವುದೇ ಧರ್ಮದ ದೇವರ ಬಗ್ಗೆ ಬರೆದು ಬದುಕುಳಿಯಲು ಸಾಧ್ಯವೇ? 'ಸಾರ್ಥ'ದಲ್ಲಿ ಶಂಕರಾಚಾರ್ಯರಿಗೆ ಮಂಡನಮಿಶ್ರರ ಪತ್ನಿ ಭಾರತೀದೇವಿಯವರು ಗಂಡು-ಹೆಣ್ಣಿನ ಸಂಬಂಧದ ಸೂಕ್ಷ್ಮ ಪ್ರಶ್ನೆ ಇಟ್ಟಾಗ 'ಅನುಭವ' ಇಲ್ಲದ ಶಂಕರಾಚಾರ್ಯರು ತಮ್ಮ ಭೌತಿಕ ದೇಹ ಬಿಟ್ಟು ರಾಜನೊಬ್ಬನ ದೇಹ ಸೇರಿ ಅನುಭವ ಪಡಕೊಂಡು ಬಂದು ಭಾರತೀದೇವಿಗೆ ಉತ್ತರಿಸುತ್ತಾರೆ. ಇಲ್ಲ, ಶಾಂಕರ ಪರಂಪರೆಯ ಯಾವ ಪೀಠಗಳಾಗಲೀ, ಸ್ಮಾರ್ತರಾಗಲೀ ಭೈರಪ್ಪನವರನ್ನು ತೆಗಳಲಿಲ್ಲ!

ಇನ್ನು, ಭೈರಪ್ಪನವರಿಗೆ ಇರುವ 'ಸ್ತ್ರೀ ವಿರೋಧಿ' ಎಂಬ ಹಣೆಪಟ್ಟಿಯ ಬಗ್ಗೆ. 'ಗೃಹಭಂಗ'ದ ನಂಜಮ್ಮನಿಗಿಂತ ದಿಟ್ಟ ಹೆಣ್ಣು ಬೇರೆ ಬೇಕೇ? 'ಪರ್ವ'ದ ಕುಂತಿ, 'ಉತ್ತರಕಾಂಡ'ದ ಸೀತೆ ಎಲ್ಲರೂ ಪರಮ ಗಟ್ಟಿಗಿತ್ತಿಯರು. ನಿರಾಕರಣದಲ್ಲಿ ಮಗಳು ಅಪ್ಪನಿಗೆ ಹೇಳುತ್ತಾಳೆ ''ಒಂದುವೇಳೆ ನೀನು ಸತ್ತು ಅಮ್ಮ ಬದುಕಿದ್ದಿದ್ದರೆ ಸಾಕಲು ಕಷ್ಟ ಎಂದು ನಾವು ಐವರು ಮಕ್ಕಳನ್ನು ಯಾರ್ಯಾರಿಗೋ ಕೊಡುತ್ತಿರಲಿಲ್ಲ. ಎಷ್ಟೇ ಕಷ್ಟವಾದರೂ ತಾನೇ ದುಡಿದು ಸಾಕುತ್ತಿದ್ದಳು'' ಎಂದು. ಹೆಣ್ಣಿನ ಕರ್ತೃತ್ವ ಶಕ್ತಿಯ ಬಗ್ಗೆ ಇದಕ್ಕಿಂತ ದೊಡ್ಡ ಮಾತು ಬೇಕೇ? ತಾನು ನಂಬಿದ ವಿಜ್ಞಾನದ ಪ್ರಯೋಗದ ಭಾಗವಾಗಲು ಗಂಡ, ತಂದೆ, ತಾಯಿ ಎಲ್ಲರನ್ನೂ ಬಿಟ್ಟು ತಿರುಗಿ ಬರಲಾಗದ ಬಾಹ್ಯಾಕಾಶಕ್ಕೆ ಹೊರಡುವ 'ಯಾನ'ದ ಉತ್ತರಾ ಸ್ವತಂತ್ರ ಮನೋಭಾವದ ದಿಟ್ಟಹೆಣ್ಣಿನ ರೂಪವಲ್ಲವೇ? 'ಸಾರ್ಥ'ದ ಭಾರತೀ ದೇವಿಯ ವಿದ್ವತ್ತಿನ ಚಿತ್ರಣ ಕಡಿಮೆಯದೇ?

ಇನ್ನು ಮನುಷ್ಯನ ತೆವಲು, ವಿಕೃತಿ, ಬಹುಬಗೆಯ ಮುಖಗಳನ್ನು ಭೈರಪ್ಪನವರು ಚಿತ್ರಿಸಿರುವ ರೀತಿ ನೋಡುವುದಾದರೆ 'ಸಾಕ್ಷಿ'ಯ ಮಂಜಯ್ಯ, 'ಅಂಚು'ವಿನ ಅಮೃತಾ, 'ಮಂದ್ರ'ದ ಮೋಹನ ಸಾಕು! ಯಾವುದೇ ಮನಃಶಾಸ್ತ್ರದ ವಿದ್ಯಾರ್ಥಿಗೆ ಸಬ್ಜೆಕ್ಟ್ ಆಗಬಲ್ಲ ಪಾತ್ರಗಳು ಅವು. ಇನ್ನು 'ಕವಲು'ವಿನ ಪಾತ್ರಗಳ ಬಗ್ಗೆ... ಕಾರ್ಪೊರೇಟ್ ಜಗತ್ತಿನ, ಮಹಾನ ಗರಗಳ ವಾಸಿಗಳ ಜನರಿಗೆ ಆಧುನಿಕ ಹೆಣ್ಣುಗಳ ಲಂಪಟತೆ, ದುಡ್ಡಿನ ಮೋಹ ಯಾವುದೂ ಹೊಸತಲ್ಲ. ಮದುವೆಯಾಗಿ ಒಂದೇ ವಾರಕ್ಕೆ ಗಂಡನನ್ನು ಕೊಲ್ಲಿಸುವ ಘಟನೆಗಳನ್ನು ಕೇಳುತ್ತಿಲ್ಲವೇ? ಅಂದಮೇಲೆ ಆ ರೀತಿಯ ಸ್ತ್ರೀಪಾತ್ರ ಅವಮಾನ ಯಾಕೆ? ಅಂಥವರೂ ಇದ್ದಾರೆ ಅಷ್ಟೇ. 'ಕುಂಬಳಕಾಯಿ ಕಳ್ಳ' ಅಂದ್ರೆ ಹೆಗಲು ಮುಟ್ಟಿಕೊಳ್ಳುವವರಿಗಷ್ಟೇ ಆ ಪಾತ್ರ ಕೋಪ ತರಿಸಬಲ್ಲುದು ಅಷ್ಟೇ!

ಈಗ ಎಲ್ಲರ ಕಣ್ಣು ಕೆಂಪಗಾಗಿಸಿದ 'ಆವರಣ'ದ ವಿಷಯಕ್ಕೆ ಬರೋಣ. ಅಲ್ಲಿ ಚಿತ್ರಿತವಾದದ್ದು ಇಸ್ಲಾಂ ಧರ್ಮದ ಬಗ್ಗೆ, ಔರಂಗಜೇಬನ, ಮೊಘಲರ ಕ್ರೌರ್ಯದ ಬಗ್ಗೆ. ಲಕ್ಷ್ಮೀ, ರಜಿಯಾ ಆದಮೇಲೆ ಗಂಡನ ಮನೆಯಲ್ಲಿ ಅನುಭವಿಸುವ ತೊಂದರೆಗಳ ಬಗ್ಗೆ. ಮೊಘಲರ ದಾಳಿ, ಅವರು ಸೆರೆ ಹಿಡಿದ ರಾಜರ ಮೇಲೆ ತೋರಿಸುತ್ತಿದ್ದ ಕ್ರೌರ್ಯ, ಹುಡುಗರನ್ನು ನಪುಂಸಕರನ್ನಾಗಿಸಿ ಜನಾನಾದ ಕಾವಲಿಗೆ ಹಾಕುವ ಬಗ್ಗೆ, ಹುಡುಗಿಯರನ್ನು ಅಂತಃಪುರಕ್ಕೆ ಸೇರಿಸಿಕೊಳ್ಳುವ ಬಗ್ಗೆ. ಭೈರಪ್ಪನವರ ವಿರೋಧ ಶುರುವಾಗಿದ್ದೇ ಇಲ್ಲಿ. ಅಖಂಡ ಐದು ದಶಕಗಳ ಕಾಲ ಅವರು ಹಿಂದೂ ಪಾತ್ರಗಳನ್ನು ('ಭಿತ್ತಿ'ಯಲ್ಲಿ ತನ್ನಪ್ಪನ ನಿಜರೂಪದ ಸಮೇತ) ವಿಧವಿಧವಾಗಿ ಚಿತ್ರಿಸಿದರೂ ಯಾರ ತಕರಾರೂ ಇರಲಿಲ್ಲ. ಹಿಂದೂಗಳು ದೇವರೆಂದು ಪೂಜಿಸುವ ರಾಮ-ಕೃಷ್ಣರನ್ನು ಕಟಕಟೆಯಲ್ಲಿ ನಿಲ್ಲಿಸಿದರೂ ಸಮಸ್ಯೆ ಇರಲಿಲ್ಲ. ಆದರೆ ಪುಸ್ತಕದ ಕೊನೆಯಲ್ಲಿ ನೂರಿನ್ನೂರು ಆಕರಗ್ರಂಥಗಳ ಮಾಹಿತಿ ಕೊಟ್ಟು ಆಧಾರವಿಟ್ಟೇ ಬರೆದರೂ 'ಆವರಣ'ದ ಇತಿಹಾಸ ಕೆಲವರಿಗೆ ಸಹ್ಯವಾಗಲಿಲ್ಲ. ನೆನಪಿಡಿ- ಈ ದೇಶದ ಯಾವುದೇ ಸನಾತನಿಗೂ ರಾಮಾಯಣ, ಮಹಾಭಾರತ ಗೊಡ್ಡು ಪುರಾಣ ಅಲ್ಲ. ಅದು ಇತಿಹಾಸವೇ. ರಾಮ, ಕೃಷ್ಣರು ದೇವರೇ. ಅಂದಮೇಲೆ ಪಂಥ ರಾಜಕೀಯ ಮಾಡಿದ್ದು ಯಾರು? 'ಪರ್ವ'ದಲ್ಲಿ, 'ಧರ್ಮಶ್ರೀ'ಯಲ್ಲಿ, 'ವಂಶವೃಕ್ಷ'ದಲ್ಲಿ, 'ದಾಟು'ವಿನಲ್ಲಿ ಕಾಣದ 'ಕೇಸರೀ ಬಣ್ಣ'ವು 'ಆವರಣ'ದಲ್ಲಿ ಹೇಗೆ ಕಂಡಿತು? ಆ ಎಲ್ಲ ಕೃತಿಗಳನ್ನು ಓದಿದವರಿಗೆ 'ಆವರಣ' ಯಾಕೆ ಸಹ್ಯವಾಗಲಿಲ್ಲ? ಹೋಗಲಿ, 'ಆವರಣದ'ಲ್ಲಿ ಬರೆದ ಇತಿಹಾಸ ತಪ್ಪು ಅಂತ ಯಾರಾದರೂ ಆಧಾರ ಸಮೇತ ತೋರಿಸುವ ಪ್ರಯತ್ನ ಮಾಡಿದರಾ? ಇಲ್ಲ. ಹಿಂದೂ ಪಾತ್ರಗಳ ನ್ಯೂನತೆಗಳನ್ನು, ಹಿಂದೂ ದೇವರುಗಳ ಮನುಷ್ಯೀಕರಣವನ್ನು ಸಹಿಸಿದವರಿಗೆ ಇಸ್ಲಾಂ ಬಗ್ಗೆ ಬರೆದ ಒಂದೇ ಕೃತಿ ಯಾಕೆ ಉರಿ ಹತ್ತಿಸಿತು? ಆತ್ಮಸಾಕ್ಷಿ ಅಂತ ಒಂದಿದ್ದರೆ ಭೈರಪ್ಪನವರನ್ನು ಈ ಕಾರಣಗಳಿಗಾಗಿ ವಿರೋಧಿಸುವವರು ತಮ್ಮನ್ನು ತಾವೇ ಕೇಳಿಕೊಳ್ಳಲಿ.

(ಲೇಖಕಿ ಹವ್ಯಾಸಿ ಬರಹಗಾರ್ತಿ)

ಸಮಾಚಾರ ಸಣ್ಣದಲ್ಲ

ನೇಣಿಗೆ ಶರಣಾದ ಪಿಯು ವಿದ್ಯಾರ್ಥಿನಿ

ಬಾಗಲಕೋಟೆ: ಪ್ರಥಮ ವರ್ಷದ ಪಿಯುಸಿ ವಿದ್ಯಾರ್ಥಿನಿ ನೇಣಿಗೆ ಶರಣಾದ ಘಟನೆ ನಗರದ ವಿದ್ಯಾಗಿರಿಯ ಹಾಸ್ಟೆಲ್‌ವೊಂದರಲ್ಲಿ ನಡೆದಿದೆ. ಜಿಲ್ಲೆಯ ಬೀಳಗಿ ತಾಲೂಕಿನ ಸೀಮಾ ಲಮಾಣಿ (17) ಮೃತ ದುರ್ದೈವಿ. ನಗರದ ಖಾಸಗಿ ಕಾಲೇಜಿನಲ್ಲಿ ಪ್ರಥಮ ವರ್ಷದ ಪಿಯುಸಿ ಓದುತ್ತಿದ್ದ ಸೀಮಾ ವಿದ್ಯಾಗಿರಿಯ ಹಾಸ್ಟೆಲ್‌ನಲ್ಲಿ ಇರುತ್ತಿದ್ದಳು. ಮೂರು ದಿನದ ಹಿಂದೆ ಊರಿಗೆ ತೆರಳಿದ್ದರು. ಆಕೆಯನ್ನು ಗುರುವಾರ ಮಧ್ಯಾಹ್ನ ಚಿಕ್ಕಪ್ಪ ಕರೆತಂದು ಹಾಸ್ಟೆಲ್‌ಗೆ ಬಿಟ್ಟಿದ್ದರು. ಸಂಜೆ 4.30ರ ಹೊತ್ತಿಗೆ ಹಾಸ್ಟೆಲ್‌ನ ತನ್ನ ಕೊಠಡಿಯಲ್ಲಿ ಒಬ್ಬಳೇ ಇದ್ದಾಗ ಟವೆಲ್‌ನಿಂದ ಕಿಟಕಿ ಮೇಲಿನ ಗ್ರಿಲ್‌ಗೆ ನೇಣು ಹಾಕಿಕೊಂಡಿದ್ದಾಳೆ. ಇದನ್ನು ಕಂಡ ವಿದ್ಯಾರ್ಥಿನಿಯರು ಹಾಗೂ ಹಾಸ್ಟೆಲ್ ವಾರ್ಡನ್ ತಕ್ಷಣ ಜಿಲ್ಲಾಸ್ಪತ್ರೆಗೆ ಸಾಗಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ. ಘಟನೆ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಪೋಷಕರು ಶವಾಗಾರದ ಮುಂದೆ ಜಮಾಯಿಸಿ, ಮಗಳ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಕುರಿತು ಸೀಮಾ ತಾಯಿ ನವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮಕ್ಕಳ ಕೊಂದ ತಂದೆಯ ಬಂಧನ

ಯಾದಗಿರಿ: ತಾಲೂಕಿನ ಹತ್ತಿಕುಣಿ ಸಮೀಪದ ದುಗನೂರ್ ಹಟ್ಟಿಯಲ್ಲಿ ಪತ್ನಿಯ ಶೀಲ ಶಂಕಿಸಿ ಇಬ್ಬರು ಮಕ್ಕಳನ್ನು ಕೊಂದು ಪರಾರಿಯಾಗಿ ಗ್ರಾಮದ ಸಮೀಪದ ಬೆಟ್ಟದಲ್ಲಿ ಅಡಗಿದ್ದ ಆರೋಪಿ ಶರಣಪ್ಪ ಹಣಮಂತ ನನ್ನು ಪೊಲೀಸರು ಬಂಧಿಸಿದ್ದಾರೆ. ಶರಣಪ್ಪ ತಮ್ಮ ಮಕ್ಕಳಾದ ಸಾನ್ವಿ (4) ಹಾಗೂ ಎರಡೂವರೆ ವರ್ಷದ ಭಾರ್ಗವ್‌ನನ್ನು ಕೊಡಲಿ ಯಿಂದ ಹೊಡೆದು ಕೊಲೆ ಮಾಡಿದ್ದನು. ಗಾಯ ಗೊಂಡ ಇನ್ನೊಬ್ಬ ಮಗ ಹೇಮಂತ್‌ನನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಸಂಬಂಧ ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ಕೌಟುಂಬಿಕ ಕಲಹದಿಂದಾಗಿ ಶರಣಪ್ಪ ಇಬ್ಬರು ಮಕ್ಕಳನ್ನು ಕೊಂದು, ತಲೆ ಮರೆಸಿಕೊಂಡ ಆರೋಪಿಯನ್ನು ಪತ್ತೆ ಹಚ್ಚಿ ವಶಕ್ಕೆ ಪಡೆಯಲಾಗಿದೆ.

ಚರಂಡಿಗೆ ಬಿದ್ದು ಬಾಲಕ ಸಾವು

ಬಳ್ಳಾರಿ: ಚರಂಡಿ ಗುಂಡಿಗೆ ಬಿದ್ದು 4 ವರ್ಷದ ಬಾಲಕ ಬಾಲಕ ದಾರುಣವಾಗಿ ಮೃತಪಟ್ಟಿರುವ ಘಟನೆ ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ಕುರೇಕುಪ್ಪ ಗ್ರಾಮದಲ್ಲಿ ನಡೆದಿದೆ. ಕುರೇಕುಪ್ಪದ 6ನೇ ವಾರ್ಡ್‌ನ ಪಿ ಅರವಿಂದ್ (4) ಮೃತ ಬಾಲಕ. ಗುರುವಾರ ಸಂಜೆ ಆಟವಾಡುತ್ತಾ ತಾತನ ಮನೆಗೆ ಬಾಲಕ ಹೊರಟಿದ್ದನು. ಈ ವೇಳೆ ಕಾಲು ಜಾರಿ ಚರಂಡಿ ನೀರು ತುಂಬಿದ್ದ ಗುಂಡಿಗೆ ಬಿದ್ದಿದ್ದಾನೆ. ರಾತ್ರಿಯಾದರೂ ಮನೆಗೆ ಬಾರದೇ ಇದ್ದಾಗ ಗಾಬರಿಗೊಂಡ ಪೋಷಕರು ಹುಡುಕಾಡಿದ್ದಾರೆ. ತಡರಾತ್ರಿ ಚರಂಡಿ ನೀರಿನಲ್ಲಿ ಬಾಲಕನ ದೇಹ ಕಂಡು ಬಂದಿದೆ. ಕೂಡಲೇ ಜಿಂದಾಲ್ ಆಸ್ಪತ್ರೆಗೆ ಪೋಷಕರು ಕರೆದೊಯ್ದಿದ್ದಾರೆ. ಸಮರ್ಪಕವಾಗಿ ಚರಂಡಿ ನಿರ್ವಹಣೆ ಮಾಡದೆ ಇರುವುದೇ ಬಾಕಲನ ಸಾವಿಗೆ ಕಾರಣ ಎಂದು ಪೋಷಕರು ಆರೋಪಿಸಿದ್ದು, ಪುರಸಭೆ ಅಧಿಕಾರಿಗಳ ವಿರುದ್ಧ ಕಿಡಿಕಾರಿದ್ದಾರೆ. ಘಟನೆ ಸಂಬಂಧ ತೋರಣಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಷ್ಟ್ರ ಧ್ವಜಕ್ಕೆ ಅಪಮಾನ: ಅಮಾನತಿಗೆ ಆಗ್ರಹ

ಜೇವರ್ಗಿ: ಕಲಬುರಗಿ ಜಿಲ್ಲೆಯ ಜೇವರ್ಗಿ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಹರಿದ ರಾಷ್ಟ್ರ ಧ್ವಜ ಹಾರಾಡಲು ಬಿಟ್ಟು ಅಪಮಾನ ಮಾಡಲಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹರಿದ ರಾಷ್ಟ್ರ ಧ್ವಜ ತೆರವುಗೊಳಿಸಬೇಕು ಎಂದು ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಿದರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಆದರೆ, ಯುವಕರು ಬಾವುಟದ ದೃಶ್ಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದರು. ಬಳಿಕ ಎಚ್ಚೆತ್ತ ಅಧಿಕಾರಿಗಳು ಧ್ವಜವನ್ನು ತಕ್ಷಣ ತೆರವುಗೊಳಿಸಿದ್ದಾರೆ. ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳನ್ನು ಅಮಾನತು ಮಾಡಲು ಜೇವರ್ಗಿ ಮಂಡಲದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಭಾಗೇಶ್ ಹೋತಿನಮಡು ಆಗ್ರಹಿಸಿದ್ದಾರೆ.

ಸಾರಿಗೆ ಬಸ್ ಪಲ್ಟಿ: 8 ಮಂದಿಗೆ ಗಾಯ

ರಾಯಚೂರು: ಸಾರಿಗೆ ಸಂಸ್ಥೆಯ ಸ್ಲೀಪರ್ ಕೋಚ್ ಬಸ್ ಪಲ್ಟಿಯಾದ ಪರಿಣಾಮ ಒಬ್ಬ ಪ್ರಯಾಣಿಕನ ಕಾಲು ಮುರಿದಿದ್ದು 8 ಪ್ರಯಾ ಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ರಾಯ ಚೂರಿನ ಹೊರವಲಯದ ಸಾಥಮೈಲ್ ಕ್ರಾಸ್ ಹತ್ತಿರ ಶುಕ್ರವಾರ ಬೆಳಗ್ಗೆ ಅವಘಡ ಸಂಭವಿಸಿದೆ. ದಾವಣಗೆರೆಯಿಂದ ರಾಯಚೂರಿಗೆ ಬಸ್ ತೆರಳುತ್ತಿತ್ತು. ಏಕಾಏಕಿ ಅಡ್ಡಬಂದ ನಾಯಿಗೆ ಡಿಕ್ಕಿ ಹೊಡೆಯುವುದನ್ನು ಚಾಲಕ ತಪ್ಪಿಸಲು ಹೋಗಿದ್ದಾನೆ. ಈ ವೇಳೆ ಬಸ್ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಬಸ್‌ನಲ್ಲಿ ಚಾಲಕ ಸೇರಿ 16 ಮಂದಿ ಇದ್ದರು ಎನ್ನಲಾಗಿದ್ದು, ಒಬ್ಬ ಪ್ರಯಾಣಿಕನಿಗೆ ಗಂಭೀರ ಗಾಯವಾಗಿದ್ದು, ರಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಸಂಬಂಧ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತ ದಸರಾಗೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ | ಗಮನ ಸೆಳೆದ ಪುಂಗನೂರು ಗಿಡ್ಡ ತಳಿ ಹಸುಗಳು

ಕೃಷಿ ತಂತ್ರಜ್ಞಾನ ಪರಿಚಯಕ್ಕೆ ರೈತ ದಸರಾ ವೇದಿಕೆ

ಮೈಸೂರು: ಹಿಂದೆ ನಡೆದು ಬಂದ ಆಚಾರ-ವಿಚಾರ ಸಂಪ್ರದಾಯ ಪದ್ಧತಿಗಳನ್ನು ಇಂದಿಗೂ ನಮ್ಮ ನಾಡಿ ರೈತರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಿಸಿದರು.

ದಸರಾ ಅಂಗವಾಗಿ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಆಯೋಜಿಸಲಾಗಿದ್ದ, ರೈತ ದಸರಾ ಮೆರವಣಿಗೆ ಉದ್ಘಾಟಿಸಿ ಮಾತನಾಡಿದ ಅವರು, ಈ ಬಾರಿ ರೈತ ದಸರಾದಲ್ಲಿ ರೈತರಿಗೆ ಹೆಚ್ಚು ಅವಕಾಶ ನೀಡಬೇಕು. ರೈತರ ಪ್ರಗತಿಗೆ ನಾವೆಲ್ಲರೂ ಒಗ್ಗಟ್ಟಾಗಿ ನಿಲ್ಲಬೇಕು. ಮೈಸೂರು ದಸರಾ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವುದು ನಮ್ಮ ದೇಶದ ಹೆಮ್ಮೆಯ ವಿಷಯವಾಗಿದೆ ಎಂದರು.

ಪಶುಸಂಗೋಪನಾ ಹಾಗೂ ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ರೈತ ದಸರಾದಲ್ಲಿ ಹೊಸ ಹೊಸ ತಂತ್ರಜ್ಞಾನದ ಪರಿಚಯ ಮಾಡುವುದು, ಅವುಗಳ ಉಪಯೋಗದ ಬಗ್ಗೆ ತಿಸುವಂತಹ ಕೆಲಸ ಮಾಡುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಕೃಷಿ ದಿನ ಕಳೆದಂತೆ ದುಬಾರಿಯಾಗುತ್ತಿದ್ದು, ವ್ಯವಸಾಯದಲ್ಲಿ ತಂತ್ರಜ್ಞಾನಗಳನ್ನು ಬಳಸಿಕೊಂಡು ರೈತರು ಉತ್ಕೃಷ್ಟ ಬೆಳೆಯನ್ನು ಬೆಳೆಯಬೇಕಾಗಿದೆ. ಇದಕ್ಕೆ ಆಧುನಿಕ ಕೃಷಿ ಬಗ್ಗೆ ತಿಳುವಳಿಕೆ ಮೂಡಿಸುವುದು ಅಗತ್ಯವಿದೆ ಎಂದರು.

ಪುಂಗನೂರು ತಳಿ: ಅರಮನೆ ಕೋಟೆ ಆಂಜನೇಯ ಮೈದಾನದಿಂದ ದೇವರಾಜ ಅರಸು ರಸ್ತೆಯ ಮೂಲಕ ಜೆ.ಕೆ ಗ್ರೌಂಡ್ ವರೆಗೂ ಸಾಗಿದ ರೈತ ಮೆರವಣಿಗೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಈ ಬಾರಿ ಮೆರವಣಿಗೆ ವೇಳೆ ವಿಶೇಷವಾಗಿ ಆಂಧ್ರ ತಳಿಯಾದ ಪುಂಗನೂರು ಎತ್ತು, ಹೋರಿ, ಹಳ್ಳಿಕಾರ್ ತಳಿ, ಬಂಡೂರು ಕುರಿಗಳು, ಎತ್ತಿನಗಾಡಿ ಎತ್ತುಗಳನ್ನು ಕರೆಸಲಾಗಿತ್ತು.

ಈ ಸಂದರ್ಭದಲ್ಲಿ ಶಾಸಕ ಕೆ. ಹರೀಶ್ ಗೌಡ, ಚಾಮುಂಡೇಶ್ವರಿ ವಿದ್ಯುತ್ ನಿಗಮದ ಅಧ್ಯಕ್ಷ ರಮೇಶ್ ಬಂಡಿ ಸಿದ್ದೇಗೌಡ, ರೈತ ದಸರಾದ ಕಮಿಟಿಯ ಅಧ್ಯಕ್ಷ ಯೋಗೇಶ್ ಹಾಗೂ ರೈತ ಮುಖಂಡರು ಉಪಸ್ಥಿತರಿದ್ದರು.

ಕೃಷಿ ವಸ್ತು ಪ್ರದರ್ಶನ: ದಸರಾ ಪ್ರಯುಕ್ತವಾಗಿ ನಗರದ ಜೆ.ಕೆ ಮೈದಾನದಲ್ಲಿ ಆಯೋಜಿಸಿರುವ ರೈತ ದಸರಾ ವಸ್ತು ಪ್ರದರ್ಶನದಲ್ಲಿ ಕೃಷಿಯ ವೈವಿಧ್ಯಮಯ ಮಾಹಿತಿಯನ್ನು ನೀಡಲೆಂದೇ 46 ಮಳಿಗೆಗಳನ್ನು ತೆರೆಯಲಾಗಿದೆ. ಧಾನ್ಯಗಳು, ಪುಷ್ಪ ಕೃಷಿಯ ಜತೆಗೆ, ಖಾದ್ಯ ಯೋಗ್ಯ ಪ್ರಾಣಿಗಳ ಸಾಕಾಣಿಯನ್ನು ಸಹ ಪ್ರದರ್ಶನದಲ್ಲಿಡಲಾಗಿದೆ. ಬಂಡೂರು ಕುರಿ, ಡಾರ್ಕ್ ಫಾರ್ ಕುರಿ, ಮೈಸೂರು ನಾಟಿ ಕೋಳಿ, ಕಡಕ್ ನಾಷ್ ಕೋಳಿ, ಆಸಿಲ್ ಕೋಳಿ, ಟರ್ಕಿ ಕೋಳಿ, ಗಿನಿ ಪೌಲ್ ಕೋಳಿ, ಡಕ್ಸ್ ಕೋಳಿ, ಪುಂಗನೂರು ಹಸು, ಓಂಗೋಲ್ ಹಸು, ಸಾಹಿವಾಲ್ ಹಸು, ಗಿರ್ ಹಸು, ಹಳ್ಳಿಕಾರ್ ಹಸು ಹಾಗೂ ಮಲ್ನಾಡು ಗಿಡ್ಡ ಹಸುಗಳ ಪ್ರದರ್ಶನಗಳಿದ್ದವು.



ಮೈಸೂರು ನಗರದ ಜೆ.ಕೆ ಮೈದಾನದಲ್ಲಿ ದಸರಾ ನಿಮಿತ್ತ ಆಯೋಜಿಸಿರುವ ರೈತ ದಸರಾವನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಉದ್ಘಾಟಿಸಿದರು.

ಡ್ರೋಣ್ ಶೋ ಚಿತ್ರೀಕರಣ ನಿರ್ಬಂಧ

ದಸರಾ ಮಹೋತ್ಸವದ ಅಂಗವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಅತಿದೊಡ್ಡ ಡ್ರೋನ್ ಪ್ರದರ್ಶನ ಸೆ.28, 29 ಹಾಗೂ ಅ.1 ಮತ್ತು 2ರಂದು ಅಭೂತಪೂರ್ವ ಪ್ರದರ್ಶನ ನಡೆಯಲಿದೆ. ಈ ಡ್ರೋನ್ ಪ್ರದರ್ಶನ ನಡೆಯುವ ವೇಳೆ ಕೆಲವು ಖಾಸಗಿ ವ್ಯಕ್ತಿಗಳು ಹಾಗೂ ಸಂಸ್ಥೆಗಳು ತಮ್ಮ ಡ್ರೋನ್‌ಗಳನ್ನು ಹಾರಿಸಿ ಸೆಸ್ಕ್ ವತಿಯಿಂದ ನಡೆಸಲಾಗುವ ಡ್ರೋನ್ ಪ್ರದರ್ಶನದ ದೃಶ್ಯಾವಳಿಗಳನ್ನು ಸೆರೆಹಿಡಿಯುವುದು ಹಾಗೂ ಡ್ರೋನ್‌ಗಳ ಮೂಲಕ ಚಿತ್ರೀಕರಿಸಿದ ದೃಶ್ಯದ ತುಣುಕುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುವುದಕ್ಕೆ ನಿರ್ಬಂಧ ಹೇರಲಾಗಿದೆ.

ರಾಸಾಯನಿಕ ಮುಕ್ತ ಬೆಲ್ಲ

ಮಂಡ್ಯದ ರೈತರು ತಂದಿದ್ದ ಸಾವಯವ ಬೆಲ್ಲ ಗಮನ ಸೆಳೆಯಿತು. ಅದೇ ರೀತಿ ಬರಗಾಲ ನಿರ್ವಹಣೆ ಪರ್ಯಾಯ ಬೆಳೆ ಪದ್ಧತಿ ಹಾಗೂ ಮಣ್ಣು ನೀರು ಸಂರಕ್ಷಣಾ ವಿಧಾನ, ಪಿಎಂ ಕಿಸಾನ್, ರೈತರ ಬೆಳೆ ಸಮೀಕ್ಷೆ, ಪ್ರಧಾನ ಮಂತ್ರಿ ಕೃಷಿ ಸಿಂಚಾಯ, ರೈತ ಸಂಪರ್ಕ ಕೇಂದ್ರಗಳು, ಸಿರಿಧಾನ್ಯ ವಿವರ ಸೇರಿದಂತೆ ಸರಕಾರದ ಯೋಜನೆಗಳ ಮಾಹಿತಿ ಮತ್ತು ಕೃಷಿ ಮಾಡುವ ವಿಧಾನದ ಕುರಿತು ಮಳಿಗೆಗಳು ಅರಿವು ಮೂಡಿಸಿದವು.

ಗಮನ ಸೆಳೆದ ಕೃಷಿ ತಂತ್ರಜ್ಞಾನ

ಹೊಸ ಹೊಸ ಕೃಷಿ ತಂತ್ರಜ್ಞಾನಗಳಾದ ಬೆಳೆಗೆ ಔಷಧ ಸಿಂಪಡಿಸುವ ಡ್ರೋನ್ ತಂತ್ರಜ್ಞಾನ ಯಂತ್ರ, ಭತ್ತ ನಾಟಿ ಯಂತ್ರ, ಇಫ್ಕೋ ನ್ಯಾನೋ ಯೂರಿಯಾ ಲಿಕ್ವಿಡ್, ಸ್ವರಾಜ್ ಯಂತ್ರ, ಕಿಸಾನ್ ಬಂಡಿ, ಪವರ್ ಇಂಟರ್ ಕಲ್ಟಿವೇಟರ್ ಯಂತ್ರ, ಕಳೆ ತೆಗೆಯುವ ಯಂತ್ರ, ಹೈಟೆಕ್ ಹಾರ್ವೆಸ್ಟರ್ ಹಬ್, ಬಹು ಬೆಳೆಯ ಒಕ್ಕಣೆ ಯಂತ್ರ, ಭತ್ತದ ಬೇಲರ್, ಕಬ್ಬು ನಾಟಿ ಯಂತ್ರ, ಕಬ್ಬು ಕಟಾವು ಯಂತ್ರ ತೋಟಗಾರಿಕೆ ಇಲಾಖೆಯ ಟ್ಯಾಬ್ಲೋಗಳಂತಹ ಹೊಸ ಹೊಸ ತಂತ್ರಜ್ಞಾನಗಳನ್ನು ಪ್ರದರ್ಶಿಸಲಾಯಿತು.

ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡಿ, ಹೊಸ ಸಂಪ್ರದಾಯಕ್ಕೆ ಮುನ್ನುಡಿ

ಕೆಆರ್‌ಎಸ್‌ನಲ್ಲಿ ಪ್ರಥಮ ಬಾರಿಗೆ ಕಾವೇರಿ ಆರತಿ

ಮಂಡ್ಯ: ಕೆಆರ್‌ಎಸ್ ಜಲಾಶಯದಲ್ಲಿ ಕಾವೇರಿ ನದಿಗೆ ಪ್ರಥಮ ಬಾರಿಗೆ ಕಾವೇರಿ ಆರತಿ ಮಾಡಿಸುವ ಮೂಲಕ ಹೊಸ ಸಂಪ್ರದಾಯಕ್ಕೆ ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಹಾಗೂ ಡಿ.ಕೆ.ಶಿವಕುಮಾರ್ ಮುನ್ನುಡಿ ಬರೆದರು. ಕಾವೇರಮ್ಮನ ಒಡಲು ಸದಾ ತುಂಬಿರಬೇಕು. ಕೆಆರ್‌ಎಸ್ ವರ್ಷ ಪೂರ್ತಿ ಭರ್ತಿಯಾಗಿರಬೇಕು. ನಾಡು ಸುಖ, ಶಾಂತಿ ಸಮೃದ್ಧಿಯಿಂದ ಕೂಡಿರಲೆಂದು ಡಿ.ಕೆ.ಶಿವಕುಮಾರ್ ಕಾವೇರಿ ಮಾತೆಗೆ ಆರತಿಯ ಜ್ಯೋತಿ ಬೆಳಗಿಸಿದರು.

ವೇದ ಮಂತ್ರಗಳ ಪಠಣ: ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ಕೃಷ್ಣರಾಜ ಸಾಗರದ ಬೃಂದಾವನದಲ್ಲಿ ಗೋಧೂಳಿ ಮುಹೂರ್ತದಲ್ಲಿ ಕಾವೇರಿ ನದಿಗೆ ಪುಷ್ಪಾರ್ಚನೆ ಮಾಡಿ, ತಾಯಿ ಕಾವೇರಿಗೆ ಆರತಿ ಬೆಳಗಿ ನಾಡಿನ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸಿದರು. ದಕ್ಷಿಣ ಭಾರತದ ಇತಿಹಾಸದಲ್ಲೇ ಪ್ರಪ್ರಥಮವಾಗಿ ಕಾವೇರಿ ಆರತಿಯನ್ನು ಸಾಂಕೇತಿಕವಾಗಿ ನೆರವೇರಿಸಲಾ ಯಿತು. ಶಂಖನಾದ, ಡೋಲು, ನಗಾರಿ ಸದ್ದಿನೊಂದಿಗೆ, ವೇದ ಮಂತ್ರಗಳ ಪಠಣದೊಂದಿಗೆ ಸುಮಾರು ಒಂದು ಗಂಟೆಗಳ ಕಾಲ ನೆರವೇರಿದ ಕಾವೇರಿ ಆರತಿ ನೆರೆದಿದ್ದವರನ್ನು ಮೂಕವಿಸ್ಮಿತರನ್ನಾಗಿಸಿತು.

ಹೊರರಾಜ್ಯದ ಜನ: ಕರ್ನಾಟಕದಿಂದ ಮಾತ್ರವಲ್ಲದೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ಹೊರರಾಜ್ಯಗಳಿಂದ ಆಗಮಿಸಿದ ಸಹಸ್ರಾರು ಪ್ರವಾಸಿಗರು ಕಾವೇರಿ ಆರತಿಯನ್ನು ಕಣ್ತುಂಬಿಕೊಂಡರು. ಸೆ.26ರಿಂದ ಅಕ್ಟೋಬರ್ 2ರವರೆಗೆ ಪ್ರತಿ ಸಂಜೆ ನೆರವೇರಲಿರುವ ಕಾವೇರಿ ಆರತಿ ಮೈಸೂರು ದಸರಾಗೆ ಹೊಸ ಮೆರುಗನ್ನು ತಂದುಕೊಟ್ಟಿತು.

ಈ ಸಂದರ್ಭದಲ್ಲಿ ಸಿದ್ದಗಂಗಾ ಮಠದ ಪೀಠಾಧಿಪತಿ ಶ್ರೀ ಸಿದ್ದಲಿಂಗಸ್ವಾಮೀಜಿ, ಕೆಂಗೇರಿಯ ಒಕ್ಕಲಿಗರ ಮಠದ ಪೀಠಾಧಿಪತಿ ಶ್ರೀನಿಶ್ಚಲಾನಂದ ಸ್ವಾಮೀಜಿ, ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಸಚಿವ ಎನ್.ಚಲುವರಾಯಸ್ವಾಮಿ, ಸಚಿವ ಶಿವರಾಜ್ ತಂಗಡಗಿ, ಚೆಸ್ಕಾಂ ಅಧ್ಯಕ್ಷ ಹಾಗೂ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇ ಗೌಡ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಜಲ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಸೇರಿ ಹಲವರಿದ್ದರು.



ಕೆಆರ್‌ಎಸ್‌ನಲ್ಲಿ ನಡೆದ ಕಾವೇರಿ ಆರತಿಗೆ ಡಿಸಿಎಂ ಡಿಕೆ ಶಿವಕುಮಾರ್ ಚಾಲನೆ ನೀಡಿದರು.

ವಿಚಾರಣೆಗೆ ಹಾಜರು ಆಗದಿದ್ದರೆ ಬಂಧಿಸುವ ಸಾಧ್ಯತೆ

ತಿಮರೋಡಿಗೆ 3ನೇ ನೋಟಿಸ್

ಬೆಳ್ತಂಗಡಿ: ಅಕ್ರಮವಾಗಿರಿಸಿಕೊಂಡಿದ್ದ 2 ತಲವಾರು ಮತ್ತು ಒಂದು ಬಂದೂಕು ಪತ್ತೆ ಪ್ರಕರಣದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಬೆಳ್ತಂಗಡಿ ಪೊಲೀಸ್ ಠಾಣೆಗೆ ವಿಚಾರಣೆಗಾಗಿ ಹಾಜರಾ ಗುವಂತೆ ಎರಡು ನೋಟಿಸ್ ಜಾರಿ ಮಾಡಿದ್ದರೂ ಈವರೆಗೆ ಹಾಜರಾಗದ ಕಾರಣ ಸೆ.26 ರಂದು ತಿಮರೋಡಿ ಮನೆಗೆ ಬೆಳ್ತಂಗಡಿ ಪೊಲೀಸರು ಮೂರನೇ ನೋಟಿಸ್ ಜಾರಿ ಮಾಡಿದ್ದಾರೆ. ಸೆ.29 ಕ್ಕೆ ವಿಚಾರಣೆಗೆ ಹಾಜರಾಗುಂತೆ ನೋಟಿಸ್ ಅನ್ನು ತಿಮರೋಡಿ ಅವರ ಮನೆಯ ಗೋಡೆಗೆ ಅಂಟಿಸಿದ್ದಾರೆ.

ಮಹೇಶ್ ಶೆಟ್ಟಿ ತಿಮರೋಡಿ ಅವರು ಅಕ್ರಮ ಶಸ್ತ್ರಾಸ್ತ್ರ ಪ್ರಕರಣದಲ್ಲಿ ಜಾಮೀನಿಗಾಗಿ ಮಂಗಳೂರಿನ ಸೆಷನ್ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಅದರ ವಿಚಾರಣೆ ಸೆ27ರಂದು ನಡೆಯಲಿದೆ. ಇಲ್ಲಿ ಅವರಿಗೆ ನಿರೀಕ್ಷಣಾ ಜಾಮೀನಿನ ಮೇಲೆ ತೀರ್ಪು ಬರುವವರೆಗೆ ಅವರು ಠಾಣೆಗೆ ಹಾಜರಾಗುವ ಸಾಧ್ಯತೆಗಳು ಕಡಿಮೆ ಎಂದು ಹೇಳಲಾಗುತ್ತಿದೆ. ಈ ಬಾರಿಯು ವಿಚಾರಣೆಗೆ ಹಾಜರಾಗದಿದ್ದರೆ ಮಹೇಶ್ ಶೆಟ್ಟಿ ತಿಮ್ಮರೋಡಿ ಅವರನ್ನು ಪೊಲೀಸರು ಬಂಧಿಸುವ ಸಾಧ್ಯತೆ ಇದೆ.

10 ದಿನಗಳಿಂದ ನಾಪತ್ತೆ

ಮಹೇಶ್ ಶೆಟ್ಟಿ ತಿಮರೋಡಿ ಪ್ರಕರಣ ದಾಖಲಾದ ಬಳಿಕ ಕಳೆದ ಹತ್ತು ದಿನಗಳಿಂದ ತಲೆ ಮರೆಸಿಕೊಂಡಿದ್ದಾರೆ. ಈ ನಡುವೆ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ಜಿಲ್ಲೆಯಿಂದ ಗಡಿಪಾರು ಮಾಡಿ ಪುತ್ತೂರು ಸಹಾಯಕ ಕಮಿಷನರ್ ಆದೇಶ ಹೊರಡಿಸಿದ್ದು, ಇದು ಮಹೇಶ್ ಶೆಟ್ಟಿ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಗಡಿಪಾರು ಆದೇಶವನ್ನು ಪ್ರಶ್ನಿಸಿ ಅವರು ಹೈಕೋರ್ಟ್‌ಗೆ ಹೋಗುವ ಅವಕಾಶವಿದ್ದು, ಈ ಬಗ್ಗೆಯೂ ಪ್ರಯತ್ನಗಳು ನಡೆಯುತ್ತಿರುವುದಾಗಿ ಮಾಹಿತಿ ಬಂದಿದೆ.

ಬೆಳೆ ಖರೀದಿ ಪ್ರಕ್ರಿಯೆ ಆರಂಭಿಸಲು ಶಿವಾನಂದ ಪಾಟೀಲ ಆದೇಶ

ಉದ್ದು, ಹೆಸರು ಖರೀದಿಗೆ ಬೆಂಬಲ ಬೆಲೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ, ಸರಕಾರದ ಬೆಂಬಲ ಬೆಲೆ ಯೋಜನೆಯಲ್ಲಿ ಮುಂಗಾರು ಹಂಗಾಮಿನ ಉದ್ದಿನ ಕಾಳು, ಹೆಸರುಕಾಳು ಹಾಗೂ ಸೂರ್ಯಕಾಂತಿ ಖರೀದಿ ಪ್ರಕ್ರಿಯೆ ಆರಂಭಿಸಬೇಕು ಎಂದು ಕೃಷಿ ಮಾರು ಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಗಳಿಗೆ ಆದೇಶ ಹೊರಡಿಸಿದ್ದಾರೆ.

ಖರೀದಿ ಏಜನ್ಸಿಗಳೊಂದಿಗೆ ಚರ್ಚಿಸಿ, ತ್ವರಿತವಾಗಿ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆ ಆರಂಭ ಮಾಡಿ ಎಂದು ನಿರ್ದೇಶನ ನೀಡಿದ್ದಾರೆ. ಬೆಂಬಲ ಬೆಲೆ ಯೋಜನೆಯನ್ನು ದುರ್ಬಳಕೆ ಮಾಡಿಕೊಳ್ಳಲು ವರ್ತಕರಿಗೆ ಅವಕಾಶ ನೀಡಬಾರದು. ರೈತರ ಹೆಸರಿನಲ್ಲಿ ಮಾರಾಟ ಮಾಡಲು ಬರುವ ವರ್ತಕರ ಬಗ್ಗೆ ಎಚ್ಚರಿಕೆ ವಹಿಸಬೇಕು ಹಾಗೂ ಅವರಿಂದ ಖರೀದಿ ಮಾಡಬಾರದು ಎಂದು ತಿಳಿಸಿದ್ದಾರೆ. ಗದಗ, ಧಾರವಾಡ, ಹಾವೇರಿ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ, ಕಲಬುರಗಿ, ಯಾದಗಿರಿ, ಬೀದರ್, ತುಮಕೂರು, ಹಾಸನ, ಮೈಸೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಸರುಕಾಳು, ಕಲಬುರಗಿ, ಬೀದರ್, ಯಾದಗಿರಿ, ಗದಗ, ಧಾರವಾಡ, ವಿಜಯಪುರ ಬಾಗಲಕೋಟ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಉದ್ದಿನಕಾಳು ಹಾಗೂ ಬಾಗಲಕೋಟೆ, ಬಳ್ಳಾರಿ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ರಾಯಚೂರು, ವಿಜಯಪುರ, ವಿಜಯನಗರ, ಯಾದಗಿರಿ, ಮೈಸೂರು, ಚಿಕ್ಕಮಗಳೂರು, ಬೆಳಗಾವಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಸೂರ್ಯಕಾಂತಿ ಖರೀದಿ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಪ್ರತಿ ಕ್ವಿಂಟಾಲ್‌ಗೆ ದರವೆಷ್ಟು?

- **ಹೆಸರುಕಾಳು** : 8,768 ರು.
- **ಉದ್ದಿನಕಾಳು** : 7,800 ರು.
- **ಸೂರ್ಯಕಾಂತಿ** : 7,721 ರು.

ತಾಂತ್ರಿಕ ಸೌಲಭ್ಯದ ಗೋದಾಮು ಆಯ್ಕೆ

ನೋಂದಣಿ ಕಾಲಾವಧಿಯನ್ನು 80 ದಿನ ಹಾಗೂ ಖರೀದಿ ಅವಧಿಯನ್ನು 90 ದಿನ ನಿಗದಿಪಡಿಸಲಾಗಿದ್ದು, ನೋಂದಣಿ ಮತ್ತು ಖರೀದಿ ಪ್ರಕ್ರಿಯೆಯನ್ನು ಏಕಕಾಲಕ್ಕೆ ಆರಂಭಿಸಬೇಕು. ಖರೀದಿ ಸಂಸ್ಥೆಗಳು ರೈತರಿಗೆ ಅನುಕೂಲವಾಗು ವಂತೆ ನಾಫೆಡ್ ಹಾಗೂ ಎನ್ಸಿಸಿಎಫ್ ಮಾರ್ಗಸೂಚಿ ಅನ್ವಯ ಹಾಗೂ ತಾಂತ್ರಿಕ ಮತ್ತು ವೈಜ್ಞಾನಿಕ ಸೌಲಭ್ಯದಿಂದ ಕೂಡಿರುವ ಗೋದಾಮುಗಳನ್ನು ಹೊಂದಿರುವ ಸಂಸ್ಥೆಗಳ ಮೂಲಕ ಒಡಂಬಡಿಕೆ ಮಾಡಿ ಕೊಂಡು ಖರೀದಿ ಕೇಂದ್ರ ತೆರೆಯಬೇಕು ಎಂದು ಸಚಿವ ಶಿವಾನಂದ ಪಾಟೀಲ ಸೂಚನೆ ನೀಡಿದ್ದಾರೆ.

ಭಾರೀ ಮಳೆ: ಜನಜೀವನ ಅಸ್ತವ್ಯಸ್ತ

ಯಾದಗಿರಿ: ಕಳೆದ ಬುಧವಾರ ರಾತ್ರಿಯಿಂದ ಧಾರಾಕಾರವಾಗಿ ಬೀಳುತ್ತಿರುವ ಮಳೆ ಜಿಲ್ಲೆಯಾದ್ಯಂತ ಅವಾಂತರ ಸೃಷ್ಟಿಸಿದೆ. ಹಾಗೆಯೇ ನಿರಂತರವಾಗಿ ಸುರಿಯುತ್ತಿರುವ ವರ್ಷಧಾರೆ ಜನತೆಗೆ ಮನೆಯಿಂದ ಹೊರಗೆ ಬಾರದಂತೆ ದಿಗ್ಬಂಧನ ಹೇರಿದಂತಾಗಿದೆ. ಕೃಷಿ, ಕೈಗಾರಿಕೆ ಸೇರಿದಂತೆ ದೈನಂದಿನ ಕೆಲಸಗಳಿಗೂ ಮಳೆ ಕಿರಿಕಿರಿ ಉಂಟು ಮಾಡುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಜಿಲ್ಲೆಯ ಬಹುತೇಕ ಕೆರೆ ಕೋಡಿ, ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿದೆ. ಮನೆ, ಹೊಲ-ಗದ್ದೆ, ತೋಟಗಳಿಗೆ ನೀರು ನುಗ್ಗಿ ನಷ್ಟವುಂಟು ಮಾಡಿದೆ. ಯಾದಗಿರಿ ನಗರದ ಲಕ್ಷ್ಮೀನಗರ, ಕೋಳಿವಾಡ, ರೈಲ್ವೆ ಸ್ಟೇಷನ್ ಏರಿಯಾ, ಮಹಾತ್ಮ ಗಾಂಧಿ ವೃತ್ತ, ರೈಲ್ವೆ ನಿಲ್ದಾಣ ಪ್ರದೇಶ ಹಲವು ಕಡೆ ನೀರು ನುಗ್ಗಿದೆ. ಶಹಾಪುರ, ಸುರಪುರ, ವಡಗೇರಾ ಹಾಗೂ ಹುಣಸಗಿ ತಾಲೂಕಿನ ಹಲವು ಗ್ರಾಮಗಳ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಹೈರಾಣಾಗಿದ್ದಾರೆ. ಇನ್ನೂ ಕೆಂಭಾವಿ ವಲಯ ವ್ಯಾಪ್ತಿಯಲ್ಲಿ 20ಕ್ಕೂ ಹೆಚ್ಚು ಮನೆಗಳು ಬಿದ್ದಿವೆ ಎನ್ನಲಾಗಿದೆ. ಹುಣಸಗಿ ತಾಲೂಕಿನ ಮಂದಲಿಗನಾಳ ಗ್ರಾಮದಲ್ಲಿ ಗುರುವಾರ ರಾತ್ರಿಸುರಿದ ಮಳೆಗೆ ಮನೆ ಗೋಡೆ ಕುಸಿದಿದ್ದು, 4 ಮೇಕೆಗಳು ಸಾವನ್ನಪ್ಪಿವೆ.

ಭೀಮಾನದಿಯ ಪ್ರವಾಹದಿಂದ ಇಂಡಿ ತಾಲೂಕಿನ ಮೀರಗಿ ಗ್ರಾಮ ಜಲದಿಗ್ಬಂಧನವಾಗಿರುವುದು.

12 ಗ್ರಾಮಗಳಿಗೆ ಪ್ರವಾಹ ಆತಂಕ

ಭೀಮಾ ನದಿಗೆ 3 ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರು ಬಿಟ್ಟ ಹಿನ್ನೆಲೆ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ 12 ಗ್ರಾಮಗಳು ಪ್ರವಾಹ ಆತಂಕ ಎದುರಿಸುತ್ತಿವೆ. ಇಂಡಿ ತಾಲೂಕಿನ ಮೀರಗಿ ಗ್ರಾಮವನ್ನು ಭೀಮಾನದಿ ಪ್ರವಾಹದ ನೀರು ಸಂಪೂರ್ಣ ಆವರಿಸಿದೆ. ಇದರಿಂದ ಜನ-ಜೀವನ ಅಸ್ತವಸ್ತಗೊಂಡಿದೆ. ಇಂಡಿಯಿಂದ ಮಿರಗಿಗೆ ಸಂಪರ್ಕಿಸು ಪ್ರಮುಖ ರಸ್ತೆಗಳು ಬಂದ್ ಆಗಿವೆ. ಹತ್ತಿ, ಶೇಂಗಾ, ಉಳ್ಳಾಗಡಿ,ತೋಗರಿ, ಮೆಕ್ಕೆಜೋಳ, ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ, ಬಾಳೆ, ಪಪ್ಪಾಯಿ, ಲಿಂಬೆ, ಬಾಳೆ, ಕಲ್ಲಂಗಡಿ, ಸಿತಾಫಲ ಸೇರಿದಂತೆ ಅನೇಕ ಬೆಳೆ ಪ್ರವಾಹದಲ್ಲಿ ಕೊಚ್ಚಿ ಹೋಗಿವೆ.

ಲಿಂಗಾಯತ ಧರ್ಮ ನಮೂದಿಸಿ: ಸ್ವಾಮೀಜಿ

ಗದಗ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ಪ್ರಾರಂಭಿಸಿದ್ದು, ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಸಮೀಕ್ಷೆ ಮಾಡುವ ಉದ್ದೇಶ ಹೊಂದಿದೆ. ತರಾತುರಿಯಲ್ಲಿ ನಡೆಯುತ್ತಿರುವ ಈ ಸಮೀಕ್ಷೆಯಿಂದಾಗಿ ಜನರಲ್ಲಿ, ವಿಶೇಷವಾಗಿ ಲಿಂಗಾಯತರಲ್ಲಿ ಸಾಕಷ್ಟು ಗೊಂದಲಗಳು ಉಂಟಾಗಿವೆ ಎಂದು ತೋಂಟದ ಸಿದ್ಧರಾಮ ಸ್ವಾಮೀಜಿ ತಿಳಿಸಿದ್ದಾರೆ.

ಗದಗ ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ ಸಲಹೆ

ಸಂವಿಧಾನದ ಕಲಂ 25ರ ಪ್ರಕಾರ ದೇಶದಲ್ಲಿ ಪ್ರಚಲಿತದಲ್ಲಿರುವ ಎಲ್ಲ ಧರ್ಮಗಳನ್ನು ಮಾನ್ಯ ಮಾಡಬೇಕಾಗಿರುವುದು ಸರಕಾರದ ಕರ್ತವ್ಯ. ಈ ಕಾರಣಕ್ಕಾಗಿಯೇ ಜನಗಣತಿ ಅರ್ಜಿಯ ಎಂಟನೇ ಕಾಲಂನ 11ನೇ ಉಪಕಾಲಂನಲ್ಲಿ ಇತರೆ ಎಂದು ಪ್ರತ್ಯೇಕ ಕಾಲಂ ಮೀಸಲಾಗಿರಿಸಿದೆ. ಇಲ್ಲಿ ಲಿಂಗಾಯತ ಧರ್ಮ ಎಂದು ಬರೆಯಲು ಗಣತಿದಾರರಿಗೆ ಸೂಚಿಸಬೇಕು. ಹಾಗೆಯೇ ಅವರು ಬರೆದುಕೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಇತ್ತೀಚೆಗೆ ಅನೇಕ ಮಠಾಧಿಪತಿಗಳು ಮತ್ತು ಜಾಗತಿಕ ಲಿಂಗಾಯತ ಮಹಾಸಭೆಯವರು ಧರ್ಮದ ಕಾಲಂದಲ್ಲಿ ಹಿಂದೂ ಅಂತ ಬರೆಸಬಾರದು ಎಂದೂ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯು ಈ ವಿಷಯವನ್ನು ಲಿಂಗಾಯತರ ವಿವೇಚನೆಗೆ ಬಿಟ್ಟಿರುವುದನ್ನು ಎಲ್ಲರೂ ಗಮನಿಸಿ ಧರ್ಮದ ಕಾಲಂದಲ್ಲಿ ಲಿಂಗಾಯತ ಧರ್ಮ ಎಂದೇ ಬರೆಸಬೇಕು. 9ನೇ ಜಾತಿ ಕಾಲಂನಲ್ಲಿ ವೀರಶೈವರು ವೀರಶೈವ ಎಂದು, ವೀರಶೈವ ಲಿಂಗಾಯತರು ವೀರಶೈವ ಲಿಂಗಾಯತರೆಂದು, ಲಿಂಗಾಯತದ ಬೇರೆ ಬೇರೆ ಪಂಗಡದವರು ತಮ್ಮ ತಮ್ಮ ಜಾತಿಗಳ ಹೆಸರನ್ನು ಲಿಂಗಾಯತ ಪಂಚಮಸಾಲಿ, ಲಿಂಗಾಯತ ಕುಡುವಕ್ಕಲಿಗ, ಲಿಂಗಾಯತ ಬಣಜಿಗ, ಲಿಂಗಾಯತ ರೆಡ್ಡಿ ಇತ್ಯಾದಿ ಬರೆಸಬೇಕು ಎಂದು ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ವಿಪರೀತ ಮಳೆ | ಭೀಮಾ ನದಿಗೆ 3.45 ಲಕ್ಷ ಕ್ಯುಸೆಕ್ ನೀರು

ಭೋರ್ಗರೆದ ಭೀಮಾ: 36 ಗ್ರಾಮಗಳು ತತ್ತರ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಭಾರೀ ಮಳೆ ಸುರಿದ ಪರಿಣಾಮ ಮಹಾರಾಷ್ಟ್ರದ ಉಜ್ಜನಿ, ಸಿನಾ, ವಿರಾ ಜಲಾಶಯ ಸೇರಿ ಭೋರಿ ಹಳ್ಳಗಳಿಂದ ಒಟ್ಟೂ 3.50 ಲಕ್ಷ ಕ್ಯುಸೆಕ್ ನೀರು ಭೀಮಾ ನದಿಗೆ ಬಿಡಲಾಗಿದ್ದು, ಕಲಬುರಗಿ ಜಿಲ್ಲೆಯ 36 ಗ್ರಾಮಗಳಿಗೆ ಪ್ರವಾಹ ಬಂದಿದೆ. ಪ್ರವಾಹ ಎದುರಿಸಲು ಕಲಬುರಗಿ ಜಿಲ್ಲಾಡಳಿತ ಸಾಗರೋಪಾದಿಯಲ್ಲಿ ಪರಿಹಾರ ಕಲ್ಪಿಸುತ್ತಿದೆ.

ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಶುಕ್ರವಾರ ಅಫಜಲ್‌ಪುರ ತಾಲೂಕಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಹಾನಿ ಪರಿಶೀಲನೆ ನಡೆಸಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಅವರು ಮಾತನಾಡಿದರು. 12 ಕಾಳಜಿ ಕೇಂದ್ರಗಳಲ್ಲಿ 1,436 ಜನರಿಗೆ ವಾಸ ವ್ಯವಸ್ಥೆ ಮಾಡಲಾಗಿದೆ. ಅಫಜಲ್‌ಪುರ ತಾಲೂಕಿನ 17, ಜೇವರ್ಗಿ ತಾಲೂಕಿನ 8, ಕಲಬುರಗಿ ಮತ್ತು ಚಿತ್ತಾಪುರ ತಾಲೂಕಿನಲ್ಲಿ ತಲಾ 5 ಗ್ರಾಮಗಳು ಭೀಮಾ ನದಿ ಪ್ರವಾಹ ಆಗಿದ್ದು, ಅಪಾರ ಪ್ರಮಾಣದಲ್ಲಿ ಹಾನಿಗೊಂಡಿವೆ. ತುರ್ತು ಪರಿಹಾರ ಕಾರ್ಯಗಳು ಭರದಿಂದ ನಡೆಯುತ್ತಿವೆ. ಅಲ್ಲದೆ ಜಿಲ್ಲೆಯಲ್ಲಿ ವಾಡಿಕೆಗಿಂತ ಹೆಚ್ಚುವರಿ ಮಳೆಯಾಗಿದ್ದು, ತೊಗರಿ, ಉದ್ದು, ಹತ್ತಿ, ಹೆಸರು ಬೆಳೆಗಳಿಗೆ ವ್ಯಾಪಕ ಹಾನಿಯಾಗಿದೆ. ಇನ್ನು ಮಳೆ ಮುಂದುವರಿದ ಕಾರಣ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಮುಂದಿನ ಮೂರು ದಿನ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ನದಿ ಪಾತ್ರದ ಜನರು ಎಚ್ಚರಿಕೆ ವಹಿಸಬೇಕು ಎಂದರು. ಮಳೆ ಹಾಗೂ ಪ್ರವಾಹದಿಂದ ಹಾನಿಗೊಂಡ ಗ್ರಾಮಗಳಿಗೆ ಸಂಸದ ರಾಧಾಕೃಷ್ಣ ದೊಡ್ಡಮನಿ ಅವರ ಮೂಲಕ 2,500 ಆಹಾರ ಕಿಟ್‌ಗಳನ್ನು ವಿತರಿಸಲಾಗುತ್ತಿದೆ. ಜಂಟಿ ಸಮೀಕ್ಷೆಯ ಪ್ರಾಥಮಿಕ ಅಂದಾಜಿನಂತೆ 1.05 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದ್ದು ಶೇ.90ರಷ್ಟು ಸಮೀಕ್ಷೆ ಮುಗಿದಿದೆ. ಈಗಾಗಲೇ 2024-25ರ ಸಾಲಿನ ಎರಡನೇ ಕಂತಿನ 315.64 ಕೋಟಿ ರು. ಪರಿಹಾರ ಬಿಡುಗಡೆ ಮಾಡಲಾಗಿದೆ ಎಂದು ಸಚಿವರು ವಿವರಿಸಿದರು.

ಗಾಣಗಾಪೂರ ಪ್ರವಾಹ ಪೀಡಿತ ಪ್ರದೇಶಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಭೇಟಿ ನೀಡಿದರು.

ಸೊನ್ನ ಬ್ಯಾರೇಜ್‌ನಿಂದ ಭೀಮಾ ನದಿಗೆ ಅಪಾರ ಪ್ರಮಾಣದ ನೀರು ಹರಿಯುತ್ತಿದ್ದು, ನದಿತೀರ ಗ್ರಾಮಗಳಿಗೆ ಪ್ರವಾಹದ ಅಪಾಯವಿದೆ. ಗುರುತಿಸಲಾದ ಕಾಳಜಿ ಕೇಂದ್ರಗಳಲ್ಲಿ ಸಂತ್ರಸ್ತರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಹಾಗೂ ತುರ್ತು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

- ಪ್ರಿಯಾಂಕ್ ಖರ್ಗೆ, ಸಚಿವ

15 ವಿದ್ಯಾರ್ಥಿಗಳ ಸ್ಥಳಾಂತರ

ಮಣ್ಣೂರಿನ ಶ್ರೀ ವೇದೇಶತೀರ್ಥ ವಿದ್ಯಾಪೀಠ ಉತ್ತರಾದಿ ಮಠಕ್ಕೆ ನೀರು ನುಗ್ಗಿ ಸಂಸ್ಕೃತ ಪಾಠಶಾಲೆಯ 15 ವಿದ್ಯಾರ್ಥಿಗಳು ಹಾಗೂ ಗೋಶಾಲೆಯ ಗೋವುಗಳನ್ನು ಬೇರೆಡೆ ಸ್ಥಳಾಂತರಿಸಲಾ ಗಿದೆ. ಯಲ್ಲಮ್ಮ ದೇವಿ ದೇವಸ್ಥಾನ 15 ದಿನಗಳಿಂದ ಜಲಾವೃತವಾಗಿದೆ. ಮಾಹೂರ, ಚಿನ್ಮಳ್ಳಿ ಗ್ರಾಮಗಳಲ್ಲಿ ಮಕ್ಕಳನ್ನು ಪೋಷಕರು ಭುಜದ ಮೇಲೆ ಕುಡಿಸಿಕೊಂಡು ಹೋದ ದೃಶ್ಯ ಕಂಡು ಬಂದಿವೆ. ಗಾಣಗಾ ಪೂರ ಪ್ರವಾಹ ಪೀಡಿತ ಪ್ರದೇಶಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಹಾಗೂ ಎಸ್‌ಪಿ ಅಡ್ಡೂರು ಶ್ರೀನಿವಾಸಲು ಪ್ರವಾಹ ಪೀಡಿತ ಪ್ರದೇಶದಲ್ಲಿ ತುರ್ತು ನೆರವು ಕಾರ್ಯವನ್ನು ತೀವ್ರಗೊಳಿಸಿದ್ದಾರೆ.

ಬಿಜೆಪಿಗೆ ಉತ್ತರದಾಯಿಯಲ್ಲ

ಸಚಿವ ಖರ್ಗೆ ಕಾಣೆಯಾಗಿದ್ದಾರೆ ಎನ್ನುವ ಬಿಜೆಪಿ ಸೋಷಿಯಲ್ ಮೀಡಿಯಾ ಪೋಸ್ಟ್ ವಿಚಾರಕ್ಕೆ ಪ್ರತಿಕ್ರಿ ಯಿಸಿದ ಅವರು, ನಾನು ಬಿಜೆಪಿಗೆ ಉತ್ತರದಾಯಿಯಲ್ಲ. ನಾನು ಜನರಿಗೆ ಮಾತ್ರ ಉತ್ತರದಾಯಿಯಾಗಿ ರುತ್ತೇನೆ. ನನ್ನ ಹೆಸರು ಹೇಳಿದರೆ ಅವರಿಗೆ ಮುಂಬಡ್ತಿ ಸಿಗುತ್ತದೆ. ಹಾಗಾಗಿ, ಮೊದಲು ಸಿಎಂ, ನಂತರ ಡಿಸಿಎಂ ಹಾಗೂ ತದನಂತರ ನನಗೆ ಅವರು ಬೈಯುತ್ತಾರೆ. ಅವರಿಗೆ ನನ್ನ ಹೆಸರು ಹೇಳಿದರೆ ಮಾತ್ರ ಬಡ್ತಿ ಸಿಗುತ್ತೆ. ಹೀಗಾಗಿ ನನ್ನ ಬಗ್ಗೆ ಜಪ ಮಾಡುತ್ತಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ವಿಶ್ವವಾಣಿ

ಸಂಪಾದಕೀಯ

ಸ್ವಾವಲಂಬನೆಯ ಮತ್ತೊಂದು ಹೆಜ್ಜೆ

ಅನುಕ್ಷಣ ತಿರುಗುತ್ತಿರುವ ಈ ಭೂಮಿಯಲ್ಲಿ, ಜಾಗತಿಕ ಭೂರಾಜಕೀಯ ಕೂಡ ಒಂದಿಷ್ಟು ತಿರುವುಗಳನ್ನು ತೆಗೆದುಕೊಳ್ಳುತ್ತಿದೆ. ಸ್ವಹಿತಾಸಕ್ತಿಯ ಸಾಧನೆಯೇ ಮುಂಚೂಣಿಗೆ ಬಂದಿರುವ ಇಂದಿನ ಸಂದರ್ಭದಲ್ಲಿ, ಯಾರನ್ನೂ ನೆಚ್ಚಿ ಕೂರಲಾಗದಂಥ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. 'ಭಾರತವು ಅಮೆರಿಕದ ಆಪ್ತಮಿತ್ರ' ಎಂದೇ ಮಂತ್ರಜಪ ಮಾಡಿಕೊಂಡು ಬಂದಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ನಾಲಿಗೆಯನ್ನು ಹೊರಳಿಸಿದ್ದರ ಜತೆಗೆ, ಭಾರತದ ಮೇಲೆ ಪ್ರಯೋಗಿಸಲು ಚಾಕುವನ್ನು ಸಾಣೆ ಹಿಡಿಯುತ್ತಿರುವುದು ಕಳೆದ ಕೆಲ ತಿಂಗಳಿಂದ ಕಾಣಬರುತ್ತಿರುವ ವಿದ್ಯಮಾನ. ಭಾರತದಿಂದ ಅಮೆರಿಕಕ್ಕೆ ಆಮದಾಗುವ ಸರಕುಗಳ ಮೇಲೆ ಶೇ.50ರ ಮಟ್ಟದಲ್ಲಿ ಸುಂಕ ಜಡಿದಿರುವುದು, ಎಚ್-1ಬಿ ವೀಸಾವನ್ನು ಪಡೆಯುವುದಕ್ಕಿದ್ದ ವಾರ್ಷಿಕ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಏರಿಸಿರುವುದು ಅಂಥ ಒಂದೆರಡು ಉದಾಹರಣೆಗಳಷ್ಟೇ. ರಾಷ್ಟ್ರವೊಂದರ ಮುಖ್ಯಸ್ಥರಾದವರು ಅದರ ಹಿತ ಕಾಯಲು ಯತ್ನಿಸುವುದರಲ್ಲಿ ತಪ್ಪೇನಿಲ್ಲ, ಹಾಗಂತ ಮಿಕ್ಕ ರಾಷ್ಟ್ರಗಳು ಅದಕ್ಕೆ ಬಲಿಪಶುವಾಗುವುದನ್ನು ಹೇಗೆ ಸಹಿಸಲಾದೀತು? ಯುದ್ಧ ಶಸ್ತ್ರಾಸ್ತ್ರಗಳ ತಯಾರಿಕೆ ಮತ್ತು ಮಾರಾಟ ವಲಯದಲ್ಲೂ ದೊಡ್ಡಣ್ಣನಾಗಿರುವ ಅಮೆರಿಕ, ಅದನ್ನೇ ಮುಂದುಮಾಡಿಕೊಂಡು ವಿವಿಧ ದೇಶಗಳನ್ನು ಕಾಲಾನುಕಾಲಕ್ಕೆ ತನ್ನ ತಾಳಕ್ಕೆ ತಕ್ಕಂತೆ ಕುಣಿಸುವುದೂ ಇದೆ. ಈ ವಿಲಕ್ಷಣ ನಡೆಯನ್ನು ಗ್ರಹಿಸಿರುವ ಭಾರತದ ಪ್ರಧಾನಿ ಮೋದಿಯವರು, ವಿವಿಧ ನೆಲೆಗಟ್ಟಿನ ಪರಾವಲಂಬಿತನಕ್ಕೆ ಶುಭವಿದಾಯ ಹೇಳಿ, 'ಆತ್ಮನಿರ್ಭರ ಭಾರತ' ಪರಿಕಲ್ಪನೆಯಡಿ ಸ್ವಾವಲಂಬಿತನಕ್ಕೆ ಒತ್ತುನೀಡಲು ಸಂಕಲ್ಪಿಸಿದ್ದನ್ನು ಹಾಗೂ ಅದರ ಫಲಶ್ರುತಿ ಈಗಾಗಲೇ ಗೋಚರಿಸುತ್ತಿರುವುದನ್ನು ಬಿಡಿಸಿ ಹೇಳಬೇಕಿಲ್ಲ. ಇದರ ಮುಂದುವರಿದ ಭಾಗವಾಗಿ ಅವರು, ಉತ್ತರ ಪ್ರದೇಶದಲ್ಲಿ 'ಎಕೆ-203' ಬಂದೂಕು ತಯಾರಿಕಾ ಸಜ್ಜಿಕೆಗೆ ವೇಗ ತುಂಬಲು ಹೊರಟಿದ್ದಾರೆ. ಇದು, 'ಸ್ವಾವಲಂಬಿ ಭಾರತ'ದೆಡೆಗಿನ ಮತ್ತೊಂದು ಹೆಜ್ಜೆ ಎಂದರೆ ಅತಿಶಯೋಕ್ತಿಯಲ್ಲ. ಇದರಿಂದಾಗಿ ಭಾರತೀಯ ಸಶಸ್ತ್ರ ಪಡೆಗಳಿಗೆ ಮತ್ತಷ್ಟು ಬಲ ಬರುವುದರೊಂದಿಗೆ, ಶಸ್ತ್ರಾಸ್ತ್ರ ಖರೀದಿಗೆಂದೇ ಅನ್ಯದೇಶಗಳಿಗೆ ಸುರಿಯಲಾಗುತ್ತಿದ್ದ ಹಣದ ಪ್ರಮಾಣವೂ ತಗ್ಗುತ್ತದೆ. ಇದು ಭಾರತವು ಸಕಾರಾತ್ಮಕವಾಗಿ ಬದಲಾಗುತ್ತಿರುವುದರ ದ್ಯೋತಕವೇ ಸರಿ...

ಸೊಂಪಾದಕೀಯ

ಯೇ ಸೆಪ'ರೇಟು', ವೋ ಸೆಪ'ರೇಟು'

ಮಲ್ಟಿಪ್ಲೆಕ್ಸ್‌ಗಳೂ ಸೇರಿದಂತೆ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿ ಎಲ್ಲ ಭಾಷೆಯ ಚಲನಚಿತ್ರಗಳ ಪ್ರದರ್ಶನಕ್ಕೆ ತೆರಿಗೆ ಹೊರತುಪಡಿಸಿ 200 ರುಪಾಯಿಗಳ ಗರಿಷ್ಠ ದರ ನಿಗದಿ ಪಡಿಸಿದ್ದ ಸರಕಾರದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಹಾಗಾಗಿ ಬಹಳ ದಿನಗಳ ಬೇಡಿಕೆಯಾಗಿದ್ದ ಟಿಕೆಟ್ ದರ ಇಳಿಕೆ ಕೊನೆಗೂ ಜಾರಿಗೆ ಬಂತು ಅಂತ ಚಿತ್ರರಸಿಕರು ಅಂದುಕೊಳ್ಳುವಷ್ಟರಲ್ಲಿ ಹೈಕೋರ್ಟ್ ಅದಕ್ಕೆ ಅಡ್ಡಗಾಲು ಹಾಕಿದೆ. ಹಾಗಾಗಿ ಸರಕಾರ ಕೊಟ್ಟರೂ ಕೋರ್ಟ್ ಕೊಡಲಿಲ್ಲ ಅನ್ನೋ ಪಾಡು ಸಿನಿಪ್ರಿಯರದ್ದು. ಸಿನಿಮಾ ಹಾಲ್ ಕಟ್ಟೋಕೆ ಕೋಟ್ಯಂತರ ರುಪಾಯಿ ಖರ್ಚಾಗುತ್ತೆ. ಅದರ ನಿರ್ವಹಣೆಗೂ ಖರ್ಚಾಗುತ್ತೆ. ಇಷ್ಟೇ ದರ ನಿಗದಿ ಮಾಡಿ ಅನ್ನೋದು ತಪ್ಪಾಗುತ್ತೆ ಅಂತ ವಾದ ಮಾಡಿದ ವಕೀಲರು ತಡೆ ತಂದಿದ್ದಾರೆ. ಆದರೆ ಯೇ ಸೆಪರೇಟು ವೋ ಸೆಪರೇಟು, ಹಾಗಂತ ಟಿಕೆಟ್ ರೇಟನ್ನು ಮನಬಂದಂತೆ ಹೆಚ್ಚಿಸಲು ಸಾಧ್ಯವಿಲ್ಲ ಅಂತ ಹೇಳೋಕೆ ಕೋರ್ಟ್‌ನಿಂದ ಹೇಳೋಕೆ ಸಾಧ್ಯ ಆಗಿಲ್ಲ. ಇದರ ಹಿಂದೆ ಪ್ರಸಕ್ತ ದೊಡ್ಡ ಸಿನಿಮಾ ಮಾಡಿರುವ ಸಿನಿಮಾ ಮೇಕರ್‌ಗಳು ಇದ್ದಾರೆ ಅನ್ನೋದನ್ನು ಸೆಪರೇಟ್ ಆಗಿ ಹೇಳಬೇಕಾಗಿಲ್ಲ. ಈಗ ಬಿಡುಗಡೆ ಆಗಲಿರುವ 'ಕಾಂತಾರ-1' ಸಿನಿಮಾ ತಂಡದ ಮೂಲಕ ಈ ಕೆಲಸ ಆಗಿದೆ. ಇದರಿಂದ ಸದ್ಯ ಬಿಡುಗಡೆ ಆಗಿರುವ ತೆಲುಗಿನ 'ಓಜಿ' ಚಿತ್ರಕ್ಕೂ ಲಾಭ ಆಗಿದೆ. ಕಾಂತಾರ, ಓಜಿ ಎರಡೂ ಚಿತ್ರಗಳಿಗೂ 200 ರುಪಾಯಿ ಟಿಕೆಟ್ ರೇಟು ಫಿಕ್ಸ್ ಆಗಿದ್ದು ತಲೆನೋವಾಗಿತ್ತು. ಆರಂಭದಲ್ಲಿ 200 ಪ್ಲಸ್ ಟ್ಯಾಕ್ಸ್‌ನಿಂದ ಫಿಕ್ಸ್ ಆದ ರೇಟುಗಳು, ಈಗ ಕೋರ್ಟ್ ತಡೆ ನೀಡುತ್ತಿದ್ದಂತೆ ಸಾವಿರಾರು ರುಪಾಯಿಗಳ ಗಡಿ ದಾಟಿ ದಾಖಲೆಯ ಬುಕ್ಕಿಂಗ್ ನೋಡುತ್ತಿವೆ. 'ಮಕ್ಕಳು ಅತ್ತರೇನೇ ತಾಯಿ ಹಾಲು ಕೊಡೋದು' ಅನ್ನೋ ಮಾತಿದೆ. ಆದರೆ ಏನು ಮಾಡೋದು? ನಮ್ಮಲ್ಲಿ ಎಲ್ಲ ಮಕ್ಕಳೂ ಅಳುತ್ತಿಲ್ಲವಲ್ಲ. 'ಪೆಟ್ರೋಲ್ ರೇಟು ಸಾವಿರ ರುಪಾಯಿ ಆದ್ರೂ, ನಡೆದುಕೊಂಡೇ ಹೋಗಿ ಮೋದಿಗೆ ವೋಟು ಹಾಕ್ತೀವಿ' ಅನ್ನೋ ಜನ ಇದ್ದ ಹಾಗೆ 'ಟಿಕೆಟ್ ರೇಟು ಎಷ್ಟೇ ಸಾವಿರ ದಾಟಿದರೂ ಸಿನಿಮಾ ನೋಡ್ತೀವಿ' ಅನ್ನೋ ಜನ ಈಗಾಗಲೇ ಬುಕ್ಕಿಂಗ್ ಮಾಡಿ ಸಿನಿಮಾ ನೋಡಲು ಕಾಯ್ತಾ ಇದ್ದಾರೆ.

ಸಂಪಾದಕರ ಸದ್ಯಶೋಧನೆ

ಜೈಲ್ ಸಿಂಗ್ ಸಣ್ಣತನ

ಇದು ಕೆಲ ತಿಂಗಳ ಹಿಂದಿನ ವಿಷಯ. 1966ನೇ ಬ್ಯಾಚಿನ ಐಪಿಎಸ್ ಅಧಿಕಾರಿ ಗುರ್ಬಚನ್ ಜಗತ್ ಅವರು ಬರೆದ ಅಂಕಣ ಬರಹವೊಂದನ್ನು ಓದುತ್ತಿದ್ದೆ. ಅವರು ಪಟಿಯಾಲದ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದಾಗ ನಡೆದ ಒಂದು ಪ್ರಸಂಗವನ್ನು ಮೆಲುಕು ಹಾಕಿದ್ದಾರೆ. ಆ ದಿನಗಳಲ್ಲಿ ಪತ್ರಿಕೆಗಳೆಂದರೆ, ಅಧಿಕಾರದಲ್ಲಿದ್ದವರು ಎಷ್ಟು ಹೆದರುತ್ತಿದ್ದರು ಎಂಬುದನ್ನು ಪ್ರತಿಪಾದಿಸಲು ಅವರು ಆ ಪ್ರಸಂಗವನ್ನು ಪ್ರಸ್ತಾಪಿಸಿದ್ದರು. ಆಗ ಗ್ಯಾನಿ ಜೈಲ್ ಸಿಂಗ್ ಅವರು ಪಂಜಾಬಿನ ಮುಖ್ಯಮಂತ್ರಿಯಾಗಿದ್ದರು. 1975ರ ಒಂದು ದಿನ, ಜೈಲ್ ಸಿಂಗ್ ಅವರು ತಮ್ಮ ಕಾರಿನಲ್ಲಿ ವಿಹಾರ ಹೊರಟಿದ್ದರು. ತಮ್ಮ ಕಾರಿನಲ್ಲಿ ಕುಳಿತುಕೊಳ್ಳುವಂತೆ ಗುರ್ಬಚನ್ ಜಗತ್‌ಗೆ ಹೇಳಿದರಂತೆ. ಮುಖ್ಯಮಂತ್ರಿಯವರ ಆದೇಶವನ್ನು ಮೀರಲು ಸಾಧ್ಯವೇ? ಗುರ್ಬಚನ್ ಜಗತ್ ಮುಖ್ಯಮಂತ್ರಿಯವರ ಕಾರಿನಲ್ಲಿ ಕುಳಿತರಂತೆ. ಕಾರು ಪಟಿಯಾಲ ಜೈಲಿನ ಮುಂದೆ ಹೋಗುತ್ತಿದ್ದಾಗ ಜೈಲ್ ಸಿಂಗ್, 'ಈಗ ಜೈಲಿನಲ್ಲಿರುವ ಖೈದಿಗಳಿಗೆ ಸುದ್ದಿಯ ಕೊರತೆ ಇಲ್ಲ ಬಿಡಿ' ಎಂದು ಹೇಳಿದರಂತೆ. ಗುರ್ಬಚನ್ ಜಗತ್‌ಗೆ ಮುಖ್ಯಮಂತ್ರಿಗಳ ವ್ಯಂಗ್ಯ ಅರ್ಥವಾಯಿತಂತೆ. ಕಾರಣ ಆ ದಿನಗಳಲ್ಲಿ 'ಹಿಂದ್ ಸಮಾಚಾರ್' ಸಮೂಹದ ಮಾಲೀಕ ಲಾಲಾ ಜಗತ್ ನಾರಾಯಣ ಅವರನ್ನು ಬಂಧಿಸಿ ಪಟಿಯಾಲ ಜೈಲಿನಲ್ಲಿ ಇರಿಸಲಾಗಿತ್ತು. ಆದರೆ ಕಾರಿನಲ್ಲಿ ಮುಖ್ಯಮಂತ್ರಿ ಜತೆಗಿದ್ದ ಐಎಎಸ್ ಅಧಿಕಾರಿಗೆ ಮುಖ್ಯಮಂತ್ರಿ ಹೇಳಿದ್ದು ಗೊತ್ತಾಗಲಿಲ್ಲ. ಅವರು, 'ಸಿಎಂ ಸಾಬ್, ಖೈದಿಗಳಿಗೇಕೆ ಸುದ್ದಿಯ ಕೊರತೆ ಇಲ್ಲ?' ಎಂದು ಕೇಳಿದರಂತೆ. ಅದಕ್ಕೆ ಜೈಲ್ ಸಿಂಗ್, 'ಪತ್ರಕರ್ತರನ್ನು ಜೈಲಿನಲ್ಲಿಟ್ಟರೆ, ಖೈದಿಗಳಿಗೆ ಪತ್ರಿಕೋದ್ಯಮ ಗೊತ್ತಾಗುತ್ತದೆ ಅಲ್ಲವೇ? ಪತ್ರಿಕಾ ಮಾಲೀಕರೇ ಈಗ ಜೈಲಿನಲ್ಲಿದ್ದಾರಲ್ಲ?' ಎಂದು ಹೇಳಿ ನಕ್ಕರಂತೆ. 'ಗುರ್ಬಚನ್ ಜಗತ್ ಜೀ, ಲಾಲಾ ಜಗತ್ ನಾರಾಯಣ ಅವರ ಆರೋಗ್ಯ ಹೇಗಿದೆಯಂತೆ?' ಎಂದು ಕೇಳಿದರಂತೆ. ಅದಕ್ಕೆ ಗುರ್ಬಚನ್ ಜಗತ್, 'ಜೈಲಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ' ಎಂದು ಹೇಳಿದರಂತೆ. 'ನೋಡಿ, ಈಗ ನಾವು ನಮ್ಮ ಅಧಿಕಾರವನ್ನು ಚೆನ್ನಾಗಿ ಚಲಾಯಿಸಬೇಕು. ಖುಷಿಯಿಂದ ರಾಜ್ಯವನ್ನಾಳಬೇಕು. (ಜೈಲಿನ ಕಡೆ ತೋರಿಸುತ್ತ) ಅಲ್ಲಿರುವವರು ಏನು ಬರೆಯುತ್ತಾರೆಂಬ ಬಗ್ಗೆ ಜಾಸ್ತಿ ತಲೆಬಿಸಿ ಮಾಡಿಕೊಳ್ಳಬಾರದು' ಎಂದರಂತೆ. ಲಾಲಾ ಜಗತ್ ನಾರಾಯಣ ಅವರು ಜೈಲು ಸೇರಿದ್ದರಿಂದ ಜೈಲ್ ಸಿಂಗ್ ನಿರಾಳರಾಗಿದ್ದರು. ಅದಕ್ಕೂ ಒಂದು ವಾರ ಮೊದಲು, ಜೈಲ್ ಸಿಂಗ್ ಪಟಿಯಾಲ ಜೈಲಿಗೆ ಭೇಟಿ ನೀಡಿ, ಲಾಲಾ ಜಗತ್ ನಾರಾಯಣರ ಆರೋಗ್ಯವನ್ನು ವಿಚಾರಿಸಿಕೊಂಡು ಬಂದಿದ್ದರು. ಆದರೆ ಅವರು ಜೈಲು ಸೇರುತ್ತಿದ್ದಂತೆ ಜೈಲ್ ಸಿಂಗ್ ವರಸೆಯೇ ಬದಲಾಗಿತ್ತು. 'ಆ ಮಹಾಶಯ (ಲಾಲಾ ಜಗತ್ ನಾರಾಯಣ) ನನ್ನನ್ನು ಪ್ರತಿದಿನ ಕಾಡಿದ. ಈ ದಿನ ಬೆಳಗ್ಗೆ ಏನು ಕಾದಿದೆಯೋ ಎಂಬ ಅಂಜಿಕೆಯಲ್ಲೇ ನಾನು ಪ್ರತಿ ಬೆಳಗನ್ನು ಸ್ವಾಗತಿಸಿದ್ದಾಯಿತು. ಅಂಥ ಮನುಷ್ಯ ಜೈಲು ಸೇರಿದ ಬಳಿಕ ಈಗ ನೆಮ್ಮದಿ ಸಿಕ್ಕಂತಾಗಿದೆ' ಎಂದು ಜೈಲ್ ಸಿಂಗ್ ತಮ್ಮ ಅಸಹನೆ ಮತ್ತು ಸಿಟ್ಟನ್ನು ತೋಡಿಕೊಂಡರಂತೆ. ಗುರ್ಬಚನ್ ಜಗತ್ ಅವರಿಗೆ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರು ಇಷ್ಟು ಸಣ್ಣದಾಗಿ ಯೋಚಿಸುತ್ತಾರಲ್ಲ ಎಂದು ಅನಿಸಿತಂತೆ. ಅಷ್ಟಕ್ಕೂ ಜೈಲ್ ಸಿಂಗ್ ಅವರು ಗುರ್ಬಚನ್ ಜಗತ್ ಅವರನ್ನು ತಮ್ಮ ಕಾರಿನಲ್ಲಿ ಕುಳ್ಳಿರಿಸಿಕೊಳ್ಳಲೂ ಕಾರಣವಿತ್ತು. ಅವರು ಲಾಲಾ ಜಗತ್ ನಾರಾಯಣ ಅವರಿಗೆ ಆತ್ಮೀಯರಾಗಿದ್ದರು. ಅವರು ಜೈಲಿನಲ್ಲಿರುವುದನ್ನು ಕಂಡು ಮುಖ್ಯಮಂತ್ರಿಗಳು ಸಂತಸಪಟ್ಟ ಸಂಗತಿಯನ್ನು ನೇರವಾಗಿ ನಾರಾಯಣರಿಗೆ ತಿಳಿಸಲಿ ಎಂಬುದೂ ಉದ್ದೇಶವಾಗಿತ್ತು. ಕಾರಣ ಎಂದೂ ಕಾರನ್ನೇರಿ ಎಂದು ಹೇಳದ ಜೈಲ್ ಸಿಂಗ್, ಆ ದಿನ ಗುರ್ಬಚನ್ ಜಗತ್ ಅವರನ್ನು ಮಾತ್ರ ತಮ್ಮ ವಾಹನದಲ್ಲಿ ಕುಳ್ಳಿರಿಸಿಕೊಂಡಿದ್ದರು. ಅದನ್ನು ಬಿಟ್ಟರೆ ಅವರಿಗೆ ಬೇರೆ ಕಾರಣಗಳೇ ಇರಲಿಲ್ಲ. ಅದಾದ ಬಳಿಕ ಲಾಲಾ ಜಗತ್ ನಾರಾಯಣರನ್ನು ಹಲವು ಸಲ ಭೇಟಿ ಮಾಡಿದರೂ, ಈ ವಿಷಯವನ್ನು ಮಾತ್ರ ಗುರ್ಬಚನ್ ಜಗತ್ ಬೇರೆಯವರಿಗೆ ಹೇಳಲಿಲ್ಲ. ಇಬ್ಬರೂ ನಿಧನರಾದ ಬಳಿಕ ಆ ಅಂಕಣದಲ್ಲಿ ಪ್ರಸ್ತಾಪಿಸಿದ್ದರು.

ಆಪರೇಷನ್ 'ಡೈಮಂಡ್': ಮಿಗ್-21

ಮೊಸಾದ್‌ನಲ್ಲಿ ಕೆಲಸ ಮಾಡಿರುವ ಒಬ್ಬೊಬ್ಬ ಅಧಿಕಾರಿಗಳದ್ದೂ ಒಂದೊಂದು ಕಥೆ. ಅವರು ನಡೆಸುವ ಕಾರ್ಯಾಚರಣೆಗಳ ಶೈಲಿ ವಿಭಿನ್ನ. ಇಸ್ರೇಲ್ ದೇಶವನ್ನು ಶತ್ರುಗಳಿಂದ ಕಾಪಾಡಲು ಹಗಲಿರುಳೂ ದುಡಿಯುವ ದೊಡ್ಡ ಗೂಢಚಾರಿಗಳಿದ್ದಾರೆ. 'ಮೀರ್ ಅಮಿತ್' ಮೊಸಾದಿನ ವಿಚಿತ್ರ ಅಧಿಕಾರಿ, ಯಾರ ಮುಲಾಜಿಗೂ ಒಳಗಾಗದೆ ಮೊಸಾದ್‌ಗಾಗಿ ಕೆಲಸ ಮಾಡುತ್ತಿದ್ದರು. ಸದಾ ಕ್ರಿಯಾಶೀಲರಾಗಿರುವ ವ್ಯಕ್ತಿತ್ವ, ಇಲ್ಲ ಎಂಬ ಪದದ ಅರ್ಥ ಗೊತ್ತಿಲ್ಲದ ಅಧಿಕಾರಿ.

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಇಸ್ರೇಲ್ 1947ರಲ್ಲಿ ಸ್ವತಂತ್ರವಾದ ನಂತರ ತನ್ನ ಸುತ್ತಲೂ ಇರುವ ಮುಸ್ಲಿಂ ದೇಶಗಳ ದ್ವೇಷದ ನಡುವೆಯೇ ಆಡಳಿತ ನಡೆಸಿಕೊಂಡು ಬರುತ್ತಿದೆ. ಸಣ್ಣ ದೇಶವೊಂದು ಸುತ್ತಲೂ ಇರುವ ಶತ್ರುಗಳ ನಿಗಾದಲ್ಲಿ ಆಡಳಿತ ನಡೆಸುವುದು ಸುಲಭವಲ್ಲ. ಶತ್ರುಗಳ ಚಲನವಲನಗಳ ಮೇಲೆ ಸದಾ ಹದ್ದಿನ ಕಣ್ಣನ್ನು ಇಟ್ಟಿರಬೇಕಾಗುತ್ತದೆ. ಯಹೂದಿಗಳನ್ನು ಕಂಡರೆ ಸಾಕು ಕೊಲ್ಲಿ ರಾಷ್ಟ್ರಗಳು ಕಾಲು ಕೆರೆದುಕೊಂಡು ಜಗಳಕ್ಕೆ ಬರುವ ವಿಷಯ ಸಾಮಾನ್ಯ. ಸುತ್ತಲೂ ಶತ್ರುಗಳಿದ್ದರೂ, ಇಂದು ಇಸ್ರೇಲ್ ಜಗತ್ತಿನ ಸಂಶೋಧನಾ ಕೇಂದ್ರವಾಗಿ ಬೆಳೆಯುವಲ್ಲಿ ಯಶಸ್ವಿಯಾಗಿದೆ. ಇಸ್ರೇಲಿನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಶತ್ರುಗಳ ಚಲನವಲನಗಳ ಮೇಲೆ ಹದ್ದಿನ ಕಣ್ಣಿಟ್ಟಿರುವ ಬೇಹುಗಾರಿಕಾ ಸಂಸ್ಥೆ 'ಮೊಸಾದ್'. ತನ್ನ ಅಷ್ಟ ದಿಕ್ಕುಗಳಲ್ಲಿಯೂ ಶತ್ರುಗಳಿರುವಾಗ ಯಹೂದಿಗಳ ರಕ್ಷಣೆ ಮಾಡುವುದು ಸುಲಭದ ಕೆಲಸವಲ್ಲ, ಆದರೆ ಮೊಸಾದ್ ವಿಶಿಷ್ಟ ಕಾರ್ಯಾಚರಣೆಗಳ ಮೂಲಕ ಇಸ್ರೇಲ್ ದೇಶವನ್ನು ಶತ್ರುಗಳಿಂದ ಕಾಪಾಡಿಕೊಂಡು ಬಂದಿದೆ.

ಮೊಸಾದ್‌ನಲ್ಲಿ ಕೆಲಸ ಮಾಡಿರುವ ಒಬ್ಬೊಬ್ಬ ಅಧಿಕಾರಿಗಳದ್ದೂ ಒಂದೊಂದು ಕಥೆ. ಅವರು ನಡೆಸುವ ಕಾರ್ಯಾಚರಣೆಗಳ ಶೈಲಿ ವಿಭಿನ್ನ. ಇಸ್ರೇಲ್ ದೇಶವನ್ನು ಶತ್ರುಗಳಿಂದ ಕಾಪಾಡಲು ಹಗಲಿರುಳೂ ದುಡಿಯುವ ದೊಡ್ಡ ಗೂಢಚಾರಿಗಳಿದ್ದಾರೆ. 'ಮೀರ್ ಅಮಿತ್' ಮೊಸಾದಿನ ವಿಚಿತ್ರ ಅಧಿಕಾರಿ, ಯಾರ ಮುಲಾಜಿಗೂ ಒಳಗಾಗದೆ ಮೊಸಾದ್‌ಗಾಗಿ ಕೆಲಸ ಮಾಡುತ್ತಿದ್ದರು. ಸದಾ ಕ್ರಿಯಾಶೀಲರಾಗಿರುವ ವ್ಯಕ್ತಿತ್ವ, ಇಲ್ಲ ಎಂಬ ಪದದ ಅರ್ಥ ಗೊತ್ತಿಲ್ಲದ ಅಧಿಕಾರಿ. ಸಣ್ಣ ವಯಸ್ಸಿನಲ್ಲಿ ಸೈನ್ಯಕ್ಕೆ ಸೇರಿ ದೇಶಸೇವೆ ಮಾಡಿ, ನಂತರ ಮೊಸಾದ್ ಸೇರಿ ಅನೇಕ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. 1965ರಲ್ಲಿ ಒಂದು ದಿನ ಬೆಳಗ್ಗೆ ಇಸ್ರೇಲಿನ ವಾಯುಸೇನಾ ಮುಖ್ಯಸ್ಥರು ಉಪಾಹಾರ ಮಾಡುತ್ತಿದ್ದ ಸಂದರ್ಭದಲ್ಲಿ, ಮೀರ್ ಅಮಿತ್‌ನನ್ನು ಕರೆದು ಇಸ್ರೇಲಿ ಸೈನ್ಯಕ್ಕೆ ಮಿಗ್-21 ಯುದ್ಧವಿಮಾನ ಬೇಕೆಂದರು. ಅಂದಿನ ಕಾಲದಲ್ಲಿ ಮಿಗ್-21 ಪ್ರಪಂಚದ ಶಕ್ತಿಶಾಲಿ ವಿಮಾನವಾಗಿತ್ತು ಮತ್ತು ಪಾಶ್ಚಿಮಾತ್ಯ ದೇಶಗಳ ಬಳಿಯೂ ಆ ವಿಮಾನ ಇರಲಿಲ್ಲ. ಹೇಳಿದ ಕೆಲಸಕ್ಕೆ ಇಲ್ಲ ಎಂದು ಹೇಳದ ಮೀರ್ ಅಮಿತ್, ಆ ಸೇನಾಧಿಕಾರಿಗೆ ಇಲ್ಲ ಎನ್ನಲಿಲ್ಲ, ಆದರೆ ಪ್ರಪಂಚದ ಅತ್ಯಾಧುನಿಕ ವಿಮಾನವನ್ನು ಇಸ್ರೇಲಿಗೆ ತರುವುದು ಸುಲಭದ ಕೆಲಸವಾಗಿರಲಿಲ್ಲ, ಅಸಾಧ್ಯವಾದ ಬೇಡಿಕೆಯೊಂದು ಆತನ ಮುಂದಿತ್ತು. ಸೇನಾಧಿಕಾರಿ ಹಠಕ್ಕೆ ಬಿದ್ದು, ವಿಮಾನವನ್ನು ಶೀಘ್ರದಲ್ಲಿ ಇಸ್ರೇಲಿಗೆ ತರಲೇಬೇಕೆಂದಿದ್ದರು.

ಈ ಹಿಂದೆ ಅನೇಕ ಬಾರಿ ಈಜಿಪ್ಟ್ ಮತ್ತು ಸಿರಿಯಾ ದೇಶಗಳಿಂದ ಮಿಗ್-21 ವಿಮಾನವನ್ನು ತರಬೇಕೆಂದು ಪ್ರಯತ್ನಪಟ್ಟರೂ ಅದು ಯಶಸ್ವಿಯಾಗಿರಲಿಲ್ಲ, ತಕ್ಷಣ ಮೊಸಾದ್‌ನ ಅಧಿಕಾರಿಗಳಿಗೆ ಕೆಲಸ ಹಚ್ಚಿದ ಮೀರ್ ಅಮಿತ್, ಇರಾಕ್ ದೇಶದಲ್ಲಿದ್ದ ಯಹೂದಿ ವ್ಯಕ್ತಿಯೊಬ್ಬನನ್ನು ಸಂಪರ್ಕಿಸಿ ವಿಮಾನವನ್ನು ಇಸ್ರೇಲಿಗೆ ಕೊಂಡೊಯ್ಯಲು ಸಹಾಯ ಮಾಡುವಂತೆ ಕೇಳಿಕೊಂಡರು. ಈ ವ್ಯಕ್ತಿಯ ಹೆಂಡತಿ ಕ್ರಿಶ್ಚಿಯನ್, ಆಕೆಯ ತಂಗಿಯ ಗಂಡ ಇರಾಕ್ ದೇಶದ ವಾಯುಸೇನೆಯಲ್ಲಿ ಪೈಲಟ್ ಆಗಿದ್ದ. ಆತನ ಹೆಸರು 'ರೆಡ್‌ಫಾ'. ಆತ ಮೂಲತಃ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವನಾಗಿದ್ದು, ಇರಾಕ್ ಸೇನೆಯಲ್ಲಿ ಕೆಲಸಮಾಡುತ್ತಿದ್ದ. ಆತ ಕ್ರಿಶ್ಚಿಯನ್ ಆಗಿದ್ದರಿಂದ ಅಲ್ಲಿನ ಸೇನೆ ಆತನನ್ನು ಉನ್ನತ ಶ್ರೇಣಿಗೆ ಕೊಂಡೊಯ್ಯುವಲ್ಲಿ ಆಸಕ್ತಿ ತೋರಿರಲಿಲ್ಲ. ಆತ ನಿರಂತರವಾಗಿ ಮಿಗ್-21 ಯುದ್ಧವಿಮಾನವನ್ನು ಚಾಲಿಸುತ್ತಿದ್ದ ಪೈಲಟ್ ಆಗಿದ್ದ. ತಾನು ಎಷ್ಟೇ ಸಕ್ರಿಯನಾಗಿದ್ದರೂ ತನ್ನನ್ನು ಅಧಿಕಾರಿಗಳು ಬೆಳೆಯಲು ಬಿಡುತ್ತಿಲ್ಲವೆಂಬ ಹತಾಶೆ ಅವನಿಗಿತ್ತು. ಕುರ್ದಿಶ್ ಪ್ರಾಂತ್ಯಗಳ ಮೇಲೆ ಬಾಂಬ್ ಹಾಕಬೇಕೆಂಬ ಅಪ್ಪಣೆ ಇರಾಕ್ ಸೇನೆಯಿಂದ ಬಂದಾಗ, 'ಕ್ರಿಶ್ಚಿಯನ್ ಧರ್ಮವು ಈ ರೀತಿಯ ದಾಳಿಗಳನ್ನು ಒಪ್ಪುವುದಿಲ್ಲ' ಎಂದು ಹೇಳಿದ್ದ. ಇಷ್ಟೆಲ್ಲಾ ಹತಾಶೆಯಿಂದ ಇರಾಕ್ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಸಿಕ್ಕರೆ ಮೀರ್ ಅಮಿತ್ ಬಿಡುತ್ತಾನಾ? ಇರಾಕಿನಲ್ಲಿದ್ದ ಯಹೂದಿ ಕಷ್ಟಪಟ್ಟು ಈತನನ್ನು ಒಪ್ಪಿಸಿ ಅಥೆನ್ಸ್ ನಗರಕ್ಕೆ ಕರೆತಂದಿದ್ದ. ಆದರೆ ರೆಡ್‌ಫಾ ತನ್ನ ಹೆಂಡತಿಗೆ ಆರೋಗ್ಯ ಸರಿಯಿಲ್ಲ ಹಾಗಾಗಿ ಆಕೆಯನ್ನೂ ಅಥೆನ್ಸ್ ನಗರಕ್ಕೆ ಕರೆದೊಯ್ಯಲೇಬೇಕೆಂದು ಹೇಳಿ ಹೊರಟಿದ್ದ.

ಅಥೆನ್ಸ್ ನಗರದಲ್ಲಿ, ಲಂಡನ್‌ನಿಂದ ಬಂದಿದ್ದ ಯಹೂದಿ ಪೈಲಟ್ ಒಬ್ಬನನ್ನು ರೆಡ್‌ಫಾನಿಗೆ ಭೇಟಿ ಮಾಡಿಸುತ್ತಾರೆ. ಆತನ ಬಳಿ 'ನನಗೆ ಕುರ್ದಿಶ್ ಪರ್ವತಗಳ ಮೇಲೆ ಬಾಂಬ್ ಹಾಕಲು ಹೇಳುತ್ತಿದ್ದಾರೆ. ಅಲ್ಲಿ ಸಾವಿರಾರು ಮಕ್ಕಳು ಮತ್ತು ಹೆಂಗಸರು ವಾಸವಿದ್ದಾರೆ. ಆ ಕೆಲಸವನ್ನು ನಾನು ಮಾಡಲಾಗದ ಕಾರಣಕ್ಕಾಗಿ ಇರಾಕ್ ಬಿಡಬೇಕೆಂದು ನಿರ್ಧರಿಸಿರುವೆ' ಎಂದು ರೆಡ್‌ಫಾ ಹೇಳಿಕೊಳ್ಳುತ್ತಾನೆ. ಮೊಸಾದ್ ಹಾಕಿದ ಬಲೆಗೆ ಸರಿಯಾದ ವ್ಯಕ್ತಿ ಅನಾಯಾಸವಾಗಿ ಬೀಳುತ್ತಿರುವುದು ಮೀರ್ ಅಮಿತ್‌ಗೆ ಖಾತ್ರಿಯಾಗುತ್ತದೆ. ಆತ ಇರಾಕ್ ಬಿಟ್ಟು ಬರುವುದು ಖಾತ್ರಿಯಾದ ಕೂಡಲೇ, ಗ್ರೀಸ್‌ನಲ್ಲಿ ಬರಮಾಡಿಕೊಂಡು ದೊಡ್ಡ ಪಾರ್ಟಿ ನೀಡಲಾಗುತ್ತದೆ. ಆ ಪಾರ್ಟಿಯಲ್ಲಿ ಆತನಿಗೆ ಮಿಗ್-21 ವಿಮಾನದ ಸಮೇತ ಇರಾಕ್ ಬಿಡಬೇಕೆಂದು ಹೇಳಲಾಗುತ್ತದೆ. ತಕ್ಷಣ ಜರ್ಜರಿತನಾದ ರೆಡ್‌ಫಾ ಆ ರೀತಿ ಮಾಡಿದರೆ ತನ್ನನ್ನು ಸಾಯಿಸಿ ಬಿಡುತ್ತಾರೆಂದು ಭಯದಿಂದ ಹೇಳುತ್ತಾನೆ. ಆಗ ಆತನನ್ನು ಸಮಾಧಾನಪಡಿಸಿದ ಲಂಡನ್ ಪೈಲಟ್, ನಿನ್ನನ್ನು ಇಸ್ರೇಲ್ ಕೈಬೀಸಿ ಕರೆಯಲು ಸಿದ್ಧವಾಗಿದೆಯೆಂದು ಹೇಳುತ್ತಾನೆ. ಹೇಳಿದ ತಕ್ಷಣ ತಲೆಯ ಮೇಲಿನ ಟೋಪಿಯನ್ನು ಕಳಗಿಟ್ಟು 'ನಾನು ಲಂಡನ್ ಪೈಲಟ್ ಅಲ್ಲ, ಮೊಸಾದ್ ಬೇಹುಗಾರಿಕಾ ಸಂಸ್ಥೆಯ ಅಧಿಕಾರಿ' ಎಂದು ಹೇಳುತ್ತಾನೆ. ರೆಡ್‌ಫಾ ಅಂದಿನ ರಾತ್ರಿ ಯೋಚಿಸುತ್ತಾನೆ, ಮರುದಿನ ಮಿಗ್-21 ಯುದ್ಧವಿಮಾನ ಸಮೇತ ಬರುವುದಾಗಿ ಹೇಳುತ್ತಾನೆ. ಆದರೆ ಅದಕ್ಕಿಂತಲೂ ಮೊದಲು, ತನ್ನ ಕುಟುಂಬವನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕೆಂದು ಹೇಳುತ್ತಾನೆ. ಆತನ ಷರತ್ತುಗಳಿಗೆ ಒಪ್ಪಿದ ಮೀರ್ ಅಮಿತ್, ಈ ಕಾರ್ಯಾಚರಣೆಗೆ 'ಡೈಮಂಡ್' ಎಂಬ ಸಂಕೇತ ಪದವನ್ನು ಹೇಳುತ್ತಾನೆ.

ರೆಡ್‌ಫಾನನ್ನು ಅಥೆನ್ಸ್ ನಗರದಿಂದ ನೇರವಾಗಿ ರೋಮ್ ನಗರಕ್ಕೆ ಕರೆತರಲಾಗುತ್ತದೆ. ಮೊಸಾದ್ ಅಧಿಕಾರಿಗಳು ಈತನಿಗೆ ಕಾರ್ಯಾಚರಣೆಯ ಬಗ್ಗೆ ವಿವರಿಸುತ್ತಾರೆ. ಮತ್ತೊಂದೆಡೆ ಮೊಸಾದ್ ಅಧಿಕಾರಿಗಳು ಆತನ ಚಲನವಲನಗಳ ಮೇಲೆ ನಿಗಾ ಇಟ್ಟಿರುತ್ತಾರೆ. ಆತನ ಮೇಲೆ ಸಂಪೂರ್ಣವಾಗಿ ನಂಬಿಕೆ ಬಂದ ನಂತರವಷ್ಟೇ ಕಾರ್ಯಾಚರಣೆಯನ್ನು ಪ್ರಾರಂಭಿಸುತ್ತಾರೆ. ರೋಮ್ ನಗರದಿಂದ ಆತನನ್ನು ಅಥೆನ್ಸ್ ನಗರಕ್ಕೆ ವಾಪಸ್ ಕರೆತರಲಾಗುತ್ತದೆ. ಅಲ್ಲಿಂದ ಇರಾಕಿನ ಯಹೂದಿ ಹುಡುಗನಿಗೆ ರೆಡ್‌ಫಾನನ್ನು ಇಸ್ರೇಲಿಗೆ ಕರೆತರುವಂತೆ ಹೇಳಲಾಗುತ್ತದೆ. ಇಬ್ಬರೂ ವಿಮಾನ ಹತ್ತುವ ಸಂದರ್ಭದಲ್ಲಿ ಒಂದು ಗೊಂದಲವಾಗುತ್ತದೆ. ರೆಡ್‌ಫಾ ಇಸ್ರೇಲ್ ವಿಮಾನ

ಹತ್ತುವ ಬದಲು ಈಜಿಪ್ಟ್ ದೇಶದ ಕೈರೋ ವಿಮಾನ ಹತ್ತುತ್ತಾನೆ. ಅತ್ತ ಇಸ್ರೇಲಿಗೆ ಹೊರಡುವ ವಿಮಾನದಲ್ಲಿ ಕಾಯುತ್ತಿದ್ದವನಿಗೆ, ರೆಡ್‌ಫಾ ಕೈಕೊಟ್ಟನೆಂಬ ಅನುಮಾನ ಬರುತ್ತದೆ. ಆದರೆ ಕೈರೋ ವಿಮಾನದಲ್ಲಿ ಒಬ್ಬ ಪ್ರಯಾಣಿಕ ಹೆಚ್ಚಾಗಿರುವುದು ವಿಮಾನ ಸಿಬ್ಬಂದಿಗೆ ತಿಳಿದು, ರೆಡ್‌ಫಾನನ್ನು ಎಚ್ಚರಿಸಿ ಕೆಳಗಿಳಿಯುವಂತೆ ಹೇಳುತ್ತಾರೆ. ಅವನು ನಂತರ ಓಡಿಬಂದು ಇಸ್ರೇಲ್ ವಿಮಾನವನ್ನು ಹತ್ತುತ್ತಾನೆ. ಇಸ್ರೇಲಿಗೆ ಬಂದಿಳಿದ ರೆಡ್‌ಫಾನಿಗೆ ಕಾರ್ಯಾಚರಣೆಯ ಸಂಪೂರ್ಣ ವಿವರಗಳನ್ನು ನೀಡಿದ ಮೊಸಾದ್ ಅಧಿಕಾರಿಗಳು 24 ಗಂಟೆಯೊಳಗೆ ಆತನನ್ನು ಅಥೆನ್ಸ್ ಮೂಲಕ ಬಾಗ್ದಾದ್ ನಗರಕ್ಕೆ ಕಳುಹಿಸುತ್ತಾರೆ.

ರೆಡ್‌ಫಾನ ಬೇಡಿಕೆಯಂತೆ ಆತನ ಹೆಂಡತಿ ಮತ್ತು ಮಕ್ಕಳನ್ನು ಇಂಗ್ಲೆಂಡ್ ಮೂಲಕ ಅಮೆರಿಕಕ್ಕೆ ಕಳುಹಿಸುವ ತಯಾರಿಯಾಗುತ್ತದೆ. ಆದರೆ ಆತನಿಗೆ ಇರಾಕ್‌ನಲ್ಲಿ ಸಂಬಂಧಿಗಳಿರುತ್ತಾರೆ. ಆತನ ಅಮ್ಮ, ಅಪ್ಪ, ಅಕ್ಕ, ತಂಗಿ, ಅವರ ಮಕ್ಕಳು ಎಲ್ಲರನ್ನೂ ಬೇರೆಡೆಗೆ ಸ್ಥಳಾಂತರಿಸುವುದು ದೊಡ್ಡ ಸವಾಲಾಗಿರುತ್ತದೆ. ಆತನ ಹೆಂಡತಿ ಮತ್ತು ಮಕ್ಕಳನ್ನು ಇಸ್ರೇಲಿಗೆ ಕರೆದುಕೊಂಡು ಹೋಗಿ, ಸಂಬಂಧಿಕರನ್ನು ಅಮೆರಿಕಕ್ಕೆ ಕಳುಹಿಸುವ ಯೋಜನೆ ತಯಾರಾಗುತ್ತದೆ. ಅಷ್ಟು ದೊಡ್ಡ ತಯಾರಿ ನಡೆಯುತ್ತಿದ್ದರೂ ರೆಡ್‌ಫಾ ತನ್ನ ಹೆಂಡತಿಗೆ ಹೇಳಿರುವುದಿಲ್ಲ. ಮೂಲತಃ ಇರಾಕ್ ಮೂಲದವಳಾದ ಆಕೆ ಒಪ್ಪುವುದಿಲ್ಲವೆಂಬುದು ಆತನಿಗೆ ಮತ್ತು ಮೊಸಾದ್ ಅಧಿಕಾರಿಗಳಿಗೆ ತಿಳಿದಿರುತ್ತದೆ. ರೆಡ್‌ಫಾನ ಸೂಚನೆಯಂತೆ ಆತನ ಹೆಂಡತಿ ಆಮ್‌ಸ್ಟರ್‌ಡ್ಯಾಮ್‌ಗೆ ಬಂದಿಳಿಯುತ್ತಾಳೆ. ಅಲ್ಲಿಂದ ಆಕೆಯನ್ನು ಮೊಸಾದ್ ಅಧಿಕಾರಿಗಳು ಪ್ಯಾರಿಸ್ ನಗರಕ್ಕೆ ಕರೆದೊಯ್ಯುತ್ತಾರೆ. ಅಲ್ಲಿಂದ ಇಸ್ರೇಲಿಗೆ ಹೊರಡುವ ಹಿಂದಿನ ರಾತ್ರಿ ಆಕೆಗೆ ವಿಷಯವನ್ನು ಹೇಳಲಾಗುತ್ತದೆ. ತನ್ನ ಗಂಡ ಒಬ್ಬ ದೇಶದ್ರೋಹಿಯೆಂದು ಆಕೆ ಇಡೀ ರಾತ್ರಿ ಕಣ್ಣೀರಿಡುತ್ತಾಳೆ, ದಾರಿಕಾಣದೆ ಗಂಡನೊಂದಿಗೆ ಇಸ್ರೇಲಿಗೆ ಹೊರಡಲು ತಯಾರಾಗುತ್ತಾಳೆ.

1966ರ ಜುಲೈ 17ರಂದು ಕೋಡೆಡ್ ಸಂದೇಶದ ಮೂಲಕ, ರೆಡ್‌ಫಾ ಆಗಸ್ಟ್ 14ರಂದು ಮಿಗ್-21 ವಿಮಾನದ ಮೂಲಕ ಹೊರಡಲು ತಯಾರಾಗಿದ್ದಾನೆಂಬ ಮಾಹಿತಿ ರವಾನೆಯಾಗುತ್ತದೆ. ಆಗಸ್ಟ್ 14ರಂದು ಟೇಕ್ ಆಫ್ ಆಗಿದ್ದ ವಿಮಾನ ತಾಂತ್ರಿಕ ದೋಷದಿಂದ ವಾಪಸ್ ಹೋಗಿರುತ್ತದೆ. ಕಾರ್ಯಾಚರಣೆ ಹಾಳಾಯಿತೆಂದು ಮೀರ್ ಅಮಿತ್ ತಲೆ ಮೇಲೆ ಕೈ ಇಟ್ಟುಕೊಂಡು ಕೂರುತ್ತಾನೆ. ಆದರೆ ಮರುದಿನ ರೆಡ್‌ಫಾ ಯುದ್ಧವಿಮಾನವನ್ನು ಟೇಕ್ ಆಫ್ ಮಾಡಿ ಹೊರಡುತ್ತಾನೆ, ಬೆಳಗ್ಗೆ 8 ಗಂಟೆಗೆ ಇಸ್ರೇಲಿನ ಸೈನಿಕ ವಿಮಾನ ನಿಲ್ದಾಣಕ್ಕೆ ಮಿಗ್-21 ವಿಮಾನವನ್ನು ತಂದಿಳಿಸುತ್ತಾನೆ. ವಿಮಾನವನ್ನು ಕಂಡಾಕ್ಷಣ ಮೊಸಾದ್ ಅಧಿಕಾರಿಗಳಿಗೆ ಎಲ್ಲಿಲ್ಲದ ಸಂತಸ, ಮೀರ್ ಅಮಿತ್ ಇಸ್ರೇಲ್ ವಾಯುಸೇನೆ ಅಧಿಕಾರಿಗೆ ಮಾತು ನೀಡಿದಂತೆ ವಿಮಾನವನ್ನು ತರಿಸಿರುತ್ತಾನೆ. ಹಿಂದೆಂದೂ ಆಗಿರದ ಕೆಲಸ ಆತನ ರಹಸ್ಯ ಕಾರ್ಯಾಚರಣೆಯ ಮೂಲಕ ಆಗಿರುತ್ತದೆ. ಮೊಸಾದ್ ಅಧಿಕಾರಿಗಳು ಮೀರ್ ಅಮಿತ್‌ನನ್ನು ಅಭಿನಂದಿಸುತ್ತಾರೆ. ಕಾಕತಾಳೀಯವೆಂಬಂತೆ ಅದೇ ವಿಮಾನ ಕೇವಲ 10 ತಿಂಗಳ ಅಂತರದಲ್ಲಿ ಇಸ್ರೇಲ್ ನಡೆಸಿದ ಐತಿಹಾಸಿಕ ಆರು ದಿನಗಳ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆ ಯುದ್ಧದಲ್ಲಿ ಇಸ್ರೇಲ್ ದೇಶವು ಈಜಿಪ್ಟ್ ಅನ್ನು ಸೋಲಿಸುತ್ತದೆ. ಇಂದಿಗೂ ಅದು ಜಗತ್ತಿನ ಇತಿಹಾಸದಲ್ಲಿನ ಸಾಹಸಮಯ ಯುದ್ಧವೆಂದು ಖ್ಯಾತಿ ಪಡೆದಿದೆ. ನಂತರ ಇಸ್ರೇಲ್ ಬಳಿಯಿದ್ದ ಮಿಗ್-21 ವಿಮಾನವನ್ನು ತಾನು ಕೂಡ ಪರೀಕ್ಷಿಸಲು ಅಮೆರಿಕ ಕೇಳಿಕೊಳ್ಳುತ್ತದೆ. ಆ ಒಂದು ವಿಮಾನವನ್ನಿಟ್ಟುಕೊಂಡು ಅಮೆರಿಕ ಮತ್ತು ಇಸ್ರೇಲ್ ತಮ್ಮ ವಾಯುಸೇನಾ ಕ್ಷೇತ್ರದಲ್ಲಿ ದೊಡ್ಡಮಟ್ಟದ ಸಂಶೋಧನೆಗಳನ್ನು ನಡೆಸಿ ಜಗತ್ತಿನ 'ಸೂಪರ್ ಫೈಟರ್ ಜೆಟ್'ಗಳನ್ನು ನಿರ್ಮಾಣ ಮಾಡಿವೆ. ಭಾರತವು ಸಹ ರಷ್ಯಾ ನಿರ್ಮಿತ ಮಿಗ್-21 ವಿಮಾನವನ್ನು ಐದು ದಶಕಗಳ ಕಾಲ ಸೇನೆಯಲ್ಲಿ ಬಳಕೆ ಮಾಡಿತ್ತು. ಅನೇಕ ಯುದ್ಧಗಳಲ್ಲಿ ಮುಂಚೂಣಿಯಲ್ಲಿ ಸೇವೆ ಸಲ್ಲಿಸಿದ್ದ ಮಿಗ್-21 ವಿಮಾನಗಳು ಎರಡು ದಿನಗಳ ಹಿಂದೆ ಭಾರತೀಯ ವಾಯುಸೇನೆಯಿಂದ ನಿವೃತ್ತಿ ಹೊಂದಿವೆ.

ಎಚ್-1ಬಿ ದುಬಾರಿ, ಟ್ರಂಪ್ ತಂದಿಟ್ಟ ಹೊಸ ಉ(ವೀ)ಸಾಬರಿ!

ಟ್ರಂಪ್ ಹೊರಡಿಸಿದ ಹೊಸ ಆದೇಶ ತಲ್ಲಣವನ್ನೇ ಸೃಷ್ಟಿಸಿದೆ. ಉದ್ಯೋಗಿಗಳು ಮತ್ತು ಉದ್ಯೋಗದಾತ ಕಂಪನಿಗಳು ನೆಮ್ಮದಿಯನ್ನು ಕಳೆದುಕೊಂಡಿವೆ. ಅಮೆರಿಕಕ್ಕೆ ತೆರಳಿದವರು ಅಲ್ಲಿಗೆ ಹೋದ ಕೂಡಲೇ ಕಾರು ಖರೀದಿಸಿದರೆ, 2-3 ವರ್ಷಗಳಲ್ಲಿ ಬಹುತೇಕರು ಸಾಲ ಮಾಡಿ ಮನೆಯನ್ನೂ ಖರೀದಿಸಿರುತ್ತಾರೆ. ಈಗ ಅಲ್ಲಿಂದ ವಾಪಸಾಗುವಾಗ ಕಾರು-ಮನೆ ಎರಡನ್ನೂ ಮಾರಬೇಕು. ಅಂದಾಜು 5 ಲಕ್ಷ ಮನೆ ಮತ್ತು ಕಾರುಗಳು ಮುಂದಿನ ದಿನಗಳಲ್ಲಿ ಮಾರಾಟಕ್ಕೆ ಬಂದಾಗ, ಬೆಲೆ ಕುಸಿಯುವ ಆತಂಕವಿದೆ.



ಟ್ರಂಪಾಯಣ
ರವೀ ಸಜಂಗದ್ದೆ
vveditoped@gmail.com

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ! ಈ ಮನುಷ್ಯ ತಮ್ಮ ಎರಡನೆ ಅವಧಿಯ ಅಧ್ಯಕ್ಷಗಿರಿಯಲ್ಲಿ ಹೆಚ್ಚು ಕಡಿಮೆ ಪ್ರತಿದಿನವೂ ಸುದ್ದಿಯಲ್ಲಿರಲು ಪ್ರಯತ್ನಿಸಿ ಬಹುತೇಕ ಯಶಸ್ವಿಯೂ ಆಗಿದ್ದಾರೆ. 'ಅಮೆರಿಕವನ್ನು ಮತ್ತೊಮ್ಮೆ ಉತ್ತುಂಗಕ್ಕೆ ಏರಿಸುತ್ತೇನೆ' ಎಂದು ಹೇಳುತ್ತಾ, 'ಅಮೆರಿಕ ಫಸ್ಟ್' ಕಾರ್ಯನೀತಿಯ ಒಂದು ಭಾಗವಾಗಿ ಹಲವಾರು ಮಹತ್ವದ, ಒಂದಷ್ಟು ವಿವಾದಾತ್ಮಕವಾದ ಮತ್ತು ಅಮೆರಿಕ ಸೇರಿದಂತೆ ಎಲ್ಲ ದೇಶಗಳಿಗೂ ಕಿರಿಕಿರಿ ಉಂಟುಮಾಡುವಂಥ ಆದೇಶ/ಸುತ್ತೋಲೆಗಳನ್ನು ಟ್ರಂಪ್ ಸರಕಾರ ನಿರಂತರವಾಗಿ ನೀಡುತ್ತಿದೆ.

ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸೇವೆ ಮತ್ತು ಸರಕುಗಳಿಗೆ 'ಸುಂಕ-ದುಬಾರಿ ಸುಂಕ-ದಂಡರೂಪದ ಸುಂಕ' ಮುಂತಾದ ಹೆಸರಿನಲ್ಲಿ ಹೆಚ್ಚು ಹಣ ವಸೂಲಿಮಾಡುವ ಪ್ರಕ್ರಿಯೆ ಈಗಾಗಲೇ ಚಾಲ್ತಿಯಲ್ಲಿದ್ದು, ಇದರಿಂದಾಗಿ ನಮ್ಮ ರಫ್ತು ಉದ್ಯಮಕ್ಕೆ ಒಂದಷ್ಟು ಹೊಡೆತ ಬಿದ್ದಿದೆ. ಅಮೆರಿಕಕ್ಕೆ ರಫ್ತಾಗುವ ಒಟ್ಟು ಸರಕುಗಳ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ. ಇವೆಲ್ಲದರ ನಡುವೆ, ಇದೇ ಸೆಪ್ಟೆಂಬರ್ 22ರಿಂದ ತೊಡಗಿ, ಎಚ್-1ಬಿ ವೀಸಾದಡಿಯಲ್ಲಿ ಅಮೆರಿಕಕ್ಕೆ ತೆರಳುವ ಭಾರತೀಯರು ತೆರಬೇಕಾಗುವ ವಾರ್ಷಿಕ ವೀಸಾ ಮೊತ್ತವನ್ನು ಸಿಕ್ಕಾಪಟ್ಟೆ ಏರಿಸಿ ಮತ್ತೊಂದು ಸುತ್ತಿನ ಆತಂಕವನ್ನು ಸೃಷ್ಟಿಸಿದ್ದಾರೆ. ನೀವು ಈ ಬರಹವನ್ನು ಓದುವ ಹೊತ್ತಿಗೆ ಅದಾಗಲೇ ಕೆಲವರು ದುಬಾರಿ ಮೊತ್ತವನ್ನು ತೆತ್ತು ಎಚ್-1ಬಿ ವೀಸಾದ ಮೂಲಕ ಅಮೆರಿಕವನ್ನು ಪ್ರವೇಶಿಸಿದ್ದಿರಬಹುದು (ಅಥವಾ ಅಂಥ ಅನಿವಾರ್ಯತೆಯ ಬಲಿಪಶುಗಳಾಗಿದ್ದಿರಬಹುದು). ಅಲ್ಲಿಗೆ ಭಾರತದೊಂದಿಗಿನ ಅಮೆರಿಕದ ಜಿದ್ದಾಜಿದ್ದಿ ಮತ್ತೊಂದು ನಿರ್ಣಾಯಕ ಘಟ್ಟವನ್ನು ಪ್ರವೇಶಿಸಿದಂತಾಗಿದೆ.

ವರದಿಗಳ ಪ್ರಕಾರ, ಪ್ರತಿವರ್ಷ ಅಮೆರಿಕ ಕೊಡಮಾಡುವ ಒಟ್ಟು ಎಚ್-1ಬಿ ವೀಸಾಗಳಲ್ಲಿ ಶೇ.70ಕ್ಕೂ ಹೆಚ್ಚಿನ ಪಾಲನ್ನು ಭಾರತೀಯರೇ ಪಡೆದುಕೊಳ್ಳುತ್ತಿದ್ದರು. ಉಳಿದಿದ್ದರಲ್ಲಿ ಗಣನೀಯ ಪಾಲು ಚೀನಾ ದೇಶದ್ದು ಮತ್ತು ಚಿಲ್ಲರೆ ಪ್ರತಿಶತ ಉಳಿದ ದೇಶಗಳದ್ದು ಆಗಿರುತ್ತಿತ್ತು. 1990ರಲ್ಲಿ ಈ ವ್ಯವಸ್ಥೆಯನ್ನು ಅಮೆರಿಕ ಜಾರಿಗೆ ತಂದಿತ್ತು. ಹೀಗೆ ಎಚ್-1ಬಿ ವೀಸಾ ಗಿಟ್ಟಿಸಿಕೊಂಡು ಅಮೆರಿಕಕ್ಕೆ ಹೋದವರಲ್ಲಿ ಹೆಚ್ಚಿನವರು ಅಲ್ಲೇ ಇದ್ದು ಬದುಕು ಕಟ್ಟಿಕೊಳ್ಳಲು ಯೋಜಿಸುತ್ತಾರೆ. ಅಂದರೆ, ಅಮೆರಿಕದ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಮಾಡಿಕೊಂಡು ಅಲ್ಲೇ ವಾಸಿಸುವುದು. ವರ್ಷಗಳು ಉರುಳಿದಂತೆ ಅಮೆರಿಕವಾಸ ಹಿತವಾಗಿ, ಅಲ್ಲೇ ದೀರ್ಘಕಾಲ ಇರಲು ನಿರ್ಧರಿಸಿ, ಪಡೆದುಕೊಂಡಿರುವ ಎಚ್-1ಬಿ ವೀಸಾದಡಿ ನೆಲೆಸಿ, ಕೆಲ ವರ್ಷಗಳಲ್ಲಿ ಗ್ರೀನ್ ಕಾರ್ಡ್‌ಗೆ ಅರ್ಜಿ ಸಲ್ಲಿಸುತ್ತಾರೆ. ಅದು ಸಿಕ್ಕಿದರೆ ಅಲ್ಲಿನ ಪೌರತ್ವ ಸಿಕ್ಕಿದಂತೆ. ಹುಟ್ಟಿದ/ಹುಟ್ಟುವ ಮಕ್ಕಳಿಗೆ ಹೇಗೂ ಸಲೀಸಾಗಿ ಅಲ್ಲಿನ ಪೌರತ್ವ ದೊರೆಯುತ್ತದೆ. ಅಲ್ಲಿಗೆ ಎರಡರಿಂದ ಮೂರು ತಲೆಮಾರುಗಳ ಬದುಕು-ಭವಿಷ್ಯ ಅಮೆರಿಕದಲ್ಲಿ!

'ಅಮೆರಿಕ ಫಸ್ಟ್' ಕಾರ್ಯನೀತಿಯ ಭಾಗವಾಗಿ, ಅಮೆರಿಕದಲ್ಲಿ ಅಮೆರಿಕನ್ನರಿಗೇ ಹೆಚ್ಚಿನ ಉದ್ಯೋಗಾವಕಾಶವನ್ನು ನೀಡಲೆಂದು ಮತ್ತು ತನ್ನಲ್ಲಿ ಠಿಕಾಣಿ ಹೂಡಿರುವ ವಿದೇಶಿಯರನ್ನು ಹೊರಗಟ್ಟಿ ಸ್ಥಳೀಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಅಮೆರಿಕವು ಎಚ್-1ಬಿ ವೀಸಾದ ಶುಲ್ಕವನ್ನು ಹೆಚ್ಚಿಸಿ, ಅಮೆರಿಕಕ್ಕೆ ತೆರಳಲು ಬಯಸುವ ಭಾರತೀಯರಿಗೆ ಮರ್ಮಾಘಾತ ಉಂಟುಮಾಡಿದೆ. 1,700ರಿಂದ 4,500 ಡಾಲರ್‌ತನಕ ಇದ್ದ ಎಚ್-1ಬಿ ವೀಸಾದ ವಾರ್ಷಿಕ ಶುಲ್ಕವು, ಸೆಪ್ಟೆಂಬರ್ 22ರಿಂದ ಬರೋಬ್ಬರಿ 1 ಲಕ್ಷ ಡಾಲರ್‌ಗೆ (ಅಂದರೆ ಸುಮಾರು 88 ಲಕ್ಷ ರುಪಾಯಿಗಳಿಗೆ) ಏರಿಕೆಯಾಗಿದೆ. ಹೊಸದಕ್ಕೆ ಮಾತ್ರವಲ್ಲದೆ ನವೀಕರಣಕ್ಕಾಗಿ ಬರುವ ವೀಸಾಗಳಿಗೂ ಇದು ಅನ್ವಯವಾಗಲಿದೆ. ಜತೆಗೆ ಎಚ್-1ಬಿ ವೀಸಾವನ್ನು ಪಡೆಯಬೇಕಾದರೆ 128 ಪ್ರಶ್ನೆಗಳ ಲಿಖಿತ ಪರೀಕ್ಷೆಯಲ್ಲಿ ಉತ್ತರ ಬರೆದು, 20 ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಿ, ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರೆ ಮಾತ್ರವೇ ಪೌರತ್ವ ನೀಡುವ, ಈ ಹಿಂದೆ ಇದ್ದ 'ಪ್ರವೇಶ ಪರೀಕ್ಷೆ' ಮತ್ತೆ ಜಾರಿಯಾಗುವ ವಿವರಗಳೂ ಆದೇಶದಲ್ಲಿವೆ. ಅಲ್ಲಿಗೆ, ಅಮೆರಿಕಕ್ಕೆ ತೆರಳಲು ವಿದೇಶಿಯರಿಗೆ ಇದ್ದ ಅವಕಾಶಗಳ ಬಾಗಿಲನ್ನು ಅಲ್ಲಿನ ಸರಕಾರ ಮುಚ್ಚುತ್ತಿದೆ. ಭಾರತೀಯ ವಿದೇಶಾಂಗ ಸಚಿವಾಲಯವು ಈ ನಿರ್ಧಾರವನ್ನು ಖಂಡಿಸಿ ಕಳವಳವನ್ನು ವ್ಯಕ್ತಪಡಿಸಿದೆ.

2025ರಲ್ಲಿ ಅಮೆರಿಕವು 3,99,395ರಷ್ಟು ಎಚ್-1ಬಿ ವೀಸಾಗಳನ್ನು ನೀಡಿತ್ತು. ಈ ಪೈಕಿ 2,83,570 ವೀಸಾಗಳನ್ನು ಭಾರತೀಯರೇ ಪಡೆದುಕೊಂಡಿದ್ದರು- ಅಂದರೆ, ಶೇ.70ರ ಪ್ರಮಾಣಕ್ಕಿಂತ ಹೆಚ್ಚು! ಆದರೆ, ಟ್ರಂಪ್‌ರ ಈ ಹೊಸ ವೀಸಾ ನೀತಿಯು ಭಾರತದ ಮೇಲೆ ಎಂಥ ಬಲವಾದ ಪ್ರಹಾರ ಮಾಡಿದೆ ನೋಡಿ! ಎಚ್-1ಬಿ ವೀಸಾದ ಮುಖಾಂತರ ಅಮೆರಿಕದಲ್ಲಿ 3 ವರ್ಷಗಳ ಕಾಲ ಉಳಿದುಕೊಂಡು ಕೆಲಸ ಮಾಡುವ ಅವಕಾಶವಿದೆ. ನಂತರ ಮುಂದಿನ 3 ವರ್ಷಕ್ಕೆ ಮತ್ತೆ ಅದನ್ನು ವಿಸ್ತರಿಸಲು/ನವೀಕರಿಸಲು ಕೂಡ ಅವಕಾಶವಿದೆ. ಈಗ ಹೊಸನೀತಿಯ ಪ್ರಕಾರ, ಎಚ್-1ಬಿ ವೀಸಾಗೆ ವಾರ್ಷಿಕ 88 ಲಕ್ಷ ರುಪಾಯಿ ಶುಲ್ಕ ನಿಗದಿಯಾಗಿದೆ ಅಲ್ಲವೇ? ಲಭ್ಯವಿರುವ ಅಂಕಿ-ಅಂಶಗಳ ಪ್ರಕಾರ, 6 ಲಕ್ಷದಷ್ಟು ಭಾರತೀಯರು ಈ ವೀಸಾದ ಅಡಿಯಲ್ಲಿ ಅಮೆರಿಕದಲ್ಲಿದ್ದಾರೆ. 5 ಲಕ್ಷ ಜನರು 2023ರಲ್ಲಿ ಅಮೆರಿಕ ತಂದ ನವೀನ ವೀಸಾ ವ್ಯವಸ್ಥೆ/ವೀಸಾ ವಿಸ್ತರಣೆ ಯೋಜನೆಯಡಿ ಅಲ್ಲಿ ವಾಸವಿದ್ದಾರೆ. ಹೊಸ ಆದೇಶಾನುಸಾರ ಮುಂದಿನ ವರ್ಷದಿಂದ ಈ ವೀಸಾ ನವೀಕರಣ ಕಷ್ಟಸಾಧ್ಯ. ಏಕೆಂದರೆ, ಈ ವ್ಯವಸ್ಥೆಯಡಿಯಲ್ಲಿ ಅಮೆರಿಕದಲ್ಲಿರುವ ಭಾರತೀಯ ಟೆಕ್ಕಿಗಳ ವಾರ್ಷಿಕ ಸಂಬಳ 60,000ದಿಂದ 1 ಲಕ್ಷ ಡಾಲರ್. ಒಂದು ಲಕ್ಷ ಡಾಲರ್‌ನಷ್ಟು ವಾರ್ಷಿಕ ಸಂಬಳ ಕೊಡುವ ಯಾವುದೇ ಸಂಸ್ಥೆಯು ಅಷ್ಟೇ ಮೊತ್ತವನ್ನು ತನ್ನ ಉದ್ಯೋಗಿಯ ಎಚ್-1ಬಿ ವೀಸಾದ ನವೀಕರಣಕ್ಕೆ ವ್ಯಯಿಸುವ ಸಾಧ್ಯತೆ ತೀರಾ ಕ್ಷೀಣ. ಹಾಗಾಗಿ ಸದ್ಯ ಎಚ್-1ಬಿ ವೀಸಾದಡಿ ಅಮೆರಿಕದಲ್ಲಿರುವ ಬಹುತೇಕರ ಭವಿಷ್ಯ ಡೋಲಾಯಮಾನವಾಗಿದೆ.

ಈ ಶುಲ್ಕ ಹೆಚ್ಚಳವು ಅಮೆರಿಕದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಐಟಿ ಮತ್ತು ಅದರ ಸೇವಾದಾತ ಕಂಪನಿಗಳಿಗೆ ಬಲವಾದ ಪೆಟ್ಟು ನೀಡಿರುವುದು ಈ ಹೊಸ ವೀಸಾ ನೀತಿಯ ಮತ್ತೊಂದು ನಕಾರಾತ್ಮಕ ಪರಿಣಾಮ! ಮೆಟಾ, ಮೈಕ್ರೋಸಾಫ್ಟ್, ಇನ್ಫೋಸಿಸ್, ಗೂಗಲ್, ಟಿಸಿಎಸ್, ಕಾಗ್ನಿಜೆಂಟ್ ಮುಂತಾದ ಸಂಸ್ಥೆಗಳು ಎಚ್-1ಬಿ ವೀಸಾದಡಿಯಲ್ಲಿ ಅಮೆರಿಕದಲ್ಲಿ ನೆಲೆಸಿರುವ ತಮ್ಮ ಉದ್ಯೋಗಿಗಳಿಗೆ, ಒಂದು ವೇಳೆ ಭಾರತದಲ್ಲಿ ಅಥವಾ ಇತರ ದೇಶಗಳಲ್ಲಿ ಪ್ರವಾಸದಲ್ಲಿದ್ದರೆ, ಅಂಥವರು ಕ್ಷಿಪ್ರವಾಗಿ ಅಮೆರಿಕ ತಲುಪುವಂತೆ ಆದೇಶ ನೀಡಿದ್ದುಂಟು. ಯಾಕೆಂದರೆ, ಅಂಥವರು ಸೆಪ್ಟೆಂಬರ್ 22ರ ಬಳಿಕ ಅಮೆರಿಕ ಪ್ರವೇಶಿಸಲು 88 ಲಕ್ಷ ರುಪಾಯಿ ಹಣವನ್ನು ವ್ಯಯಿಸಬೇಕಾಗುತ್ತಲ್ಲ ಎಂಬುದು ಈ ಸಂಸ್ಥೆಗಳ ಆತಂಕವಾಗಿತ್ತು. ಅಮೆರಿಕದಲ್ಲಿರುವ ಉದ್ಯೋಗಿಗಳು ಕನಿಷ್ಠ ಒಂದು ತಿಂಗಳ ಕಾಲ ಅಮೆರಿಕವನ್ನು ತೊರೆಯದಂತೆಯೂ ಈ ಸಂಸ್ಥೆಗಳು ವಿನಂತಿಸಿವೆ. 'ನಿಮ್ಮ ಭವಿಷ್ಯದ ಒಳಿತಿಗಾಗಿ ಈ ಆದೇಶಗಳನ್ನು ಪಾಲಿಸಿ' ಎಂದು ಅವು ತಮ್ಮ ಉದ್ಯೋಗಿಗಳಿಗೆ ಇ-ಮೇಲ್ ಮೂಲಕ ತಾಕೀತು ಮಾಡಿವೆ. ಹೀಗಾಗಿ ದಸರಾ/ದೀಪಾವಳಿಗೆ ತಾಯ್ನಾಡಿಗೆ ಬರಲು ಯೋಜಿಸಿದ್ದ ಎಲ್ಲರಿಗೂ ಈ ಪರಿಸ್ಥಿತಿ ಆತಂಕ ತಂದಿದೆ. ಬಹುತೇಕರು ತಮ್ಮ ಭಾರತ ಪ್ರವಾಸವನ್ನು ರದ್ದುಮಾಡಿದ್ದಾರೆ, ಇಲ್ಲವೇ ಮುಂದೂಡಿದ್ದಾರೆ.

ಮುಂದೇನಾಗಬಹುದು?: ಟ್ರಂಪ್ ಹೊರಡಿಸಿದ ಈ ಹೊಸ ಆದೇಶ ತಲ್ಲಣವನ್ನೇ ಸೃಷ್ಟಿಸಿದೆ. ಉದ್ಯೋಗಿಗಳು ಮತ್ತು ಉದ್ಯೋಗದಾತ ಕಂಪನಿಗಳು ನಿದ್ರೆ-ನೆಮ್ಮದಿಯನ್ನು ಕಳೆದುಕೊಂಡಿವೆ. ಅಮೆರಿಕಕ್ಕೆ ತೆರಳಿದವರು ಅಲ್ಲಿಗೆ ಹೋದ ಕೂಡಲೇ ಕಾರು ಖರೀದಿಸಿದರೆ, 2-3 ವರ್ಷಗಳಲ್ಲಿ ಬಹುತೇಕರು ಸಾಲ ಮಾಡಿ ಮನೆಯನ್ನೂ ಖರೀದಿಸಿರುತ್ತಾರೆ. ಈಗ ಅಲ್ಲಿಂದ ವಾಪಸಾಗುವ ಸಂದರ್ಭದಲ್ಲಿ ಕಾರು-ಮನೆ ಎರಡನ್ನೂ ಮಾರಬೇಕು. ಅಂದಾಜು 5 ಲಕ್ಷ ಮನೆ ಮತ್ತು ಕಾರುಗಳು ಮುಂದಿನ ದಿನಗಳಲ್ಲಿ ಮಾರಾಟಕ್ಕೆ ಬಂದಾಗ, ಖಂಡಿತವಾಗಿಯೂ ಬೆಲೆ ಕುಸಿಯುವ ಆತಂಕವಿದೆ. ಅಂದರೆ ಇಂಥವರಿಗೆ ತಮ್ಮ ಮನೆ-ಕಾರನ್ನು ನಷ್ಟದಲ್ಲಿ ಮಾರಿ ಅಮೆರಿಕದಿಂದ ಭಾರತಕ್ಕೆ ವಾಪಸಾಗಬೇಕಾದ ಅನಿವಾರ್ಯತೆ!

ಹಲವು ಕನಸುಗಳು ಮತ್ತು ಮಹತ್ವಾಕಾಂಕ್ಷೆಗಳನ್ನು ಇಟ್ಟುಕೊಂಡು, ಬಂಧು-ಮಿತ್ರರು, ಸಂಬಂಧ, ಹಬ್ಬ-ಹರಿದಿನಗಳನ್ನು ತ್ಯಾಗಮಾಡಿ ಅಮೆರಿಕಕ್ಕೆ ತೆರಳಿದ ಬಹುತೇಕರು, ಕೊನೆಗೆ ಏನನ್ನೂ ಸಂಪಾದಿಸದೆ, ಸಾಧಿಸಲಾಗದೆ, ಭಾರವಾದ ಹೃದಯದಿಂದ ಭಾರತಕ್ಕೆ ಬರಿಗೈಯಲ್ಲಿ ವಾಪಸಾಗಬೇಕಾದಂಥ ನೋವಿನ ಪರಿಸ್ಥಿತಿಯನ್ನು ಟ್ರಂಪ್ ಸೃಷ್ಟಿಸಿದ್ದಾರೆ. ಅಮೆರಿಕದಲ್ಲಿರುವ ಕಂಪನಿಗಳು ತಮ್ಮ ದೈನಂದಿನ ವ್ಯವಹಾರವನ್ನು ನಿಭಾಯಿಸಲೂ ಹೆಣಗಾಡಬೇಕಾದ, ಭಾರತೀಯರು ಬಿಟ್ಟುಬರುವ ಆ ಸ್ಥಾನಗಳಿಗೆ ಅಷ್ಟೇನೂ ಪರಿಣತಿಯುಳ್ಳದ ಅಮೆರಿಕನ್ ಉದ್ಯೋಗಿಗಳನ್ನು ನೇಮಿಸಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಲಿದೆ; ಇದರಿಂದಾಗಿ ಅವುಗಳ ವ್ಯವಹಾರ ಒಪ್ಪಂದ ಮತ್ತು ದೈನಂದಿನ ಸೇವಾ ಉತ್ಕೃಷ್ಟತೆಗೆ ಒಂದಷ್ಟು ಪೆಟ್ಟು ಬೀಳಲಿದೆ. ಅಮೆರಿಕದಲ್ಲಿ ಈ ಕಂಪನಿಗಳ ಸೇವೆ ಪಡೆಯುತ್ತಿರುವ ಎಲ್ಲ ಸಂಸ್ಥೆಗಳನ್ನು ಈ ನಕಾರಾತ್ಮಕ ಪರಿಣಾಮ ಬಾಧಿಸಲಿದೆ.

ಅಮೆರಿಕ ನಿಂತಿರುವುದು ಮತ್ತು ಅಲ್ಲಿನ ಜನರು ಅವಲಂಬಿಸಿ ಜೀವಿಸುತ್ತಿರುವುದು ಸಾಲದ ಮೇಲೆ; ಇಲ್ಲಿನ ಬಹುತೇಕರ, ಬಹುಪಾಲು ಆದಾಯವು ಸಾಲದ ಕಂತುಗಳನ್ನು ಕಟ್ಟಲು ವಿನಿಯೋಗವಾಗುತ್ತಿದೆ. ಆರ್ಥಿಕವಾಗಿ ಒಂದಷ್ಟು ಉತ್ತಮ ಸ್ಥಿತಿಯಲ್ಲಿದ್ದ ಇಂಥ ಎಚ್-1ಬಿ ವೀಸಾದ ಭಾರತೀಯರನ್ನೂ ಈಗ ಅಲ್ಲಿಂದ ಒಕ್ಕಲೆಬ್ಬಿಸಿದರೆ, ಅದರ ಬಿಸಿ ಅಮೆರಿಕಕ್ಕೆ ಖಂಡಿತ ತಟ್ಟಲಿದೆ. ಇದರ ಋಣಾತ್ಮಕ ಆರ್ಥಿಕ ಪರಿಣಾಮವನ್ನು ಅಮೆರಿಕವೇ ಭರಿಸಬೇಕಿದೆ. ಸದ್ಯದ ಮಟ್ಟಿಗೆ ಬಹುತೇಕ ಕಂಪನಿಗಳು ತಂತಮ್ಮ ಉದ್ಯೋಗಿಗಳನ್ನು ಹಂತಹಂತವಾಗಿ, ಅವರ ಈಗಿನ ವೀಸಾ ಅವಧಿ ಮುಗಿದ ಕೂಡಲೇ ಭಾರತಕ್ಕೆ ವಾಪಸ್ ಕರೆಸಿಕೊಳ್ಳಬಹುದು ಅಥವಾ ವಾಪಸಾಗಲು ಸೂಚಿಸಬಹುದು. ಇದರ ಜತೆಜತೆಗೆ ಹಂತಹಂತವಾಗಿ ಅಮೆರಿಕದ ಸಮಯ ವಲಯದ (time zone) ಆಸುಪಾಸಿನಲ್ಲಿರುವ ಕ್ಯೂಬಾ, ಮೆಕ್ಸಿಕೋ, ಕೋಸ್ಟರಿಕಾ, ಕೊಲಂಬಿಯಾ, ಕೆನಡಾ ಮುಂತಾದ 'ಜೀವನ ನಿರ್ವಹಣಾ ವೆಚ್ಚ' ಕಡಿಮೆ ಇರುವ ದೇಶಗಳಲ್ಲಿ ಅವು ತಮ್ಮ ಶಾಖೆಗಳನ್ನು ತೆರೆದು, ಅಲ್ಲಿಂದ ಉದ್ಯೋಗಿಗಳು ಕಾರ್ಯನಿರ್ವಹಿಸುವಂತೆ ಪ್ರೇರೇಪಿಸಬಹುದು. ಟ್ರೆಂಡ್ ನೋಡಿಕೊಂಡು, ಪ್ರತಿಭಾವಂತ ಮಾನವ ಸಂಪನ್ಮೂಲವು ಭಾರತದಲ್ಲಿ ಹೇರಳವಾಗಿರುವ ಕಾರಣ, ಅಮೆರಿಕ ಮತ್ತು ಇತರ ದೇಶಗಳ ಕಂಪನಿಗಳು ತಮ್ಮ ಹೊಸ 'ಜಾಗತಿಕ ಸಾಮರ್ಥ್ಯ ಕೇಂದ್ರ'ವನ್ನು (Global Capability Centre) ಭಾರತದಲ್ಲಿ ನಿರ್ಮಿಸಿ, ಹೆಚ್ಚಿನ ಪ್ರಾಜೆಕ್ಟ್‌ಗಳನ್ನು ಇಲ್ಲಿಂದಲೇ ನಿರ್ವಹಿಸುವ ಸಾಧ್ಯತೆ/ಅವಕಾಶವಿದೆ. ಹೀಗಾದಾಗ ಮುಂದಿನ ದಿನಗಳಲ್ಲಿ ದೊಡ್ಡ ಮೊತ್ತದ ಬಂಡವಾಳವು ನಮ್ಮ ದೇಶಕ್ಕೆ ಹರಿದು ಬರಲಿರುವುದು ನಿಶ್ಚಿತ.

ಜಾಗತಿಕ ಒಕ್ಕೂಟ ವ್ಯವಸ್ಥೆಯನ್ನು ಮತ್ತು ಪರಸ್ಪರ ಕೊಡು-ಕೊಳ್ಳುವಿಕೆಯ ನೀತಿಯನ್ನು ಅನುಸರಿಸಿಕೊಂಡು ಹೋಗಬೇಕಾದುದು ಎಲ್ಲ ದೇಶಗಳ ಧರ್ಮ ಮತ್ತು ಸಾಮಾನ್ಯ ಕಾರ್ಯಸೂಚಿ ಆಗಿರಬೇಕು. ಅಮೆರಿಕ ಅಧ್ಯಕ್ಷರು ಈ ನಿಟ್ಟಿನಲ್ಲಿ ಸ್ವಲ್ಪ ಆತುರಕ್ಕೆ ಬಿದ್ದಂತೆ ವರ್ತಿಸಿ, ಸದ್ಯಕ್ಕೆ ಭಾರತದೆದುರು ಮೇಲುಗೈ ಸಾಧಿಸಿದಂತೆ ಭಾಸವಾಗುತ್ತಿದೆ. ದುಬಾರಿ ಸುಂಕನೀತಿ, ವೀಸಾ ದರದ 'ದುಬಾರೀಕರಣ' ಮುಂತಾದ ನಿಲುವುಗಳು ಮುಂದಿನ ವರ್ಷಗಳಲ್ಲಿ ಅಮೆರಿಕಕ್ಕೆ ತಿರುಗುಬಾಣವಾಗಲಿವೆ. ಆದರೆ ಸದ್ಯಕ್ಕಂತೂ ಈ ನಿಲುವಿನಿಂದ ಭಾರತಕ್ಕೆ ಒಂದಷ್ಟು ಹೊಡೆತ ಬಿದ್ದಿರುವುದು ಸತ್ಯ.

ಸ್ವಾವಲಂಬಿ ಭಾರತವನ್ನು ಮತ್ತಷ್ಟು ಸ್ವಾವಲಂಬಿಯಾಗಿಸಲು ಇಂಥ ಸವಾಲುಗಳು ಮತ್ತು ನಿರ್ಣಯಗಳು ಸಹಕಾರಿಯಾಗಲಿ. ಅಮೆರಿಕ ಸೇರಿದಂತೆ ಇತರ ದೇಶಗಳ ಮೇಲಿನ ಅವಲಂಬನೆ ಎಲ್ಲ ಕ್ಷೇತ್ರಗಳಲ್ಲೂ ಕಡಿಮೆಯಾಗಿ, ಸದ್ಯದ ಸಂಕೀರ್ಣ ಸ್ಥಿತಿ ಅವಕಾಶವಾಗಿ ಮಾರ್ಪಟ್ಟು, ಭಾರತವು 'ವಿಶ್ವಗುರು' ಮತ್ತು 'ವಿಶ್ವಬಂಧು'ವಾಗಿ ಎದ್ದು ನಿಲ್ಲಲಿ. ಈಗಿನ ಸಣ್ಣ ಹಿಂಜರಿಕೆಯು ನಾಳೆಗಳ ದೊಡ್ಡ ಗೆಲುವಿಗೆ ಮುನ್ನುಡಿಯಾಗಲಿ. ಈ ಹೊಸ ವೀಸಾ ಉಸಾಬರಿಯೂ ಬೇಗ ವಾಸಿಯಾಗಲಿ...

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕ್ಯಾಚ್

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ನೀವು ಜೀವನವನ್ನು ಸಖತ್ ಖುಷಿಯಿಂದ ಕಳೆಯುತ್ತೀರಲ್ಲ, ಹೇಗೆ?
– **ಮದುವೆಯಾಗಿದ್ದರೂ ನೀವು ಜೀವನವನ್ನು ಸಖತ್ ಖುಷಿಯಿಂದ ಕಳೆಯುತ್ತೀರಲ್ಲ ಹೇಗೆ ಎಂದು ಕೇಳಿದ್ದರೆ ಉತ್ತರಿಸುತ್ತಿದ್ದೆ!**

- **ಗುರುನಾರಾಯಣ ಪಟಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ನಮ್ಮದು ಡಬಲ್ ಸ್ಟ್ಯಾಂಡರ್ಡ್, ಏನಂತೀರಿ?
– **ಹೂಂ.. ನಮಗೆ ಆಂಗ್ಲರ ಹೆಸರು ಬೇಡ, ಆದರೆ ಅವರ ಭಾಷೆ ಬೇಕು!**

- **ರಾಮಚಂದ್ರ ಗಾಣಿಗ, (ಇಮೇಲ್ ಮೂಲಕ)**
ಭಟ್ರೇ, ಒಳ್ಳೆಯ ಮನುಷ್ಯನಾಗು ಅಂತ ಉಪದೇಶ ಕೊಡ್ತಾರಲ್ಲ?
– **ಹೂಂ.. ಆದರೆ ನಾನೇ ಒಳ್ಳೆಯವನು ಎಂದು ಸಾಬೀತುಮಾಡಲು ಹೋಗಬಾರದು!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಹೆಣ್ಣನ್ನು ಚಂದ್ರನಿಗೆ ಹೋಲಿಸುವುದು ಸರಿಯಾ?
– **ಅಲ್ಲಿನ ಕಲೆ, ಗುಳಿಗಳನ್ನು ನೋಡಿ ಹೋಲಿಕೆ ಸರಿಯಾಗಿದೆ ಎನಿಸುತ್ತದೆ!**

- **ಸದಾಶಿವ ಲಿಂಗದ, ಹಾವೇರಿ**
ಭಟ್ರೇ, ಕಾವ್ಯ ಅಂದ್ರೆ ಬಹಳ ನವಿರಾಗಿರುವಂಥದ್ದು ಎಂದು ನಾನು ಭಾವಿಸಿದ್ದು ತಪ್ಪಾಯ್ತಾ?
– **ಮೊಯಿಲಿ ಮಹಾಕಾವ್ಯ ಓದಿ ನಿನ್ನ ಅಭಿಪ್ರಾಯ ಬದಲಿಸಿಕೊಳ್ಳಬೇಡ!**

- **ಶಾರದಾ ಕನ್ಯಾಡಿ, (ಇಮೇಲ್ ಮೂಲಕ)**
ಭಟ್ರೇ, ಪ್ರಗತಿಪರ ಪದ ಕೇಳಿದೊಡನೆ ನೀವು ಗಾಬರಿಯಾಗುವುದೇಕೆ?
– **ಇಲ್ಲ, ಆ ಪದವನ್ನು ರೈತರಿಗೆ ಬಳಸಿದಾಗ ಸಂತೋಷಪಡುತ್ತೇನೆ!**

- **ಕಾವೇರಿ ಶಾನುಭಾಗ, ಬೆಂಗಳೂರು**
ಭಟ್ರೆ, ಜೀವನವಿಡೀ ಗಂಡನ ಸೇವೆ ಮಾಡೋದೇ ಆಯ್ತಲ್ಲ?
– **ಕಟ್ಟಿಕೊಂಡವನೊಬ್ಬನ ಸೇವೆ ಮಾಡಿದ್ದರೆ ನಿಜಕ್ಕೂ ಬೋರಿಂಗ್ ಬಿಡಿ!**

- **ಮಂಗಳಾ ಸಿದ್ದೇಶ (ಇಮೇಲ್ ಮೂಲಕ)**
ಭಟ್ರೇ, ಹಲವು ವೇಷಧಾರಿಗಳನ್ನು ಏಕಕಾಲದಲ್ಲಿ ನೋಡಬೇಕು ಅಂದ್ರೆ ಎಲ್ಲಿಗೆ ಹೋಗಬೇಕು?
– **ಮುಖ್ಯಮಂತ್ರಿಗಳ ಮನೆಗೆ!**

- **ನಿಧಿ, ಚಾಮರಾಜಪೇಟೆ**
ಸರ್, ಕನ್ನಡ ಸಿನಿಮಾ ನಟರು ಇಂಗ್ಲಿಷಿನಲ್ಲಿ ಮಾತಾಡ್ತಾರಲ್ಲ?
– **ಅದೇ ಕನ್ನಡ ಸಿನಿಮಾದಲ್ಲಿ ಮಾತಾಡಿದ್ರೆ ತಮ್ಮ ಇಂಗ್ಲಿಷ್ ಬಂಡವಾಳ ಪ್ರೇಕ್ಷಕರಿಗೆ ಗೊತ್ತಾಗುತ್ತೆ ಎಂಬ ಅಳುಕು!**

ನವರಾತ್ರಿಯ ಶಕ್ತಿ, ಆಯುರ್ವೇದದ ಯುಕ್ತಿ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ದೇಹ-ಮನ-ಆತ್ಮ ಸಮತೋಲನಕ್ಕೆ ಪಾಠಗಳು

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳಿಗೆ ವಿಶಿಷ್ಟ ಸ್ಥಾನವಿದೆ. ಹಬ್ಬಗಳು ಕೇವಲ ಮನರಂಜನೆ ಅಥವಾ ಧಾರ್ಮಿಕ ಆಚರಣೆಗಳಲ್ಲ, ಅವು ಜೀವನಶೈಲಿಯ ಪಾಠ ಕಲಿಸುವ ಮಹತ್ವದ ಸಂದರ್ಭಗಳಾಗಿವೆ. ನವರಾತ್ರಿ ಹಬ್ಬವು ಒಂಬತ್ತು ದಿನಗಳ ಕಾಲ ನಡೆಯುವ ಶಕ್ತಿ ಆರಾಧನೆಯ ಮಹೋತ್ಸವ. ಈ ಹಬ್ಬದಲ್ಲಿ ದೇವಿಯ ನವರೂಪಗಳನ್ನು ಪೂಜಿಸುವುದರ ಜತೆಗೆ, ಉಪವಾಸ, ಸಾತ್ವಿಕ ಆಹಾರ ಸೇವನೆ, ಅರ್ಚನೆ, ಭಕ್ತಿ-ಧ್ಯಾನ-ಸಂಗೀತಗಳ ಮೂಲಕ ದೇಹ, ಮನಸ್ಸು ಮತ್ತು ಆತ್ಮಕ್ಕೆ ಹೊಸ ಶಕ್ತಿಯನ್ನು ತುಂಬಲಾಗುತ್ತದೆ. ಇದು ಆಯುರ್ವೇದದ ಮುಖ್ಯ ಗುರಿ ಕೂಡ- ದೇಹದ ಸಮತೋಲನ, ಮನಸ್ಸಿನ ಶಾಂತಿ, ಆತ್ಮದ ಶುದ್ಧತೆ. ಹೀಗಾಗಿ, ನವರಾತ್ರಿ ಹಬ್ಬವನ್ನು ಆಯುರ್ವೇದದ ದೃಷ್ಟಿಯಿಂದ ನೋಡಿದರೆ ಅನೇಕ ಜೀವನಪಾಠಗಳನ್ನು ಕಲಿಯಬಹುದು.

ದೇವಿಯ ನವರೂಪ, ಆಯುರ್ವೇದದ ತತ್ವಗಳು

ನವರಾತ್ರಿಯ ವೇಳೆಯಲ್ಲಿ ಆರಾಧಿಸಲ್ಪಡುವ ದೇವಿಯ ನವರೂಪಗಳಲ್ಲಿ ಪ್ರತಿಯೊಂದು ರೂಪವು ಸಹ ಜೀವನದ ಒಂದು ಮೌಲ್ಯವನ್ನು ಪ್ರತಿನಿಧಿಸುತ್ತದೆ. ಆಯುರ್ವೇದವು ಸಹ ದೇಹದ ಮೂರು ದೋಷಗಳಾದ ವಾತ, ಪಿತ್ತ, ಕಫಗಳನ್ನು ಸಮತೋಲನದಲ್ಲಿರಿಸಿ, ಇಂದ್ರಿಯ-ಮನಗಳ ಪ್ರಶಾಂತತೆಯನ್ನು ಕಾಯ್ದಿರಿಸಲು ಪ್ರೇರೇಪಿಸುತ್ತದೆ. ಈ ಎರಡನ್ನೂ ಹೋಲಿಸಿದರೆ ಒಂದು ಆಳವಾದ ಸಂಬಂಧ ಗೋಚರಿಸುತ್ತದೆ.

1. **ಶೈಲಪುತ್ರಿ:** ಪರ್ವತದ ಪುತ್ರಿ ಎಂಬ ಅರ್ಥ. ಅವಳು ಸ್ಥಿರತೆ ಮತ್ತು ನೆಲೆಬದ್ಧತೆಯ ಸಂಕೇತ. ದೇಹದಲ್ಲಿ ವಾತದೋಷವು ಒಂದು ಚಾಲಕ ಶಕ್ತಿ. ಅದು ಸದಾ ಚಂಚಲ. ಅದರ ಚಂಚಲತೆಯು ಮಿತಿಮೀರಿದಾಗ ದೇಹದಲ್ಲಿ ವಿವಿಧ ರೋಗಗಳು ಪ್ರಾರಂಭ. ಹಾಗಾಗಿ ಈ ಚಂಚಲ ವಾತವನ್ನು ಮತ್ತು ಮನಸ್ಸಿನ ಅಸ್ಥಿರತೆಯನ್ನು ನಿಯಂತ್ರಿಸಲು ಶೈಲಪುತ್ರಿಯ ತತ್ವವನ್ನು ನೆನಪಿಸಿಕೊಳ್ಳಬಹುದು.
2. **ಬ್ರಹ್ಮಚಾರಿಣಿ:** ಈಕೆ ತಪಸ್ಸು ಮತ್ತು ಶಿಸ್ತಿನ ಪ್ರತೀಕ. ದೋಷಗಳ ಏರುಪೇರುಗಳನ್ನು ನಿಯಂತ್ರಿಸಲು ಶಿಸ್ತಿನ ಜೀವನಶೈಲಿ ಅಗತ್ಯ. ಇಂದ್ರಿಯಗಳನ್ನು ಹತೋಟಿಯಲ್ಲಿರಿಸಿ ಮನಸ್ಸನ್ನು ಏಕಾಗ್ರಗೊಳಿಸಲು ನಿತ್ಯವೂ ತಪಸ್ಸಿನ ಅಗತ್ಯವಿದೆ.
3. **ಮಾತಾ ಚಂದ್ರಘಂಟಾ:** ಇವಳು ಶಾಂತಿ ಮತ್ತು ಸಮನ್ವಯದ ರೂಪ. ಇದು ಕಫ ದೋಷದ ಶಾಂತ, ಸಮತೋಲನ ಗುಣವನ್ನು ಪ್ರತಿಪಾದಿಸುವುದರ ಜತೆಗೆ ಸದಾ ಮನಃಶಾಂತಿಗೆ ನೀಡಬೇಕಾದ ಪ್ರಾಮುಖ್ಯವನ್ನು ನೆನಪಿಸುತ್ತದೆ.
4. **ಮಾತಾ ಕೂಷ್ಮಾಂಡಾ:** ಇವಳು ಪೋಷಣೆ ಮತ್ತು ಶಕ್ತಿಯನ್ನು ನೀಡುವ ದೇವಿ. ಆಯುರ್ವೇದದಲ್ಲಿ ಪೌಷ್ಟಿಕ ಆಹಾರವು ದೇಹಕ್ಕೆ ಪ್ರಾಣಶಕ್ತಿ ನೀಡಿ ದೇಹೇಂದ್ರಿಯ-ಮನಗಳನ್ನು ಪೋಷಿಸುವಂತೆ, ಕೂಷ್ಮಾಂಡಾ ದೇವಿಯ ತತ್ವವು ಪೋಷಕ ಜೀವಸತ್ತ್ವದ ಸಂಕೇತ.
5. **ಮಾತಾ ಸ್ಕಂದಮಾತೆ:** ಈ ದೇವಿಶಕ್ತಿಯು ತಾಯಿತನದ ಸಂಕೇತ. ದೇಹಕ್ಕೆ ರೋಗನಿರೋಧಕ ಶಕ್ತಿ ನೀಡುವ ಆಹಾರ ಮತ್ತು ಸ್ನೇಹಪೂರ್ಣ ಜೀವನಶೈಲಿಯ ಮಹತ್ವವನ್ನು ಈ ರೂಪ ನೆನಪಿಸುತ್ತದೆ. ಸಮಾಜಕ್ಕೆ ಸತ್ಪ್ರಜೆಯನ್ನು ನೀಡುವ ಧ್ಯೇಯೋದ್ದೇಶವನ್ನು ಇದು ಸೂಚಿಸುತ್ತದೆ.
6. **ಮಾತಾ ಕಾತ್ಯಾಯಿನಿ:** ಇವಳು ಧೈರ್ಯದ ಪ್ರತೀಕ. ಉತ್ಸಾಹ ಮತ್ತು ಹೃದಯದ ಬಲವನ್ನು ಕಾಪಾಡುವ ಉತ್ತಮ ಆಹಾರ-ವ್ಯಾಯಾಮಗಳ ಅನುಷ್ಠಾನವನ್ನು ಈ ತತ್ತ್ವವು ಪ್ರತಿಪಾದಿಸುತ್ತದೆ .
7. **ಮಾತಾ ಕಾಳರಾತ್ರಿ:** ಅಂಧಕಾರವನ್ನು ನಾಶಮಾಡುವ ಶಕ್ತಿ. ಆಯುರ್ವೇದದಲ್ಲಿ ದೇಹದ ವಿಷ, ಅಜೀರ್ಣ, ಅಶುದ್ಧಿಯನ್ನು ದೂರ ಮಾಡುವ ತತ್ತ್ವ. ಮಾನಸಿಕ ಜಡತ್ತ್ವ ಮತ್ತು ತಮಸ್ಸನ್ನು ತೊಲಗಿಸಿದಾಗ ಮಾತ್ರ ಸಂಪೂರ್ಣ ಸ್ವಾಸ್ಥ್ಯದ ಅನುಭವ ಸಾಧ್ಯ ಎಂಬ ಬೋಧನೆ ಇಲ್ಲಿ ಧ್ವನಿತ.
8. **ಮಾತಾ ಮಹಾಗೌರಿ:** ಈಕೆಯು ಶುದ್ಧತೆ ಮತ್ತು ತೇಜಸ್ಸಿನ ರೂಪ. ಉಪವಾಸ, ಲಘು ಆಹಾರ, ಹಾಲು, ತುಪ್ಪ ಇವುಗಳ ಮೂಲಕ ದೇಹ ಶುದ್ಧೀಕರಣವಾದರೆ, ಸತ್ಯ, ಅಹಿಂಸಾ, ಅಧ್ಯಯನ, ಸೇವೆ, ತ್ಯಾಗ- ಇವುಗಳಿಂದ ಮಾತ್ರ ಮನಸ್ಸಿನ ಶುದ್ಧಿ ಸಾಧ್ಯ ಎಂದು ಸಾರುವ ಸ್ವರೂಪ ಇದು.
9. **ಮಾತಾ ಸಿದ್ಧಿದಾತ್ರಿ:** ದೇವಿಯ ಈ ಸ್ವರೂಪವು ಸಂಪೂರ್ಣತೆ ಮತ್ತು ಸಮೃದ್ಧಿಯ ರೂಪ. ಆಯುರ್ವೇದದ ಗುರಿಯು ಸಹ ಇದೇ- ದೇಹ, ಇಂದ್ರಿಯ, ಮನಸ್ಸು, ಆತ್ಮಗಳ ಸಾಮ್ಯತೆ, ತನ್ಮೂಲಕ ಸ್ವಾಸ್ಥ್ಯವೆಂಬ ಸ್ವಾತಂತ್ರ್ಯದ ಸಿದ್ಧಿ.

ಉಪವಾಸ ಮತ್ತು ದೇಹಶುದ್ಧೀಕರಣ

ನವರಾತ್ರಿಯಲ್ಲಿ ಉಪವಾಸ ಆಚರಿಸುವುದು ಸಾಮಾನ್ಯ. ಧಾರ್ಮಿಕ ದೃಷ್ಟಿಯಿಂದ ದೇವಿಯ ಆರಾಧನೆಗೆ ಉಪವಾಸ ಮುಖ್ಯವಾದರೂ, ಆಯುರ್ವೇದದ ದೃಷ್ಟಿಯಿಂದ ಇದು ದೇಹದ ದೋಷ ನಿವಾರಣೆಗೆ ಅತ್ಯಂತ ಸಹಾಯಕ.

ಆಯುರ್ವೇದದಲ್ಲಿ 'ಲಘು ಆಹಾರ' ಅಥವಾ 'ಉಪವಾಸ'ವು ದೇಹದ ಆಮ (ಅಜೀರ್ಣ ವಿಷ)ವನ್ನು ಹೊರಹಾಕಿ, ಜೀರ್ಣಕ್ರಿಯೆಗೆ ವಿಶ್ರಾಂತಿ ನೀಡುತ್ತದೆ. ಹಣ್ಣು, ಹಾಲು, ಹೆಸರುಬೇಳೆ, ಹುರಿದ ಅಕ್ಕಿ, ಪಾಯಸ ಇಂಥ ಲಘು, ಸಾತ್ವಿಕ ಆಹಾರಗಳನ್ನು ಸೇವಿಸುವುದು ದೇಹವನ್ನು ಶುದ್ಧಿಗೊಳಿಸುವುದಕ್ಕೆ, ದೋಷಗಳ ಸಮತೋಲನಕ್ಕೆ ಸಹಕಾರಿ. ನವರಾತ್ರಿ ಉಪವಾಸವು Detox ನ ಒಂದು ವಿಧ!

ಸರಿಯಾಗಿ, ಕ್ರಮಬದ್ಧವಾಗಿ ಮಾಡಿದ ಉಪವಾಸದಿಂದ ಚರ್ಮವು ಕಾಂತಿಯುಕ್ತವಾಗುತ್ತದೆ, ಜೀರ್ಣಶಕ್ತಿ ಉತ್ತೇಜನಗೊಳ್ಳುತ್ತದೆ, ಶರೀರವು ಲಘುವಾಗುತ್ತದೆ, ಮನಸ್ಸು ಚುರುಕಾಗುತ್ತದೆ ಮತ್ತು ಆತ್ಮಶಕ್ತಿ ಹೆಚ್ಚುತ್ತದೆ. ಆದರೆ ಉಪವಾಸದ ಬಗ್ಗೆ ಒಂದು ಕಿವಿಮಾತು- ಆಯುರ್ವೇದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ, 'ಉಪ' ಎಂದರೆ ಸಮೀಪ, 'ವಾಸ' ಎಂದರೆ ಇರುವುದು. 'ಉಪವಾಸ'ವೆಂದರೆ ಸದಾ ಸತ್ವ ಗುಣದೊಟ್ಟಿಗೆ ಇರುವುದು. ಕಾಮ, ಕ್ರೋಧ, ಲೋಭ, ಮದ ಮತ್ತು ಮಾತ್ಸರ್ಯಗಳನ್ನು ಕಾಯಾ-ವಾಚಾ-ಮನಸ್ಸಿನ ಮೂಲಕ ಮಾಡದೆ ಇರುವುದು. ಎಲ್ಲರ ಒಳಗೂ ಚೈತನ್ಯದ ರೂಪದಲ್ಲಿ ನೆಲೆಸಿರುವ ಆ ಪರಮಾತ್ಮನ ಇರುವಿಕೆಯನ್ನು ತನ್ನೊಳಗೆ ಅರಿತು ಅವನ ಸಮೀಪವಾಗುವ ಪ್ರಯತ್ನವೇ ಉಪವಾಸ. ಈ ಸೂಕ್ಷ್ಮತರವಾದ ಅನುಭವಕ್ಕೆ ಅತಿಯಾದ ಆಹಾರಸೇವನೆಯು ಅಡ್ಡಿಯಾಗದಿರಲಿ ಎಂಬುದು ಉದ್ದೇಶವೇ ಹೊರತು ಉಪವಾಸವೆಂದರೆ ಶರೀರದ ಶೋಷಣೆಯಂತೂ ಅಲ್ಲವೇ ಅಲ್ಲ. ಹಾಗಾಗಿ ಹಸಿವೆಯನ್ನು ಗೌರವಿಸದೆ, ಜಠರಾಗ್ನಿಗೆ ಆಹಾರದ ಮೂಲಕ ಆಹುತಿಯನ್ನು ನೀಡದೆ ಅದನ್ನು ಹಾಳುಮಾಡುವ ಪ್ರಕ್ರಿಯೆಯನ್ನು ಆಯುರ್ವೇದವು ಎಂದಿಗೂ ಉಪವಾಸ ಎಂದು ಪರಿಗಣಿಸುವುದಿಲ್ಲ. ಹಾಗಾಗಿ ಉಪವಾಸದ ಹೆಸರಿನಲ್ಲಿ ಹಸಿವೆಯನ್ನು ತಡೆಗಟ್ಟಿ, ನಂತರ ಒಮ್ಮೆಲೇ ಜೀರ್ಣಕ್ಕೆ ಜಡವಾಗುವ ಊಟವನ್ನು ಮಾಡಿದರೆ ಆರೋಗ್ಯ ಕೆಡುವುದರಲ್ಲಿ ಸಂಶಯವೇ ಇಲ್ಲ. ಹಸಿವೆಯನ್ನು ತಡೆಯುವುದು ಆಯುರ್ವೇದದ ಪ್ರಕಾರ ಸರಿಯಲ್ಲ. ಹಾಗಾಗಿ ಆಹಾರ ಕಾಲದಲ್ಲಿ ಲಘು, ಸಾತ್ತ್ವಿಕ ಆಹಾರವನ್ನು ಸೇವಿಸಿ, ದೈವದ ಉಪಾಸನೆಯಲ್ಲಿ ಇಂದ್ರಿಯ-ಮನಸ್ಸುಗಳನ್ನು ತೊಡಗಿಸಿಕೊಂಡು ಒಳ್ಳೆಯ ಚಿಂತನೆಯನ್ನು ಮಾಡಿ ಪರಮಾತ್ಮನ ಸಮೀಪವಾಗುವ ಪ್ರಯತ್ನವನ್ನು ಮಾಡುವುದೇ ಹಬ್ಬದ ದಿನ ನಾವು ಮಾಡಬೇಕಾದ ನಿಜವಾದ ಮತ್ತು ಸರಿಯಾದ ಉಪವಾಸ. ಇದು ಮಾತ್ರ ಆಯುರ್ವೇದ ಸಮ್ಮತವಾದ ಉಪವಾಸವಾಗುತ್ತದೆ.

ಋತುಚರ್ಯೆ ಮತ್ತು ನವರಾತ್ರಿ

ನವರಾತ್ರಿಯು ಸಾಮಾನ್ಯವಾಗಿ ಶರದೃತುವಿನಲ್ಲಿ ಬರುತ್ತದೆ. ಈ ಕಾಲದಲ್ಲಿ ದೇಹದಲ್ಲಿ ಕಾಲದ ಪ್ರಭಾವದಿಂದ ಪಿತ್ತದ ಪ್ರಮಾಣವು ಹೆಚ್ಚಾಗುತ್ತದೆ- ಅಜೀರ್ಣ, ಹುಳಿತೇಗು, ನಿದ್ರಾಕ್ಷಯ, ಚರ್ಮರೋಗ, ಕೋಪ, ಕಣ್ಣು-ಚರ್ಮದ ಉರಿ ಮುಂತಾದ ಸಮಸ್ಯೆಗಳು ಹೆಚ್ಚುತ್ತವೆ. ಆಯುರ್ವೇದದಲ್ಲಿ ಶರದೃತುವಿನಲ್ಲಿ ಶೀತಲ-ಲಘು ಆಹಾರಗಳನ್ನು ಸೇವಿಸಬೇಕು ಎಂದು ಹೇಳಲಾಗಿದೆ. ಬೆಳದಿಂಗಳಲ್ಲಿ ವಿಹಾರ ಉಲ್ಲಾಸದಾಯಕ. ಶ್ರೀಗಂಧ ಲೇಪನ ಬಹಳ ಹಿತ. ನವರಾತ್ರಿ ಹಬ್ಬದಲ್ಲಿ ಸೇವಿಸುವ ಹಣ್ಣು, ಪಾಯಸ, ಹಾಲು, ಬೆಲ್ಲ, ತುಪ್ಪ, ನವಧಾನ್ಯ- ಇವುಗಳು ಪಿತ್ತದ ಸಮತೋಲನಕ್ಕೆ ಸಹಕಾರಿ. ಸೂಕ್ಷ್ಮವಾಗಿ ಗಮನಿಸಿದರೆ ದೇವಿಗೆ ಅರ್ಪಿಸುವ ನೈವೇದ್ಯಗಳು seasonal balanceಗೆ ತಕ್ಕಂತಿವೆ. ಹೀಗಾಗಿ, ಹಬ್ಬದ ಆಚರಣೆಗಳಿಗೆ ಆಯುರ್ವೇದದ ಋತುಚರ್ಯೆಯೇ ಮುಖ್ಯ ಆಧಾರ ಎಂದರೆ ಅತಿಶಯೋಕ್ತಿಯಲ್ಲ!

ಭಕ್ತಿ, ಧ್ಯಾನ ಮತ್ತು ಮನಸ್ಸಿನ ಆರೋಗ್ಯ

ಆಯುರ್ವೇದದ ಪ್ರಕಾರ, ಆರೋಗ್ಯ ಎಂದರೆ ದೇಹದ ದೋಷಗಳು ಸಮತೋಲನದಲ್ಲಿರುವುದು, ಜೀರ್ಣಕ್ರಿಯೆ ಸರಿಯಾಗಿ ನಡೆಯುವುದು ಮಾತ್ರವಲ್ಲದೆ ಇಂದ್ರಿಯಗಳ ಶಿಸ್ತು ಮತ್ತು ಮನಸ್ಸಿನ ಪ್ರಸನ್ನತೆಯೂ ಸೇರಿದೆ. ನವರಾತ್ರಿ ವೇಳೆ ಮಾಡುವ ಆರತಿ, ಜಪ, ಸಂಗೀತ, ನೃತ್ಯ, ಭಜನೆ ಇವೆಲ್ಲವೂ ಭಾವನೆಗಳನ್ನು ಪರಿಶುದ್ಧಗೊಳಿಸುವ ಸಾಧನಗಳಾಗಿವೆ. ಅವು ಮನಸ್ಸಿನ ಔಷಧವೂ ಹೌದು. ಅವು ಒತ್ತಡವನ್ನು ಕಡಿಮೆ ಮಾಡಿ, ಮಿದುಳಿನಲ್ಲಿ ಶಾಂತಿಯ ತರಂಗಗಳನ್ನು ಹೆಚ್ಚಿಸುತ್ತವೆ. ಧ್ಯಾನ ಮಾಡುವಾಗ ಉಸಿರಾಟದ ನಿಯಂತ್ರಣದಿಂದ ಮನಸ್ಸು ಏಕಾಗ್ರವಾಗುತ್ತದೆ, ತನ್ಮೂಲಕ ಇಂದ್ರಿಯಗಳ ಚಂಚಲತೆ ಕುಂದುತ್ತದೆ.

ಇಂಥ ಮಾನಸಿಕ ಸ್ಥಿತಿಯು ಆಯುರ್ವೇದದಲ್ಲಿ 'ಸಾತ್ವಿಕ ಸ್ಥಿತಿ' ಎಂದು ಕರೆಯಲ್ಪಡುತ್ತದೆ. ಹೀಗಾಗಿ ನವರಾತ್ರಿ ಹಬ್ಬವು ಭಕ್ತಿಯ ಮೂಲಕ ಮಾನಸಿಕ ಸ್ವಾಸ್ಥ್ಯವನ್ನು ಬಲಪಡಿಸುತ್ತದೆ.

ನವರಾತ್ರಿಯಿಂದ ಕಲಿಯಬೇಕಾದ ಜೀವನಶೈಲಿ

ನವರಾತ್ರಿಯ ಆಚರಣೆಗಳು ನಮಗೆ ಅನೇಕ ಜೀವನಪಾಠಗಳನ್ನು ನೀಡುತ್ತವೆ.

1. **ಆಹಾರದಲ್ಲಿ ಮಿತಿ:** ಹಿತಮಿತವಾದ 'ಉಪವಾಸ'ವು ಅತಿಸೇವನದಿಂದ ದೂರವಿರಲು ಕಲಿಸುತ್ತದೆ.
2. **ಶಿಸ್ತು:** ಪ್ರತಿದಿನ ದೇವಿಯ ಪೂಜೆ, ಜಪ, ವ್ರತ ಆಚರಣೆಗಳಿಂದ ಇಂದ್ರಿಯಗಳ ಸಂಯಮ.
3. **ಸಾತ್ತ್ವಿಕ ಚೋದನ:** ಲಘು ಆಹಾರ, ಧ್ಯಾನ, ಭಕ್ತಿ-ಮಾನಸಿಕ ಶುದ್ಧಿಯನ್ನೆರೆಯುತ್ತವೆ.
4. **ಸಮತೋಲನ:** ದೇವಿಯ ನವರೂಪಗಳಂತೆ, ಜೀವನದಲ್ಲಿಯೂ ದೈಹಿಕ-ಮಾನಸಿಕ-ಆಧ್ಯಾತ್ಮಿಕ ಸಮತೋಲನ ಮುಖ್ಯ ಎಂಬ ಸತ್ತ್ವ ಸಂದೇಶ.

ಆಯುರ್ವೇದದಲ್ಲಿ ಹೇಳುವಂತೆ, 'ಸಮದೋಷಃ ಸಮಾಗ್ನಿಶ್ಚ ಸಮಧಾತು ಮಲಕ್ರಿಯಾಃ ಪ್ರಸನ್ನಾತ್ಮೇಂದ್ರಿಯಮನಃ ಸ್ವಸ್ಥ ಇತ್ಯಭಿಧೀಯತೆ'- ಅಂದರೆ ದೇಹದ ದೋಷಗಳು ಸಮತೋಲನದಲ್ಲಿದ್ದು, ಜೀರ್ಣಾಗ್ನಿ ಸರಿಯಾಗಿ ಕೆಲಸ ಮಾಡಿದಾಗ, ಧಾತು-ಮಲಗಳು ಸಮನಾಗಿ ಕಾರ್ಯನಿರ್ವಹಿಸುತ್ತವೆ. ಇದರ ಪರಿಣಾಮವಾಗಿ ಶರೀರ-ಇಂದ್ರಿಯ-ಮನಗಳು ಪ್ರಸನ್ನವಾಗುತ್ತವೆ. ನವರಾತ್ರಿಯ ಆಚರಣೆಗಳು ಈ ಅನುಭವವನ್ನು ಜೀವನದಲ್ಲಿ ಪಡೆಯಲು ಮಾರ್ಗದರ್ಶಕವಾಗಿವೆ.

ನವರಾತ್ರಿ ಹಬ್ಬವು ಕೇವಲ ದೇವಿಯ ಆರಾಧನೆಗೆ ಸೀಮಿತವಲ್ಲ, ಅದು ದೇಹ, ಮನಸ್ಸು ಮತ್ತು ಆತ್ಮಗಳನ್ನು ಸಮತ್ವದೆಡೆಗೆ ಕರೆದೊಯ್ಯುವ ಸಮಗ್ರ ಹಬ್ಬ. ದೇವಿಯ ನವರೂಪಗಳು ನಮಗೆ ಸ್ಥಿರತೆ, ಶಿಸ್ತು, ಶಾಂತಿ, ಪೋಷಣೆ, ಧೈರ್ಯ, ಶುದ್ಧತೆ, ಸಂಪೂರ್ಣತೆಯನ್ನು ಧಾರೆ ಎರೆಯುತ್ತವೆ- ಇವೆಲ್ಲವೂ ಸ್ವಾಸ್ಥ್ಯದ ಅನುಭವಕ್ಕೆ ಅವಶ್ಯಕವಾದ ಗುಣಗಳು. ಹೀಗಾಗಿ, ನವರಾತ್ರಿ ಆಚರಿಸುವಾಗ ಕೇವಲ ದೇವಿಯ ಪೂಜೆಗಷ್ಟೇ ಅದು ಸೀಮಿತವಾಗದೆ ನಮ್ಮ ದೇಹ ಮತ್ತು ಮನಸ್ಸಿನ ಸಮತೋಲನದ ಪ್ರಯತ್ನವೂ ಆಗಲಿ. ನವರಾತ್ರಿಯ ಶಕ್ತಿಯು ಆಯುರ್ವೇದದ ಯುಕ್ತಿಯಂತೆ ನಮ್ಮಲ್ಲಿ ಸ್ವಾಸ್ಥ್ಯ, ಸಾತ್ತ್ವಿಕತೆ, ಶುದ್ಧತೆ ಮತ್ತು ಸಮತೋಲನವನ್ನು ಸಂಪನ್ನಗೊಳಿಸಲಿ!

ಯಾ ದೇವೀ ಸರ್ವಭೂತೇಷು ಶಾಂತಿ ರೂಪೇಣ ಸಂಸ್ಥಿತಾ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ॥

ದಾರಿದೀಪ
ಪ್ರೊ. ಅಚ್ಯುತ ಸಮಂತ

ಶಿಕ್ಷಣ ಮತ್ತು ಸಂಸ್ಕಾರ: ನಾಣ್ಯದ ಎರಡು ಮುಖಗಳು

ನಮ್ಮ ಅನನ್ಯವಾದ ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಣ (ಶಿಕ್ಷಾ) ಮತ್ತು ಸಂಸ್ಕಾರ ಎಂಬ ಪದಗಳನ್ನು ನಾವು ಪದೇ ಪದೇ ಬಳಸುತ್ತೇವೆ. ಈ ಅವಳಿ ಪದಗಳು ಒಂದೇ ನಾಣ್ಯದ ಎರಡು ಮುಖಗಳಂತೆ, ಎರಡು ಎಳೆಗಳು ಸೇರಿ ನೇಯ್ದ ಒಂದೇ ಬಟ್ಟೆಯಂತೆ ಸದಾ ಒಟ್ಟಿಗೆ ಇರುತ್ತವೆ. 'ಶಿಕ್ಷಾ'ವನ್ನು ಸಾಮಾನ್ಯವಾಗಿ ಶಿಕ್ಷಣ ಅಥವಾ ಕಲಿಕೆ ಎಂದು ಪರಿಭಾವಿಸಲಾಗುತ್ತದೆ. ಸಂಸ್ಕಾರವು ಆಂತರಿಕವಾದ ರಚನೆ, ನೈತಿಕ ಪ್ರವೃತ್ತಿ, ನಮ್ರತೆ ಮತ್ತು ಔದಾರ್ಯಗಳನ್ನು ಒಳಗೊಂಡಿರುತ್ತದೆ. ಇದು ಇರುವ ಜ್ಞಾನವನ್ನು ಹೇಗೆ ಬಳಸುತ್ತದೆ ಎಂಬುದನ್ನು ನಿರೂಪಿಸುತ್ತದೆ. ಒಂದನ್ನು ಮತ್ತೊಂದರಿಂದ ನಾವು ಬೇರ್ಪಡಿಸಿದಾಗ, ಚಾಣಾಕ್ಷವಾದ ಸಿನಿಕತೆಯ ಜನರು ಅಥವಾ ಸದುದ್ದೇಶದ ಆದರ್ಶವಾದಿಗಳು ಹುಟ್ಟುತ್ತಾರೆ. ನಮ್ಮ ಶಿಕ್ಷಣದ ನೈಜಗುರಿಯು ಜ್ಞಾನದ ಆತ್ಮಸಾಕ್ಷಿಯೊಂದಿಗೆ ಬದುಕುವ ಜನರನ್ನು ಬೆಳೆಸುವುದೇ ಆಗಿದೆ.

ಉದಾಹರಣೆಗೆ ನಮ್ಮ ಪುರಾಣದ ಕಥೆಗಳನ್ನೇ ನೋಡಿ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ನೀಡಿದ ಸೂಚನೆಯು ಕಾರ್ಯತಂತ್ರದ ಪಾಠವಾಗಿದೆ. ಇದು ನಿರ್ಲಿಪ್ತತೆ ಮತ್ತು ನಮ್ರತೆಯಿಂದ ನಿರ್ವಹಿಸಲ್ಪಟ್ಟ ಕರ್ತವ್ಯದ ಬೋಧನೆಯಾಗಿದೆ. ಇನ್ನು ಮಹಾಭಾರತವನ್ನು ನೋಡುವುದಾದರೆ ಇದು ತನ್ನ ವಿಶಾಲ ದೃಷ್ಟಿಕೋನದಲ್ಲಿ, ಬಿಲ್ಲುಗಾರಿಕೆಯಲ್ಲಿ ಪಾಂಡಿತ್ಯವನ್ನು ಪಾತ್ರದ ಸ್ಥಿರತೆಯೊಂದಿಗೆ ಹೊಗಳುತ್ತದೆ. ಪಂಚತಂತ್ರದಲ್ಲಿನ ಕಥೆಗಳಲ್ಲಿ ನೈತಿಕ ಮೌಲ್ಯಗಳೇ ತುಂಬಿರುತ್ತವೆ. ಈ ಎಲ್ಲಾ ಉದಾಹರಣೆಗಳು, ನಮ್ಮ ವಿಶಿಷ್ಟವಾದ ಭಾರತೀಯ ಚಿಂತನೆಯು ಯಾವಾಗಲೂ ಶಿಕ್ಷಣದ ಪಾತ್ರವು ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಒಳಗೊಂಡಿದೆ ಎಂಬುದನ್ನು ನಮಗೆ ನೆನಪಿಸುತ್ತದೆ. ಅರಿವು ಮೂಡಿಸುವ ಕೌಶಲಗಳು (ಹೆಚ್ಚಾಗಿ ತರಗತಿಗಳಲ್ಲಿ ಕಲಿಸುವುದು) ಮತ್ತು ಸಾಮಾಜಿಕ-ಭಾವನಾತ್ಮಕ ಕಲಿಕೆ ನಡುವೆ ಹೊಂದಾಣಿಕೆ ಇರಬೇಕು. ಆಗ ಮಾತ್ರ ಒಳ್ಳೆಯ ಫಲಿತಾಂಶಗಳು ಸಿಗಲು ಸಾಧ್ಯ. ದಯೆ ಮತ್ತು ಶಿಸ್ತು ಇರುವಲ್ಲಿ ಮಿದುಳು ಚೆನ್ನಾಗಿ ಬೆಳೆಯುತ್ತದೆ.

ನಾವೆಲ್ಲ ನಮ್ಮ ಜೀವನದಲ್ಲಿ ಬೆಳೆಸಿಕೊಳ್ಳಬೇಕಾದ ಒಳ್ಳೆಯ ಗುಣಗಳನ್ನು ಹೆಸರಿಸಿದರೆ, ಒಂದು ಸಮೂಹ (Cluster) ಹೊರಹೊಮ್ಮುತ್ತವೆ. ಅವುಗಳೆಂದರೆ ಮಾನವೀಯ ಕಾಳಜಿ, ಪ್ರಾಮಾಣಿಕತೆ, ವಾಪಸು ಮಾಡುವ ಅಭ್ಯಾಸ, ಹೊಸ ಧೈರ್ಯ, ಬೇರೂರುವಿಕೆ, ನಮ್ರತೆ, ಕೃತಜ್ಞತೆ ಮತ್ತು ಅರ್ಥಕ್ಕಾಗಿ ಅಂತ್ಯವಿಲ್ಲದ ಅನ್ವೇಷಣೆ. ಈ ಎಲ್ಲದರ ಬಗ್ಗೆಯೂ ನಾವು ಸಂಕ್ಷಿಪ್ತವಾಗಿ ಒಮ್ಮೆ ಯೋಚಿಸೋಣ. ಮಾನವೀಯತೆಯು ಶಿಕ್ಷಣವನ್ನು ಬಾಹ್ಯವಾಗಿ ಪರಿವರ್ತಿಸುತ್ತದೆ, ಇದು ಕಲಿಕೆಯನ್ನು ಜೀವನದ ಸುಧಾರಣೆಗೆ ಸಂಪನ್ಮೂಲವನ್ನಾಗಿ ಮಾಡುತ್ತದೆ. ಪ್ರಾಮಾಣಿಕತೆಯು ಬುದ್ಧಿಶಕ್ತಿಯನ್ನು ಕುಶಲತೆಯಿಂದ ತಡೆಯುತ್ತದೆ. ಹಿಂದಿರುಗಿಸುವುದು ಸಾಧನೆಯನ್ನು ಸಾಮಾಜಿಕ ಉನ್ನತಿಯಾಗಿ ಪರಿವರ್ತಿಸುತ್ತದೆ. ಸಂಪ್ರದಾಯಗಳು ನಿಶ್ಚಲವಾಗದಂತೆ, ಅವು ಹೊಂದಿಕೊಳ್ಳುವಂತೆ, ಹಳೆಯ ಉದ್ದೇಶಗಳನ್ನು ಪೂರೈಸಲು ಹೊಸ ಸಾಧನಗಳನ್ನು ಬಳಸುವುದನ್ನು ನಾವೀನ್ಯವು ಖಚಿತಪಡಿಸುತ್ತದೆ. ನಮ್ರತೆಯು ವಿಜಯೋತ್ಸವವನ್ನು ತಡೆಯುತ್ತದೆ; ಕೃತಜ್ಞತೆಯು ಅರ್ಹತೆಯನ್ನು ತಡೆಯುತ್ತದೆ.

ಇದರಿಂದಲೇ ಸಂಸ್ಥೆಗಳು ಜೀವನಮೌಲ್ಯಗಳಿಗೆ ಪ್ರಯೋಗಾಲಯಗಳಾಗಬಹುದು. ನನ್ನ ಪ್ರಕಾರ, ನಮ್ಮ 'ಕಳಿಂಗ ಕೈಗಾರಿಕಾ ತಂತ್ರಜ್ಞಾನ ಸಂಸ್ಥೆ'ಯು (ಕೆಐಐಟಿ) ಕಾರ್ಯರೂಪಕ್ಕೆ ಬರುವ ನೀಲನಕ್ಷೆಯನ್ನು ನೀಡುತ್ತದೆ. ಸಾಮಾಜಿಕ ಪರಿವರ್ತನೆ ಆಗಬೇಕಾದರೆ ಗುಣಮಟ್ಟದ ಶಿಕ್ಷಣ ನೀಡುವ ಪ್ರದೇಶವು ಅತ್ಯಂತ ಶಕ್ತಿಶಾಲಿಯಾದ ಸಾಧನವಾಗಿದೆ. ಉತ್ತಮ ಸ್ಥಳದಲ್ಲಿ ಉತ್ತಮ ಕಲಿಕೆ ಇರುತ್ತದೆ. ಈ ಒಂದು ದೃಢನಿಶ್ಚಯ ಮತ್ತು ಸದುದ್ದೇಶದಿಂದಲೇ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಕೆಐಐಟಿಯು ಕಠಿಣ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಳವಾದ ಸಾಮಾಜಿಕ ಸಂಪರ್ಕದ ಅರಿವಿನ ಮೂಲಕ ಯೋಜಿಸುತ್ತದೆ. ಕೆಐಐಟಿ ಮತ್ತು ಅದರ ಸಹ ಸಂಸ್ಥೆಯಾದ 'ಕಳಿಂಗ ಸಮಾಜ ವಿಜ್ಞಾನ ಸಂಸ್ಥೆ'ಯ (ಕೆಐಎಸ್‌ಎಸ್) ಉಸಿರೇ ತತ್ವಶಾಸ್ತ್ರ. ಬುಡಕಟ್ಟು ಮಕ್ಕಳಿಗಾಗಿ ವಿಶ್ವದ ಅತಿದೊಡ್ಡ ಸಂಪೂರ್ಣ ಉಚಿತ ವಸತಿ ಸಂಸ್ಥೆಯಾಗಿರುವ ಕೆಐಎಸ್‌ಎಸ್, ಶಿಕ್ಷಾ ಮತ್ತು ಸಂಸ್ಕಾರವನ್ನು ಅದರ ಶುದ್ಧರೂಪದಲ್ಲಿ ಸಮರ್ಪಕವಾಗಿ ಸಾಕಾರಗೊಳಿಸುತ್ತದೆ. ಇಲ್ಲಿ 80,000ಕ್ಕೂ ಹೆಚ್ಚು ಸ್ಥಳೀಯ ವಿದ್ಯಾರ್ಥಿಗಳಿಗೆ ಶಿಕ್ಷಣ, ಪೋಷಣೆ, ಆರೋಗ್ಯ ರಕ್ಷಣೆ ಮತ್ತು ಸಾಂಸ್ಕೃತಿಕ ಸಂರಕ್ಷಣೆಯನ್ನು ಒದಗಿಸಲಾಗುತ್ತಿದೆ. ಇಲ್ಲಿ, ಸಾಧನ ಮತ್ತು ಗುರಿಯನ್ನು ಬೇರ್ಪಡಿಸಲಾಗದು.

ಶೈಕ್ಷಣಿಕ ಕ್ಷೇತ್ರಗಳ ಎಲ್ಲೆಯನ್ನು ಮೀರಿ, ಕೆಐಐಟಿಯು ವಿದ್ಯಾರ್ಥಿ ಸಾಮಾಜಿಕ ಸಂಸ್ಕೃತಿಯನ್ನು ಪೋಷಿಸುತ್ತದೆ. ಇಲ್ಲಿ ವೈವಿಧ್ಯಮಯ ಕ್ಲಬ್‌ಗಳು, ಸಾಂಸ್ಕೃತಿಕ ಸಂಘಗಳು ಮತ್ತು ನಾವೀನ್ಯ ಕೋಶಗಳಿವೆ. ಇವು ತಂಡದ ಕೆಲಸ, ಸೃಜನಶೀಲತೆ ಮತ್ತು ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಬೆಳೆಸುತ್ತವೆ. ಕೆಐಐಟಿ ಮತ್ತು ಕೆಐಎಸ್‌ಎಸ್‌ನಲ್ಲಿರುವ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ (ಎನ್‌ಎಸ್‌ಎಸ್) ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಇಲ್ಲಿ ಸ್ವಯಂಸೇವಕರಿಗೆ ಗ್ರಾಮೀಣ ಅಭಿವೃದ್ಧಿ, ಆರೋಗ್ಯ ಜಾಗೃತಿ ಅಭಿಯಾನಗಳು, ಪರಿಸರ ಅಭಿಯಾನಗಳು ಮತ್ತು ವಿಪತ್ತು ಪರಿಹಾರಕ್ಕಾಗಿ ನೀಡುವ ಕಲೆಯ ಕಾರ್ಯಾಗಾರಗಳನ್ನು ನಡೆಸಲಾಗುತ್ತದೆ. ಕನ್ಯಾ ಕಿರಣ್ ಮತ್ತು ಕಳಿಂಗ ಫೆಲೋಶಿಪ್ ಮೂಲಕ ನೆರವು ನೀಡಲಾಗುತ್ತದೆ. ಅವು ಜೀವಂತ ಪ್ರಯೋಗಾಲಯಗಳಾಗಿದ್ದು, ಅಲ್ಲಿ ಚಟುವಟಿಕೆಯ ಮೂಲಕವೇ ಸಂಸ್ಕಾರವನ್ನು ಕಲಿಸಲಾಗುತ್ತದೆ.

ಸಂಸ್ಥಾಪಕರು ಹೊಂದಿರುವ ಉದಾತ್ತ ಮೌಲ್ಯಗಳೇ ಒಂದು ಅಮೂಲ್ಯವಾದ ಸಂಸ್ಥೆಯ ಡಿಎನ್‌ಎಯನ್ನು ರೂಪಿಸುತ್ತವೆ. ನನ್ನ ಸ್ವಂತ ನಂಬಿಕೆಗಳು, ಪ್ರತಿಯೊಂದು ಜೀವನದ ಪಾವಿತ್ರ್ಯ ಮತ್ತು ಬೇರೆಯವರಿಗೆ ಕೊಡುವ ಕರ್ತವ್ಯವು ವಿದ್ಯಾರ್ಥಿಗಳನ್ನು ಪರಂಪರೆಯಲ್ಲಿ ಬೇರೂರಿಸುತ್ತದೆ ಮತ್ತು ಭವಿಷ್ಯಕ್ಕಾಗಿ ಅವರನ್ನು ಸಿದ್ಧಪಡಿಸುತ್ತದೆ. ವೈಯಕ್ತಿಕ ಸಂಪತ್ತು ಅಥವಾ ಆಸ್ತಿಯನ್ನೇ ಸಂಪಾದಿಸದ ನನ್ನ ಸರಳ ಜೀವನವೇ ವಿದ್ಯಾರ್ಥಿಗಳಿಗೆ ಸಂದೇಶ ನೀಡುತ್ತದೆ. ನಮ್ಮ ನೈತಿಕತೆಯನ್ನು ಕಾಪಾಡಿಕೊಂಡು ನಾವು ಹೊಸತನವನ್ನು ಪಡೆಯಬಹುದು, ಅಪಾಯವನ್ನು ಎದುರಿಸಬಹುದು, ಕನಸನ್ನು ಕಾಣಬಹುದು ಮತ್ತು ದೊಡ್ಡದನ್ನು ಸಾಧಿಸಬಹುದು.

ತಮ್ಮೊಂದಿಗೆ, ಇತರರೊಂದಿಗೆ ಮತ್ತು ತಮ್ಮ ಭಾವನೆಗಳೊಂದಿಗೆ ಹೊಂದಿಕೊಳ್ಳಲು ಕಲಿಯುವವರು ಯೌವನದಲ್ಲಿ ಸದಾ ಜೀವನದಲ್ಲಿ ಮುಂದೆ ಹೋಗುತ್ತಾರೆ ಹಾಗೂ ಯಶಸ್ಸು ಸಾಧಿಸುತ್ತಾರೆ. ಇದು ಹೊಂದಿಕೊಳ್ಳುವಿಕೆ ಮತ್ತು ಭಾವನಾತ್ಮಕ ಬುದ್ಧಿವಂತಿಕೆಯ ಪ್ರತಿಬಿಂಬ. ಶಿಸ್ತು ಸ್ವಯಂ ಪಾಂಡಿತ್ಯವನ್ನು ಪ್ರತಿನಿಧಿಸುತ್ತದೆ. ಸಕಾರಾತ್ಮಕ ಮನಸ್ಥಿತಿಯು ಭವಿಷ್ಯವನ್ನು ರೂಪಿಸುತ್ತದೆ ಮತ್ತು ಒಳಗಿನಿಂದ ಹೊರಹೊಮ್ಮುವ ನೈಸರ್ಗಿಕ ಹೊಳಪನ್ನು ತರುತ್ತದೆ, ಅಂತರ್ಗತವಾದ ಆಶಾವಾದವನ್ನು ಶಕ್ತಿಯಾಗಿ ತೋರಿಸುತ್ತದೆ. ಪ್ರೀತಿಪಾತ್ರರಿಗೆ ಜೀವಮಾನದ ನೋವನ್ನು ಉಂಟುಮಾಡುವ ತಾತ್ಕಾಲಿಕ ಸಂತೋಷಗಳನ್ನು ವಿರೋಧಿಸುವುದು ಜವಾಬ್ದಾರಿ ಮತ್ತು ದೂರದೃಷ್ಟಿಯನ್ನು ಸಾಕಾರಗೊಳಿಸುತ್ತದೆ. ದೃಷ್ಟಿಕೋನವು ಎತ್ತರವನ್ನು ನಿರ್ಧರಿಸುತ್ತದೆ, ಮನೋಭಾವವನ್ನು ಯಶಸ್ಸಿನ ನಿರ್ಣಾಯಕ ಚಾಲಕಶಕ್ತಿಯನ್ನಾಗಿ ಮಾಡುತ್ತದೆ. ನಿಜವಾದ ಬೆಳವಣಿಗೆಯನ್ನು ಪ್ರತ್ಯೇಕವಾಗಿ ಅಲ್ಲ, ಇತರರೊಂದಿಗೆ ಬೆಳೆಯುವ ಮೂಲಕ, ಎಲ್ಲರನ್ನೂ ಒಟ್ಟಿಗೆ ಮೇಲಕ್ಕೆತ್ತುವ ಅಂತರ್ಗತ ಪ್ರಗತಿಯನ್ನು ಅಳವಡಿಸಿಕೊಳ್ಳುವ ಮೂಲಕ ಸಾಧಿಸಲಾಗುತ್ತದೆ. ಅವು ಕೆಐಐಟಿಯ ಜೀವಂತ ತತ್ವಶಾಸ್ತ್ರ. ಇಲ್ಲಿ, ವಿದ್ಯಾರ್ಥಿಗಳು ಕೇವಲ ಶಿಕ್ಷಣವನ್ನು ಪಡೆಯುವುದಿಲ್ಲ; ಅವರು ಸಂಸ್ಕಾರದೊಂದಿಗೆ ಬದುಕುತ್ತಾರೆ, ನಾನು ಹಾಕಿದ ಉದಾಹರಣೆಯ ಮೂಲಕ ಮೌಲ್ಯಗಳನ್ನು ಹೀರಿಕೊಳ್ಳುತ್ತಾರೆ.

ಸಂಸ್ಕಾರದೊಂದಿಗೆ ಶಿಕ್ಷಣವನ್ನು ಮತ್ತೆ ಒಂದುಗೂಡಿಸಿದರೆ ನಾವು ಸಮರ್ಥ ಮನಸ್ಸುಗಳನ್ನು ಮಾತ್ರವಲ್ಲದೆ ಆತ್ಮಸಾಕ್ಷಿಯ ಹೃದಯಗಳನ್ನು ಕಾಣಬಹುದು. ಭಾರತದಲ್ಲಿ ಶಿಕ್ಷಣವು ಯಾವಾಗಲೂ ಕೌಶಲ ತರಬೇತಿಗಿಂತ ಹೆಚ್ಚಿನದಾಗಿದೆ; ಶಿಕ್ಷಣವನ್ನು ಸಂಸ್ಕಾರದೊಂದಿಗೆ ಒಂದುಗೂಡಿಸುವುದು ಪವಿತ್ರ ಕರ್ತವ್ಯ ಸಹ ಆಗಿದೆ. ಮೌಲ್ಯಗಳಿಲ್ಲದ ಜ್ಞಾನವು ಬೇರುರಹಿತ ಸಸಿಯಂತೆ. ಜ್ಞಾನವಿಲ್ಲದ ಮೌಲ್ಯಗಳು ಶಕ್ತಿಹೀನವಾಗಿವೆ. ನಮ್ಮ ಯುವಕರು ಆಧುನಿಕ ಸಾಮರ್ಥ್ಯದಿಂದ ಸಜ್ಜಾದಾಗ ಮತ್ತು ನಮ್ಮ ನಾಗರಿಕತೆಯ ಶಾಶ್ವತ ಆದರ್ಶಗಳಲ್ಲಿ ಲಂಗರು ಹಾಕಿದಾಗ, ಅವರು ಆತ್ಮನಿರ್ಭರ ಮತ್ತು ವಿಶ್ವಗುರು ಭಾರತದ ನಿಜವಾದ ವಾಸ್ತುಶಿಲ್ಪಿಗಳಾಗುತ್ತಾರೆ. ಇದು ಕೆಐಐಟಿ ಮತ್ತು ಕೆಐಎಸ್‌ಎಸ್‌ನ ಪ್ರತಿದಿನದ ಧ್ಯೇಯವಾಗಿದೆ. ಇದು ತಮ್ಮ ವೃತ್ತಿಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸುವ, ತಮ್ಮ ಸಮುದಾಯಗಳಿಗೆ ಸೇವೆ ಸಲ್ಲಿಸುವ ಮತ್ತು ನಮ್ಮ ರಾಷ್ಟ್ರದ ಕಾಲಾತೀತ ಸ್ಫೂರ್ತಿಯನ್ನು ಮುಂದಕ್ಕೆ ಸಾಗಿಸುವ ಪದವೀಧರರನ್ನು ಸಜ್ಜುಗೊಳಿಸುತ್ತದೆ.

(ಲೇಖಕರು: ಸಂಸ್ಥಾಪಕರು ಆರ್ಟ್ ಆಫ್ ಗಿವಿಂಗ್ ಮತ್ತು ಮಾಜಿ ಸಂಸದರು)

ಆರ್ಥಿಕ ಉತ್ಪಾದಕತೆಯನ್ನು ಹೆಚ್ಚಿಸುವ ಆರೋಗ್ಯ ಯೋಜನೆಗಳು

ಆರೋಗ್ಯ ಭಾಗ್ಯ
ಡಾ. ದೇವಿ ಪ್ರಸಾದ್ ಶೆಟ್ಟಿ
vveditoped@gmail.com

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತದ ಆರೋಗ್ಯ ನೀತಿಯು, ಕೇವಲ ಕಲ್ಯಾಣ ಎಂಬ ಸಂಕುಚಿತ ದೃಷ್ಟಿಕೋನವನ್ನು ಮೀರಿ ಬಹಳಷ್ಟು ಮುಂದುವರಿದಿದೆ. ಇದು 2047ರ ವೇಳೆಗೆ 'ವಿಕಸಿತ ಭಾರತ'ವನ್ನು ನಿರ್ಮಿಸುವ ಕಾರ್ಯತಂತ್ರದ ಕೇಂದ್ರಭಾಗದಲ್ಲಿ ನಿಂತಿದೆ. ಆರೋಗ್ಯವನ್ನು ಕೇವಲ ಒಂದು ವೆಚ್ಚವೆಂದು ಪರಿಗಣಿಸದೆ, ಅದೊಂದು ಹೂಡಿಕೆ ಎಂದು ಭಾವಿಸುವ ಮೂಲಕ, ಆರೋಗ್ಯ ಕ್ಷೇತ್ರದಲ್ಲಿನ ಉತ್ತಮ ಆಡಳಿತವು ಒಂದು ಸುಸ್ಥಿರ ಆರ್ಥಿಕ ನೀತಿಯೂ ಹೌದು ಎಂಬುದನ್ನು ಈ ಉಪಕ್ರಮಗಳು ಸಾಬೀತುಪಡಿಸಿವೆ. ಇವು ರೋಗದ ಹೊರೆಯನ್ನು ಕಡಿಮೆ ಮಾಡುತ್ತವೆ, ಕುಟುಂಬಗಳ ಉಳಿತಾಯವನ್ನು ರಕ್ಷಿಸುತ್ತವೆ ಮತ್ತು ಸುಸ್ಥಿರ ಬೆಳವಣಿಗೆಯ ನಿಜವಾದ ಚಾಲಕಶಕ್ತಿಯಾದ ಮಾನವ ಬಂಡವಾಳಕ್ಕೆ ಶಕ್ತಿ ನೀಡುತ್ತವೆ.

ತಡೆಗಟ್ಟುವ ಆಡಳಿತದ ಮೂಲಗಳು: ಪ್ರಧಾನಮಂತ್ರಿ ಮೋದಿಯವರಿಗೆ ಆರೋಗ್ಯ ವಲಯದ ಬಗೆಗಿನ ಆಸಕ್ತಿಯು, ಅವರು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ಕಾಲದಿಂದಲೇ ಇದೆ. ಆಗ ಅವರು ಸಕಾಲಿಕ ವೈದ್ಯಕೀಯ ನೆರವು ಮತ್ತು ಸುಲಭ ವಾಗಿ ಲಭ್ಯವಾಗುವ ಸೇವೆಗಳಿಗೆ ಒತ್ತು ನೀಡಿದರು. '108' ತುರ್ತು ಆಂಬ್ಯುಲೆನ್ಸ್ ಸೇವೆಯು ಗ್ರಾಮೀಣ ಮತ್ತು ನಗರ ಸಮುದಾಯಗಳಿಗೆ ತ್ವರಿತ ವೈದ್ಯಕೀಯ ನೆರವನ್ನು ತಲುಪಿಸಿ, ಮರಣ ಪ್ರಮಾಣವನ್ನು ಮತ್ತು ಅನಾರೋಗ್ಯದಿಂದಾಗುವ ಗೈರುಹಾಜರಿಯನ್ನು ಕಡಿಮೆ ಮಾಡಿತು. ಅದೇ ಸಮಯದಲ್ಲಿ, ಬುಡಕಟ್ಟು ಮತ್ತು ಗ್ರಾಮೀಣ ಮಕ್ಕಳಿಗಾಗಿ ಜಾರಿಗೆ ತಂದ 'ಪೋಷಣ್' (POSHAN) ಪೌಷ್ಟಿಕಾಂಶ ಕಾರ್ಯಕ್ರಮಗಳು, ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ನಿವಾರಿಸಿ, ಉತ್ತಮ ಕಲಿಕಾ ಫಲಿತಾಂಶಗಳಿಗೆ ಅಡಿಪಾಯ ಹಾಕಿದವು. ಈ ಆರಂಭಿಕ ಪ್ರಯೋಗಗಳು ಮುಂದೆ ರಾಷ್ಟ್ರೀಯ ಸುಧಾರಣೆಗಳಿಗೆ ರೂಪು ನೀಡಿದ ಒಂದು ಪ್ರಮುಖ ತತ್ವವನ್ನು ಬಹಿರಂಗಪಡಿಸಿದವು: ಅದೆಂದರೆ, ರೋಗ ಬರುವುದಕ್ಕೂ ಮುನ್ನ ಅದನ್ನು ತಡೆಗಟ್ಟಲು ಮಾಡುವ ಹೂಡಿಕೆಯು, ದೇಶದ ಉತ್ಪಾದಕತೆ ಮತ್ತು ಸಮೃದ್ಧಿಯಲ್ಲಿ ನಿಜವಾದ ಲಾಭಾಂಶ ವನ್ನು ನೀಡುತ್ತದೆ.

ರಾಷ್ಟ್ರಮಟ್ಟದಲ್ಲಿ ಯೋಜನೆಗಳ ವಿಸ್ತರಣೆ: ರಾಷ್ಟ್ರೀಯ ನಾಯಕತ್ವವನ್ನು ವಹಿಸಿಕೊಂಡ ನಂತರ ಮೋದಿಯವರು ತಮ್ಮ ಈ ಹಿಂದಿನ ಯಶಸ್ವಿ ಅನುಭವಗಳ ಆಧಾರದ ಮೇಲೆ ರಾಷ್ಟ್ರವ್ಯಾಪಿಯಾಗಿ ಬಹು ದೊಡ್ಡ ಯೋಜನೆಗಳನ್ನು ಜಾರಿಗೆ ತಂದರು. 2018ರಲ್ಲಿ ಪ್ರಾರಂಭವಾದ 'ಆಯುಷ್ಮಾನ್ ಭಾರತ್' ಯೋಜನೆಯು, ಆರ್ಥಿಕವಾಗಿ ದುರ್ಬಲರಾಗಿರುವ 55 ಕೋಟಿಗೂ ಹೆಚ್ಚು ನಾಗರಿಕರನ್ನು ಒಳಗೊಂಡು, ವಿಶ್ವದ ಅತಿದೊಡ್ಡ ಸಾರ್ವಜನಿಕ-ಬೆಂಬಲಿತ ಆರೋಗ್ಯ ವಿಮಾ ಯೋಜನೆಯಾಗಿ ಹೊರಹೊಮ್ಮಿದೆ. ಭಾರಿ ವೈದ್ಯಕೀಯ ವೆಚ್ಚಗಳ ಹೊರೆಯಿಂದ ಕುಟುಂಬಗಳನ್ನು ರಕ್ಷಿಸುವ ಮೂಲಕ, ಲಕ್ಷಾಂತರ ಜನರು ಅನಾರೋಗ್ಯದ ನಂತರ ಮತ್ತೆ ಬಡತನಕ್ಕೆ ಜಾರದಂತೆ ಇದು ತಡೆದಿದೆ. ಈ ಯೋಜನೆಯು ರೋಗಿಗಳನ್ನು ನೋಂದಾಯಿತ ಆಸ್ಪತ್ರೆಗಳತ್ತ ಕಳುಹಿಸುವುದಲ್ಲದೆ, ದ್ವಿತೀಯ ಮತ್ತು ತೃತೀಯ ಹಂತದ ಆರೈಕೆಯಲ್ಲಿ ಗುಣಮಟ್ಟವನ್ನು ಸುಧಾರಿಸಲು ಪ್ರೋತ್ಸಾಹಿಸುತ್ತದೆ ಮತ್ತು ಸ್ಪರ್ಧಾತ್ಮಕ ಪರಿಸರ ವ್ಯವಸ್ಥೆಯನ್ನು ಪೋಷಿಸುತ್ತದೆ.

2018ರಲ್ಲಿಯೇ ಉದ್ಘಾಟನೆಗೊಂಡ 'ಪೋಷಣ್ ಅಭಿಯಾನ'ವು ಗರ್ಭಿಣಿಯರು, ಬಾಣಂತಿಯರು ಮತ್ತು ಚಿಕ್ಕ ಮಕ್ಕಳಲ್ಲಿನ ಅಪೌಷ್ಟಿಕತೆಯನ್ನು ನಿವಾರಿಸಲು ಶ್ರಮಿಸುತ್ತಿದೆ. ಪೂರಕ ಪೌಷ್ಟಿಕಾಂಶ, ಮಕ್ಕಳ ಬೆಳವಣಿಗೆಯ ಮೇಲೆ ನಿಗಾ ಮತ್ತು ನಡವಳಿಕೆ ಬದಲಾವಣೆಯ ಅಭಿಯಾನಗಳು ಒಟ್ಟಾಗಿ ಸೇರಿ, ಆರೋಗ್ಯವಂತ ತಾಯಂದಿರು ಮತ್ತು ಸದೃಢ ಮಕ್ಕಳನ್ನು ರೂಪಿಸಲು ನೆರವಾಗುತ್ತವೆ. ಬಾಲ್ಯದಲ್ಲಿ ಸಿಗುವ ಉತ್ತಮ ಪೋಷಣೆಯು ನೇರವಾಗಿ ಬೌದ್ಧಿಕ ಬೆಳವಣಿಗೆಯನ್ನು ಮತ್ತು ಭವಿಷ್ಯದ ಗಳಿಕೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಇದು ದಶಕಗಳ ಕಾಲದ ಹೆಚ್ಚಿನ ಉತ್ಪಾದಕತೆಯ ಮೂಲಕ ಅಳೆಯಬಹುದಾದ ಹೂಡಿಕೆಯ ಮೇಲಿನ ಪ್ರತಿಫಲವಾಗಿದೆ.

'ಜನೌಷಧಿ ಕೇಂದ್ರ'ಗಳ ಮೂಲಕ ಔಷಧಗಳ ಬೆಲೆಯನ್ನು ಕೈಗೆಟಕುವಂತೆ ಮಾಡುವಲ್ಲಿ ದೊಡ್ಡ ಪ್ರೋತ್ಸಾಹ ದೊರೆತಿದೆ. 16,900ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳು ಗುಣಮಟ್ಟದ ಜೆನರಿಕ್ ಔಷಧಿಗಳನ್ನು ಭಾರಿ ರಿಯಾಯಿತಿ ದರದಲ್ಲಿ ಪೂರೈಸುತ್ತಿರುವುದರಿಂದ, ದುಬಾರಿ ಬ್ರ್ಯಾಂಡೆಡ್ ಔಷಧಿಗಳ ಮೇಲೆ ಖರ್ಚು ಮಾಡುತ್ತಿದ್ದ ಹಣವನ್ನು ಕುಟುಂಬಗಳು ಈಗ ಆಹಾರ, ಶಿಕ್ಷಣ ಅಥವಾ ಸಣ್ಣ ವ್ಯಾಪಾರದ ಹೂಡಿಕೆಯತ್ತ ತಿರುಗಿಸಲು ಸಾಧ್ಯವಾಗಿದೆ.

'ಸ್ವಚ್ಛ ಭಾರತ ಅಭಿಯಾನ'ವನ್ನು ಕೇವಲ ನೈರ್ಮಲ್ಯ ಕಾರ್ಯಕ್ರಮವೆಂದು ಬಿಂಬಿಸಲಾಗುತ್ತಿದ್ದರೂ, ಅದು ಅಷ್ಟೇ ಮಹತ್ವದ ಸಾರ್ವಜನಿಕ ಆರೋಗ್ಯ ಕ್ರಾಂತಿಯೂ ಹೌದು. ಹಳ್ಳಿ ಮತ್ತು ಪಟ್ಟಣಗಳಲ್ಲಿ ನಿರ್ಮಿಸಲಾದ ಕೋಟ್ಯಂತರ ಶೌಚಾಲಯಗಳು ಬಯಲು ಶೌಚವನ್ನು ಗಣನೀಯವಾಗಿ ಕಡಿಮೆ ಮಾಡಿವೆ. ಇದರಿಂದಾಗಿ, ನೀರಿನಿಂದ ಹರಡುವ ರೋಗಗಳು ಕಡಿಮೆಯಾಗಿ, ಪ್ರತಿ ವರ್ಷ ಅಂದಾಜು 60,000-70,000 ಶಿಶುಗಳ ಪ್ರಾಣ ಉಳಿಯುತ್ತಿದೆ.

'ಬೇಟಿ ಬಚಾವೋ ಬೇಟಿ ಪಢಾವೋ'ನಂಥ ಮಹಿಳಾ ಕೇಂದ್ರಿತ ಉಪಕ್ರಮಗಳು ಲಿಂಗ ಅನುಪಾತವನ್ನು ಸುಧಾರಿಸಿ ಹೆಣ್ಣುಮಕ್ಕಳ ಶಿಕ್ಷಣವನ್ನು ಉತ್ತೇಜಿಸಿವೆ. ಅದೇ ರೀತಿ, ಡಿಜಿಟಲ್ ಆರೋಗ್ಯ ಉಪಕರಣಗಳು ಮತ್ತು ಆಯುಷ್ಮಾನ್ ಭಾರತ್ ಆರೋಗ್ಯ ಮಂದಿರಗಳು ಅತಿ ಚಿಕ್ಕ ಸಮುದಾಯಗಳಿಗೂ ಆರೋಗ್ಯ ತಪಾಸಣೆ, ಟೆಲಿಕನ್ಸಲ್ಟೇಷನ್ ಮತ್ತು ಇಲೆಕ್ಟ್ರಾನಿಕ್ ಆರೋಗ್ಯ ದಾಖಲೆಗಳನ್ನು ತಲುಪಿಸುತ್ತಿವೆ. ಒಟ್ಟಾಗಿ, ಈ ಎಲ್ಲಾ ಕ್ರಮಗಳು ನಾಗರಿಕರು ಆರೋಗ್ಯವಾಗಿರುವ, ಕುಟುಂಬಗಳು ಆರ್ಥಿಕವಾಗಿ ಸ್ವತಂತ್ರವಾಗಿರುವ ಮತ್ತು ಕಾರ್ಮಿಕ ಶಕ್ತಿ ಹೆಚ್ಚು ವಿಶ್ವಾಸಾರ್ಹ ಹಾಗೂ ನುರಿತವಾಗಿರುವ ವಾತಾವರಣವನ್ನು ಸೃಷ್ಟಿಸುತ್ತಿವೆ.

ತಡೆಗಟ್ಟುವಿಕೆಯ ಅರ್ಥಶಾಸ್ತ್ರ: ಯುನಿಸೆಫ್‌ನ (UNICEF) ಅಂದಾಜಿನ ಪ್ರಕಾರ, ಸ್ವಚ್ಛ ಭಾರತ ಆಂದೋಲನದಿಂದಾಗಿ ಪ್ರತಿಯೊಂದು ಗ್ರಾಮೀಣ ಕುಟುಂಬವು ವಾರ್ಷಿಕವಾಗಿ ಸುಮಾರು 50,000 ರು. ಹಣವನ್ನು ಉಳಿತಾಯ ಮಾಡುತ್ತಿದೆ. ಈ ಸುಧಾರಣೆಗಳ ಹಿಂದಿನ ಆರ್ಥಿಕ ತರ್ಕವು ಬಹಳ ಗಮನಾರ್ಹವಾಗಿದೆ. ಭಾರತವು ಐತಿಹಾಸಿಕವಾಗಿ, ಆರೋಗ್ಯಕ್ಕಾಗಿ ಜನರು ತಮ್ಮ ಕೈಯಿಂದಲೇ ಮಾಡುವ ಅಧಿಕ ವೆಚ್ಚದ (out-of-pocket expenditure) ಸಮಸ್ಯೆಯಿಂದ ಬಳಲುತ್ತಿತ್ತು. 2013-14ರಲ್ಲಿ, ಒಟ್ಟು ಆರೋಗ್ಯ ವೆಚ್ಚದಲ್ಲಿ ಇದರ ಪಾಲು ಶೇ.64ರಷ್ಟಿತ್ತು. 2021-22ರ ಹೊತ್ತಿಗೆ, ಈ ಪ್ರಮಾಣವು ಶೇ.39ಕ್ಕೆ ಇಳಿದಿದೆ. ಈ ಮಹತ್ವದ ಬದಲಾವಣೆಗೆ ಮುಖ್ಯವಾಗಿ ವಿಸ್ತೃತ ವಿಮಾ ಸೌಲಭ್ಯ, ರಿಯಾಯಿತಿ ದರದ ಔಷಧಿಗಳು ಮತ್ತು ನೈರ್ಮಲ್ಯ ಸುಧಾರಣೆಗಳೇ ಕಾರಣವೆಂದು ಹೇಳಲಾಗಿದೆ. ಅನಾರೋಗ್ಯಕ್ಕಾಗಿ ವ್ಯಯಿಸುವ ವೈಯಕ್ತಿಕ ಖರ್ಚು ಕಡಿಮೆಯಾದಂತೆ, ಅದು ಕುಟುಂಬಗಳ ಬಳಕೆಯ ಪ್ರಮಾಣವನ್ನು ಹೆಚ್ಚಿಸುತ್ತದೆ, ಉಳಿತಾಯವನ್ನು ವೃದ್ಧಿಸುತ್ತದೆ ಮತ್ತು ಔಪಚಾರಿಕ ಹಣಕಾಸು ವ್ಯವಸ್ಥೆಯಲ್ಲಿ ಅವರ ಭಾಗವಹಿಸುವಿಕೆಯನ್ನು ಬಲಪಡಿಸುತ್ತದೆ.

ಶುದ್ಧ ಕುಡಿಯುವ ನೀರು, ಉತ್ತಮ ಶೌಚಾಲಯಗಳು ಮತ್ತು ತಾಯಿ- ಮಗುವಿನ ಪೋಷಣೆಯಂಥ ಪೂರ್ವಭಾವಿ ಕ್ರಮಗಳು ಅರ್ಥಶಾಸ್ತ್ರಜ್ಞರು ಬಾಹ್ಯ ಪರಿಣಾಮಗಳು ಎಂದು ಕರೆಯುವ ಪ್ರಯೋಜನಗಳನ್ನು ನೀಡುತ್ತವೆ. ಈ ಪ್ರಯೋಜನಗಳು ನೇರ ಫಲಾನುಭವಿಗಳನ್ನು ಮೀರಿ ವಿಸ್ತರಿಸುತ್ತವೆ. ರೋಗಿಗಳ ಸಂಖ್ಯೆ ಕಡಿಮೆಯಾದಾಗ ಕಾರ್ಖಾನೆಗಳು, ಕೃಷಿ ಕ್ಷೇತ್ರಗಳು ಮತ್ತು ಕಚೇರಿಗಳಲ್ಲಿ ಕೆಲಸಕ್ಕೆ ಗೈರು ಹಾಜರಾಗುವುದು ಕಡಿಮೆಯಾಗುತ್ತದೆ. ದೈಹಿಕ ಬೆಳವಣಿಗೆಯ ಕೊರತೆಯಿಂದ ಪಾರಾದ ಮಕ್ಕಳು ಶಾಲೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಹೆಚ್ಚು ಆದಾಯ ಗಳಿಸುವ ವಯಸ್ಕರಾಗುತ್ತಾರೆ. ನಗರ ಪ್ರದೇಶಗಳಲ್ಲಿನ ಉದ್ಯೋಗದಾತರಿಗೂ ಇದು ಲಾಭದಾಯಕ, ಏಕೆಂದರೆ ಆರೋಗ್ಯವಂತ ವಲಸೆ ಕಾರ್ಮಿಕರು ಸಿಬ್ಬಂದಿ ವರ್ಗಾವಣೆಯನ್ನು ಕಡಿಮೆ ಮಾಡುತ್ತಾರೆ ಮತ್ತು ತರಬೇತಿ ವೆಚ್ಚಗಳನ್ನು ತಗ್ಗಿಸುತ್ತಾರೆ.

ಆಯುಷ್ಮಾನ್ ಭಾರತ್ ಯೋಜನೆಯ ವಿಮಾ ರಕ್ಷಣೆಯು, ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿನ (tier-2 and tier-3) ಆರೋಗ್ಯ ಮೂಲಸೌಕರ್ಯ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆಗೆ ಉತ್ತೇಜನ ನೀಡಿದೆ. ಹಿಂದೆ ರೋಗಿಗಳಲ್ಲಿ ಕೊಳ್ಳುವ ಶಕ್ತಿ ಇಲ್ಲದ ಕಾರಣಕ್ಕೆ ನಿರ್ಲಕ್ಷಿಸಲ್ಪಟ್ಟಿದ್ದ ಜಿಲ್ಲೆಗಳಲ್ಲಿ, ಈಗ ಆಸ್ಪತ್ರೆಗಳು, ಪ್ರಯೋಗಾಲಯಗಳು ಮತ್ತು ಸ್ಟಾರ್ಟ್-ಅಪ್‌ಗಳು ಹೊಸ ವ್ಯವಹಾರ ಅವಕಾಶಗಳನ್ನು ಕಾಣುತ್ತಿವೆ. ಈ ರೀತಿಯಾಗಿ, ಸರಕಾರದ ಆರ್ಥಿಕ ಬೆಂಬಲವು ಆರೋಗ್ಯ ಕ್ಷೇತ್ರದ ಉದ್ಯಮಶೀಲತೆಯ ಹೊಸ ಅಲೆಗೆ 'ಬೀಜ ಬಂಡವಾಳ'ವಾಗಿ (seed capital) ಕಾರ್ಯನಿರ್ವಹಿಸುತ್ತಿದೆ. ಇದು ಉದ್ಯೋಗಗಳನ್ನು ಸೃಷ್ಟಿಸುವುದರ ಜತೆಗೆ, ಆರೋಗ್ಯ ಸೇವೆಗಳನ್ನು ದೇಶದ ಮೂಲೆಮೂಲೆಗೆ ತಲುಪಿಸಲು ನೆರವಾಗುತ್ತಿದೆ.

ಹಿನ್ನುಡಿ: 2014ರಿಂದ ಭಾರತದ ಆರೋಗ್ಯ ವಲಯದಲ್ಲಿ ಆದ ಕ್ರಾಂತಿಕಾರಿ ಬದಲಾವಣೆಗಳು, ಸರಕಾರವು ಸಮಾನತೆ ಮತ್ತು ಆರ್ಥಿಕ ಚಲನಶೀಲತೆ ಎರಡನ್ನೂ ಸಾಧಿಸಲು ಸಾರ್ವಜನಿಕ ನೀತಿಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದಕ್ಕೆ ಸ್ಪಷ್ಟ ಉದಾಹರಣೆಯಾಗಿವೆ. ಆರೋಗ್ಯವನ್ನು ಕೇವಲ ದಾನದ ವಿಷಯವೆಂದು ಪರಿಗಣಿಸದೆ, ಉತ್ಪಾದಕತೆಯ ಮೂಲಾಧಾರವೆಂದು ಮರುವ್ಯಾಖ್ಯಾನಿಸುವ ಮೂಲಕ, ಪ್ರಧಾನಿ ನರೇಂದ್ರ ಮೋದಿ ಅವರು ಈ ವಲಯಕ್ಕೆ ಹೊಸ ಭಾಷ್ಯ ಬರೆದಿದ್ದಾರೆ. ಒಂದು ಕಾಲದಲ್ಲಿ ಅನಾರೋಗ್ಯ ಮತ್ತು ಸಾಲದ ಸುಳಿಗೆ ಸಿಲುಕಿದ್ದ ಕುಟುಂಬಗಳು ಇಂದು ಆದಾಯ ಉಳಿಸಿಕೊಳ್ಳುತ್ತಿವೆ, ಮಕ್ಕಳಿಗೆ ಶಿಕ್ಷಣ ನೀಡುತ್ತಿವೆ ಮತ್ತು ಔಪಚಾರಿಕ ಮಾರುಕಟ್ಟೆಗಳಿಗೆ ಕೊಡುಗೆ ನೀಡುತ್ತಿವೆ. ವೈದ್ಯಕೀಯ ಸುರಕ್ಷತೆ ಕಲ್ಪನೆಗೂ ಮೀರಿದ್ದ ಹಳ್ಳಿಗಳಲ್ಲಿ, ಉದ್ಯಮಿಗಳು ಹೊಸ ಗ್ರಾಹಕರನ್ನು ಕಂಡುಕೊಳ್ಳುತ್ತಿದ್ದಾರೆ. ಉತ್ತಮ ಆರೋಗ್ಯ ಮತ್ತು ನೈರ್ಮಲ್ಯದಿಂದ ಬಲಗೊಂಡ ಲಕ್ಷಾಂತರ ಮಹಿಳೆಯರು ಉದ್ಯೋಗ ಮತ್ತು ಸಾರ್ವಜನಿಕ ಜೀವನದಲ್ಲಿ ತಮ್ಮ ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುತ್ತಿದ್ದಾರೆ.

ನನ್ನ ದೃಷ್ಟಿಯಲ್ಲಿ, ವೈದ್ಯಕೀಯ ಶಿಕ್ಷಣವನ್ನು ಸುಧಾರಿಸುವುದು ಅತ್ಯಂತ ಕಠಿಣವಾದ ಸುಧಾರಣೆಗಳಲ್ಲಿ ಒಂದು. ಈ ನಿಟ್ಟಿನಲ್ಲಿ ಮೋದಿಯವರ ಕಾರ್ಯವನ್ನು ನಾನು ವಿಶೇಷವಾಗಿ ಅಭಿನಂದಿಸುತ್ತೇನೆ. 387 ವೈದ್ಯಕೀಯ ಕಾಲೇಜುಗಳನ್ನು ನಿರ್ಮಿಸಲು ನಮಗೆ 60 ವರ್ಷಗಳಿಗೂ ಹೆಚ್ಚು ಕಾಲ ಬೇಕಾಗಿತ್ತು. ಆದರೆ ಕೇವಲ 10 ವರ್ಷಗಳಲ್ಲಿ, ಈ ಸಂಖ್ಯೆ 780ಕ್ಕೆ ಏರಿದೆ. ಇದೇ ರೀತಿ, 2014ರಲ್ಲಿ ವೈದ್ಯಕೀಯ ತಜ್ಞರಿಗೆ ತರಬೇತಿ ನೀಡಲು 28,500 ಸ್ನಾತಕೋತ್ತರ ಸೀಟುಗಳಿದ್ದವು, ಆದರೆ ಇಂದು ಆ ಸಂಖ್ಯೆ 75,092 ಆಗಿದೆ. ಭಾರತವು ಪ್ರತಿ ವರ್ಷ 1,18,000ಕ್ಕೂ ಹೆಚ್ಚು ವೈದ್ಯರನ್ನು ಉತ್ಪಾದಿಸುತ್ತಿದ್ದು, ಇದು ವಿಶ್ವದಲ್ಲೇ ಅತಿ ದೊಡ್ಡ ಸಂಖ್ಯೆಯಾಗಿದೆ. ಆರೋಗ್ಯ ಸೇವೆಗಳ ಮೂಲಾಧಾರವೇ ವೈದ್ಯರು, ದಾದಿಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿ. ಇಂದು ಭಾರತವು ತನ್ನ ನಾಗರಿಕರಿಗೆ ಮಾತ್ರವಲ್ಲದೆ, ಇಡೀ ವಿಶ್ವಕ್ಕೂ ಆರೋಗ್ಯ ಸೇವೆಗಳನ್ನು ಒದಗಿಸಲು ಅತಿದೊಡ್ಡ ನುರಿತ ಕಾರ್ಯಪಡೆಯನ್ನು ಸಿದ್ಧಪಡಿಸುತ್ತಿದೆ.

ಭಾರತವು 2047ರ ಕಡೆಗೆ ಮುಂದುವರಿಯುತ್ತಿರುವಾಗ, ಈ ಸುಧಾರಣೆಗಳ ಲಾಭಾಂಶಗಳು ಹಲವು ಪಟ್ಟು ಹೆಚ್ಚಾಗಲಿವೆ. ಇದು ಹೆಚ್ಚಿನ ಜೀವಿತಾವಧಿ, ಹೆಚ್ಚುತ್ತಿರುವ ಆದಾಯ ಮತ್ತು ತಮ್ಮ ಭವಿಷ್ಯ ತಾವೇ ರೂಪಿಸಿಕೊಳ್ಳುವ ಸಾಮರ್ಥ್ಯ ವುಳ್ಳ ಪ್ರಜೆಗಳ ರೂಪದಲ್ಲಿ ಪ್ರಕಟವಾಗಲಿದೆ. ಸಮಗ್ರ ಮತ್ತು ಪೂರ್ವಭಾವಿ ಆರೋಗ್ಯ ರಕ್ಷಣೆಯು ಈಗ ಕೇವಲ ಒಂದು ಗೌಣ ವಿಷಯವಾಗಿ ಉಳಿದಿಲ್ಲ; ಇದು ರಾಷ್ಟ್ರೀಯ ಶಕ್ತಿಯ ಬೆನ್ನೆಲುಬು ಮತ್ತು ಆರ್ಥಿಕ ಪರಿವರ್ತನೆಗೆ ನಿರ್ಣಾಯಕ ಅಸ್ತ್ರವಾಗಿದೆ.

(ಲೇಖಕರು ನಾರಾಯಣ ಹೆಲ್ತ್ ಸಂಸ್ಥೆಯ ಸಂಸ್ಥಾಪಕರು ಮತ್ತು ಹಿರಿಯ ಹೃದ್ರೋಗ ಶಸ್ತ್ರಚಿಕಿತ್ಸಕರು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:68, Issue: 145

ಕಾನ್‌ಸ್ಟೇಬಲ್, ಪಿಎಸ್‌ಐ ಹುದ್ದೆ: ಎಸ್‌ಸಿ, ಎಸ್‌ಟಿ, ಒಬಿಸಿ, ಸಾಮಾನ್ಯ ಅಭ್ಯರ್ಥಿಗಳಿಗೆ 2 ವರ್ಷ ಸಡಿಲಿಕೆ

ನೇಮಕಾತಿ ವಯೋಮಿತಿ ಸಡಿಲಿಕೆ

ಬೆಂಗಳೂರು: ಪೊಲೀಸ್ ಹುದ್ದೆಯ ಆಕಾಂಕ್ಷಿಗಳಿಗೆ ರಾಜ್ಯ ಗೃಹ ಇಲಾಖೆಯು ದಸರಾ ಹಬ್ಬಕ್ಕೆ ಸಿಹಿ ಸುದ್ದಿ ನೀಡಿದ್ದು, ಎಸ್‌ಐ ಮತ್ತು ಕಾನ್‌ಸ್ಟೇಬಲ್ ಹುದ್ದೆಗಳಿಗೆ ಗರಿಷ್ಠ 2 ವರ್ಷ ವಯೋಮಿತಿ ಹೆಚ್ಚಿಸಲು ನಿರ್ಧರಿಸಿದೆ.

ಪ್ರಸ್ತುತ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಯ ನೇಮಕಾತಿಗೆ

ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಅಭ್ಯರ್ಥಿಗಳಿಗೆ 27 ವರ್ಷ, ಸಾಮಾನ್ಯ ವರ್ಗಕ್ಕೆ 25 ವರ್ಷ ಹಾಗೂ ಪಿಎಸ್‌ಐ ವೃಂದದ ಹುದ್ದೆಗಳ ನೇಮಕಾತಿಗೆ ಎಸ್‌ಸಿ, ಎಸ್‌ಟಿಮತ್ತು ಒಬಿಸಿ ಅಭ್ಯರ್ಥಿಗಳಿಗೆ 30 ವರ್ಷ, ಸಾಮಾನ್ಯ ವರ್ಗಕ್ಕೆ 28 ವರ್ಷ ಗರಿಷ್ಠ ವಯೋಮಿತಿ ಇದೆ. ಇದನ್ನು ಪರಿಷ್ಕರಿಸಲು ಗೃಹ ಇಲಾಖೆ ಮುಂದಾಗಿದೆ.

ಪೊಲೀಸ್ ಪೇದೆ ಹುದ್ದೆ ನೇಮಕಕ್ಕೆ ವಯೋಮಿತಿ ಸಡಿಲಿಕೆ ಕುರಿತ ಪ್ರಸ್ತಾವನೆಯೊಂದನ್ನು ಸಲ್ಲಿಸುವಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಡಿಜಿಐಜಿ ಎಂ.ಎ.ಸಲೀಂ ಅವರಿಗೆ ಸೂಚನೆ ನೀಡಿದ್ದು, ತನ್ಮೂಲಕ ಪೊಲೀಸ್ ಪೇದೆ ಹುದ್ದೆ ಆಕಾಂಕ್ಷಿಗಳು ಹಲವು ವರ್ಷಗಳಿಂದ ವಯೋಮಿತಿ ಸಡಿಲಿಸುವಂತೆ ನಡೆಸುತ್ತಿದ್ದ ಹೋರಾಟಕ್ಕೆ ಸರಕಾರ ಮನ್ನಣೆ ನೀಡಿದಂತಾಗಿದೆ.

ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಯ ನೇಮಕಾತಿಗೆ ಎಸ್‌ಸಿ, ಎಸ್‌ಟಿಮತ್ತು ಒಬಿಸಿ ವರ್ಗ ಅಭ್ಯರ್ಥಿಗಳಿಗೆ 30 ವರ್ಷ, ಸಾಮಾನ್ಯ ವರ್ಗಕ್ಕೆ 27 ವರ್ಷ ಗರಿಷ್ಠ ವಯೋಮಿತಿಯನ್ನು ಹೆಚ್ಚಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಆದೇಶಿಸಿದ್ದಾರೆ. ಈ ವಯೋಮಿತಿ ಸಡಿಲಿಕೆ ಎಲ್ಲ ಪ್ರಕಾರದ ಪೇದೆ ಹುದ್ದೆಗಳಿಗೆ ಅನ್ವಯವಾಗುವಂತೆ ಮಾಡಲಾಗುತ್ತಿದೆ. ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್), ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ), ನಾಗರಿಕ (ಸಿವಿಲ್) ವಿಭಾಗದ ಪೇದೆ ಹುದ್ದೆಗಳ ನೇಮಕಾತಿಯಲ್ಲೂ ಒಂದೇ ಬಗೆಯ ವಯೋಮಿತಿ ನಿಗದಿ ಮಾಡಲು ಗೃಹ ಇಲಾಖೆ ನಿರ್ಧರಿಸಿರುವುದು ಮಾಹಿತಿ ಮೂಲಗಳು ತಿಳಿಸಿವೆ.

ಹಿಂದೆ ಪತ್ರ ಬರೆದಿದ್ದ ಸಿದ್ದರಾಮಯ್ಯ

ಪೊಲೀಸ್ ಪೇದೆ ಹುದ್ದೆಗೆ ಸಂಬಂಧಿಸಿದ ವಯೋಮಿತಿ 18 ವರ್ಷಕ್ಕೆ ಇಳಿಸುವುದು ಹಾಗೂ ಸಾಮಾನ್ಯ ವರ್ಗದವರ ಗರಿಷ್ಠ ವಯೋಮಿತಿ 25ರಿಂದ 30 ವರ್ಷಕ್ಕೆ ಹಾಗೂ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ/ಪಂಗಡ ಸಮುದಾಯದವರ ಗರಿಷ್ಠ ವಯೋಮಿತಿ 27ರಿಂದ 33 ವರ್ಷಕ್ಕೆ ಹೆಚ್ಚಿಸುವುದು ಹಲವು ವರ್ಷದ ಆಗ್ರಹವಾಗಿತ್ತು. ಅಲ್ಲದೆ, ಈ ಕುರಿತು ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಅವರು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು, ಪೇದೆ ಹುದ್ದೆ ವಯೋಮಿತಿಯಲ್ಲಿ ಬದಲಾವಣೆ ತರುವಂತೆಯೂ ಕೋರಿದ್ದರು. ಇದೀಗ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ನಂತರ ವಯೋಮಿತಿ ಬದಲಾವಣೆಗೆ ಸಂಬಂಧಿಸಿ ಪರಿಶೀಲಿಸುವಂತೆ ಗೃಹ ಇಲಾಖೆಗೆ ಸೂಚನೆ ನೀಡಿದ್ದರು. ಅದರ ಆಧಾರದಲ್ಲಿ ವಯೋಮಿತಿಯಲ್ಲಿ ಬದಲಾವಣೆ ಮಾಡಲು ಇಲಾಖೆ ಮುಂದಾಗಿದೆ.

ಪೊಲೀಸ್ ನೇಮಕಾತಿಯ ವಯೋಮಿತಿ ಸಡಿಲಿಕೆ ಬಹುದಿನದ ಬೇಡಿಕೆ. ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಕೂಲಂಕುಷವಾಗಿ ಚರ್ಚಿಸಿ, ಎಲ್ಲ ಎಸ್‌ಐ ಮತ್ತು ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳಿಗೆ ಗರಿಷ್ಠ ವಯೋಮಿತಿ ಹೆಚ್ಚಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಗೆ ಆದೇಶ ನೀಡಿದ್ದೇನೆ. ಪೊಲೀಸ್ ಇಲಾಖೆಯ ಖಾಲಿ ಇರುವ ಹುದ್ದೆಗಳ ನೇಮಕಾತಿ ಬಗ್ಗೆ ತ್ವರಿತಗತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆಯೂ ಸೂಚಿಸಿದ್ದೇನೆ.

-ಡಾ.ಜಿ.ಪರಮೇಶ್ವರ್ ಗೃಹ ಸಚಿವ

...ಏಕಿಷ್ಟು ದ್ವೇಷ: ಹೆಗ್ಗಡೆ ಭಾವುಕ

← ಮೊದಲಪುಟದಿಂದ

ಆದರೆ ಶಿಕ್ಷಕರಿಗೆ ನೀಡುವ ಭತ್ಯೆಯಲ್ಲಿ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಭರವಸೆ ನೀಡಿದ್ದಾರೆ.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮೀಕ್ಷೆ ಕಾರ್ಯ ಗುರುವಾರದಿಂದ ಚುರುಕಾಗಿಲಿದೆ.

ಯಾವುದೇ ಕಾರಣಕ್ಕೂ ಸಮೀಕ್ಷೆಯ ಅವಧಿ ವಿಸ್ತರಣೆಯಾಗುವುದಿಲ್ಲ. ಡಿಸಿ, ಸಿಇಒಗಳೊಂದಿಗೆ ಸಭೆ ನಡೆಸಿದ್ದೇವೆ. ಆರಂಭಿಕ ನಾಲ್ಕು ದಿನಗಳಲ್ಲಿ ತಾಂತ್ರಿಕ ತೊಂದರೆಯಿಂದ ಸರ್ವೆ ಕಾರ್ಯ ಕುಂಠಿತ ಆಗಿತ್ತು. ಜಿಲ್ಲಾಧಿಕಾರಿಗಳು ಹೇಳುವ ಪ್ರಕಾರ ಶೇ.90ರಷ್ಟು ಸಮಸ್ಯೆ ಪರಿಹಾರವಾಗಿದೆ. ಉಳಿದ ಸಮಸ್ಯೆಯೂ ಶುಕ್ರವಾರದೊಳಗೆ ಸರಿಹೋಗಲಿದೆ. ನಾಲ್ಕು ದಿನದಲ್ಲಿ ಆಗಿರುವ ಸಮಸ್ಯೆಯನ್ನು ಉಳಿದ ದಿನಗಳಲ್ಲಿ ಸರಿಪಡಿಸುವಂತೆ ಸೂಚನೆ ನೀಡಿದ್ದೇನೆ ಎಂದರು.

ಗೌರವ ಧನದ ಬಗ್ಗೆ ಚಿಂತೆ ಬೇಡ: ಶಿಕ್ಷಕರಿಗೆ ಗೌರವಧನದ ಬಗ್ಗೆ ಯಾವುದೇ ಅನುಮಾನ ಬೇಡ. ಈಗಾಗಲೇ ಗೌರವಧನವನ್ನು ಬಿಡುಗಡೆ ಮಾಡಿದ್ದೇವೆ. ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಗಣತಿ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದು ಕೇವಲ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಮೀಕ್ಷೆಯಲ್ಲ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ನಿಗದಿತ ಗುರಿಯ ಪ್ರಗತಿ ಬಗ್ಗೆ ಪ್ರತಿ ದಿನ ಪರಿಶೀಲನೆ ನಡೆಸಬೇಕು. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಕೆಲವು ಜಿಲ್ಲೆಗಳಲ್ಲಿ ಸಮೀಕ್ಷೆ ನಿಧಾನಗತಿಯಲ್ಲಿದ್ದು, ಚುರುಕುಗೊಳಿಸಬೇಕು. ಅಗತ್ಯವಿರುವ ಕಡೆ ಅನುದಾನಿತ ಶಾಲೆಗಳ ಶಿಕ್ಷಕರ ಸೇವೆಯನ್ನು ಪಡೆದುಕೊಳ್ಳಬೇಕು. ಜಿಲ್ಲಾ ಉಸ್ತುವಾರಿ ಸಚಿವರೊಂದಿಗೂ ಈ ಕುರಿತು ಸಂಪರ್ಕದಲ್ಲಿರುವಂತೆ ಸೂಚಿಸಲಾಗಿದೆ ಎಂದರು.

ಸಮೀಕ್ಷೆ ಕಾರ್ಯದ ಮೇಲ್ವಿಚಾರಣೆ ನಡೆಸಲು ಪ್ರತಿ ತಾಲೂಕಿಗೆ ಜಿಲ್ಲಾ ಮಟ್ಟದ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಯಾವುದೇ ತಾಂತ್ರಿಕ ತೊಂದರೆಗಳು ಎದುರಾದರೆ ಸ್ಥಳೀಯವಾಗಿ ಸಮಸ್ಯೆ ಬಗೆಹರಿಸಲು ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳಲ್ಲಿರುವ ಐಟಿ ತಂತ್ರಜ್ಞರ ನೆರವನ್ನು ಪಡೆದುಕೊಳ್ಳಲು ಸೂಚಿಸಲಾಗಿದೆ ಎಂದು ಸಿಎಂ ತಿಳಿಸಿದರು.

ನಿರ್ಲಕ್ಷ್ಯ ವಹಿಸಿದರೆ ಕ್ರಮ

ರಾಜ್ಯದಲ್ಲಿ ಒಟ್ಟು 1,43,81,702 ಕುಟುಂಬಗಳ ಸಮೀಕ್ಷೆ ಕಾರ್ಯವನ್ನು ನಡೆಸಬೇಕಾಗಿದ್ದು, ಇದುವರೆಗೆ 2,76,016 ಕುಟುಂಬಗಳ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಲಾಗಿದೆ. ಒಟ್ಟು 1,22,085 ಗಣತಿ ಬ್ಲಾಕ್‌ಗಳನ್ನು ಗುರುತಿಸಲಾಗಿದೆ. ಅ.7ರೊಳಗಾಗಿ ಗಣತಿ ಕಾರ್ಯ ಪೂರ್ಣಗೊಳ್ಳಬೇಕು. ಸಮೀಕ್ಷೆ ಕಾರ್ಯಕ್ಕೆ ನಿಯೋಜಿಸಿರುವ ಎಲ್ಲಾ ಶಿಕ್ಷಕರು ತಮಗೆ ವಹಿಸಲಾಗಿರುವ ಕಾರ್ಯವನ್ನು ನಿಗದಿತ ಅವಧಿಯ ಒಳಗಾಗಿ ಪೂರ್ಣಗೊಳಿಸಬೇಕು. ಯಾವುದೇ ಶಿಕ್ಷಕರು ಗಣತಿ ಕಾರ್ಯಕ್ಕೆ ಅಸಹಕಾರ ತೋರಿಸಬಾರದು. ಇದು ಸರಕಾರಿ ಕೆಲಸವಾಗಿದ್ದು, ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಬಾರದು. ನಿರ್ಲಕ್ಷ್ಯ ವಹಿಸುವ ಗಣತಿದಾರರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ ಎಂದರು.

ಸಮೀಕ್ಷೆ ತ್ವರಿತಕ್ಕೆ ಸಿಎಂ ಆದೇಶ

← ಮೊದಲಪುಟದಿಂದ

ಇವರ ಹಾಗೆ ಟೀಕೆ ಮಾಡಿಲ್ಲ. ನಿಮಗೆ ನಾನು ಎಷ್ಟು ಕೃತಜ್ಞತೆ ಸಲ್ಲಿಸಿದ್ರೂ ಕಡಿಮೆಯೇ. ಧರ್ಮಸ್ಥಳ ಬೇರೆ, ಧರ್ಮಸ್ಥಳದ ಊರಿನವರು ಬೇರೆ ಅಲ್ಲ. ಎಷ್ಟು ನಿಷ್ಠುರವಾಗಿ ನಮ್ಮ ಮೇಲೆ ದಬ್ಬಾಳಿಕೆ ನಡೆದಿದೆ ಅಂತ

ನೀವು ನೋಡಿದ್ದೀರಿ. ಯಾಕೆ ಇಷ್ಟು ದ್ವೇಷ ನನ್ನ ಮೇಲೆ ಇದೆ ಅಂತ ನನಗೆ ಗೊತ್ತಾಗಿಲ್ಲ. ಈಗ ಮನಸ್ಸು ಸ್ವಲ್ಪ ಹಗುರವಾಗಿದೆ, ಎತ್ತರದ ಬೆಟ್ಟದಿಂದ ನೀರು ಹರಿದಿದೆ ಎಂದು ವೀರೇಂದ್ರ ಹೆಗ್ಗಡೆಯವರು ಭಾವುಕವಾಗಿ ಮಾತನಾಡಿದ್ದಾರೆ.

ನಿಮ್ಮ ಧರ್ಮ ಸೋತರೆ, ನಮ್ಮ ಧರ್ಮ ಸೋತ ಹಾಗೆ ನಮ್ಮ ಮೇಲೆ ದೃಢವಾದ ನಂಬಿಕೆ ಇಟ್ಟ ಎಲ್ಲರಿಗೂ ನಾನು ಆಭಾರಿ. ಈಗಾಗಲೇ ಲಕ್ಷಾಂತರ ಜನರು ಇಲ್ಲಿಗೆ ಬಂದು ಹೋಗಿದ್ದಾರೆ. ನಿಮ್ಮ ಧರ್ಮ ಸೋತರೆ, ನಮ್ಮ ಧರ್ಮ ಸೋತ ಹಾಗೆ ಅಂತ ಹೇಳಿದ್ದಾರೆ. ಈ ಶತ್ರುತ್ವ ಯಾಕೆ ಅಂತ ಕೇಳ್ತಾರೆ, ನನಗೂ ಈ ದ್ವೇಷ ಯಾಕೆ ಬೇಕು? ನಾವು ಯಾರನ್ನೂ ಹೀಯಾಳಿಸಿಲ್ಲ. ದ್ವೇಷ ಕೂಡ ಮಾಡಿಲ್ಲ. ನಾವು ತಪ್ಪು ಮಾಡದ ಕಾರಣ ನಮಗೆ ಆತ್ಮವಿಶ್ವಾಸ ಇದೆ. ಬೆಂಗಳೂರು ಅಥವಾ ಎಲ್ಲೋ ಕೂತು ಟೀಕೆ ಮಾಡೋರು ನಮಗೆ ಬೇಡ. ನಮಗೆ ನಮ್ಮವರು ಬೇಕು, ನಮ್ಮ ಜೊತೆ ನಿಲ್ಲೋರು ಬೇಕು. ನಮ್ಮ ಮೇಲೆ ಪ್ರೀತಿ ತೋರಿದ ಎಲ್ಲಾ ಹೆಣ್ಮಕ್ಕಳಿಗೂ ನಾನು ಆಭಾರಿ ಎಂದು ಹೇಳಿದ್ದಾರೆ.

ನಮ್ಮ ಹೊಳಪು ಹಾಗೇ ಉಳಿದಿದೆ

'ಎಸ್‌ಐಟಿ ವರದಿ ಅರ್ಧ ಬಂದ ಕಾರಣ ನಾನು ಇಷ್ಟು ಧೈರ್ಯವಾಗಿ ಮಾತನಾಡುತ್ತಾ ಇದ್ದೇನೆ. ಸರಕಾರಕ್ಕೆ ನಾನು ಆಭಾರಿ, ಎಸ್‌ಐಟಿ ಮಾಡಿದ ಕಾರಣ ಸತ್ಯ ಹೊರಗೆ ಬರುತ್ತಿದೆ. ನಮ್ಮ ಹೊಳಪು ಹಾಗೇ ಉಳಿದಿದೆ, ಇದಕ್ಕೆ ನಾನು ಸರಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ. ಮಂಜುನಾಥ ಸ್ವಾಮಿ, ಅಣ್ಣಪ್ಪ ಸ್ವಾಮಿ ಮಂದಿನದನ್ನು ನೋಡಿಕೊಳ್ಳುತ್ತಾರೆ. ನಾವು ಸತ್ಯದಿಂದ ಇದ್ದೇವೆ, ಹಾಗೆಯೇ ಮುಂದೆಯೂ ಇರುತ್ತೇವೆ. ಮುಂದಿನ ದಿನಗಳು ಉತ್ತಮವಾಗಿರಲಿ ಎಂದು ವಿರೇಂದ್ರ ಹೆಗ್ಗಡೆ ಹೇಳಿದ್ದಾರೆ.

ನಗರಸಭಾ ಕಾರ್ಯಾಲಯ, ಮಂಡ್ಯ

ದೂ.ಸಂ:- 08232-226749 ಫ್ಯಾಕ್ಸ್:-08232-221617 ಟಾಲ್ ಫ್ರೀ ನಂ:-1800-4253795

Website: www.mandyacity.mrc.gov.in Email: itstaff_ulb_mandya@yahoo.co.in

ಸಂಖ್ಯೆ:ನಸಮಂ/ಕಂ.ಶಾ/ನಿ.ಶಾ./ನಾಮಕರಣ/ಸಿ.ಆರ್-03/2025-26. ದಿನಾಂಕ:26.09.2025

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಚಾರ ಪಡಿಸುವುದೇನೆಂದರೇ ಮಂಡ್ಯ ನಗರಸಭಾ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ರಸ್ತೆಗಳಿಗೆ ನಾಮಕರಣ ಮಾಡುವ ಬಗ್ಗೆ ನಗರಸಭಾ ದಿನಾಂಕ-15-09-2025 ರಂದು ನಡೆದ ಕೌನ್ಸಿಲ್ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ವಿಷಯ ಸಂಖ್ಯೆ-04 ರಲ್ಲಿ ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾಗಿರುತ್ತದೆ. ಈ ಸಂಬಂಧ ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 211ರ ಅನ್ವಯ ಹಾಗೂ ಮಾನ್ಯ ಪೌರಾಡಳಿತ ನಿರ್ದೇಶನಾಲಯ ಸುತ್ತೋಲೆ ಸಂಖ್ಯೆ:ಪೌನಿ/ಜಿಪಿಎಸ್/ ಪ್ರತಿಮೆ/ನಾಮ/ಸಿಆರ್/ 2012-13 ದಿನಾಂಕ:17.12.2012ರ ರೀತ್ಯಾ ಸಾರ್ವಜನಿಕರ ಗಮನಕ್ಕೆ ಪ್ರಚಾರಪಡಿಸಲಾಗಿದೆ. ಈ ಸಂಬಂಧ ಯಾವುದಾದರು ಆಕ್ಷೇಪಣೆ ಇದ್ದ ಪಕ್ಷದಲ್ಲಿ ಈ ಪ್ರಕಟಣೆ ಹೊರಡಿಸಿದ 30(ಮುವತ್ತು)ದಿನಗಳೊಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತವಾಗಿ ಖುದ್ದು ಸಲ್ಲಿಸತಕ್ಕದ್ದು, ನಂತರ ಬಂದ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

ಬೆಸಗರಹಳ್ಳಿ ರಾಮಣ್ಣ ವೃತ್ತದಿಂದ ವಾಟರ್ ಟ್ಯಾಂಕ್ ವೃತ್ತದವರೆಗೆ	ಕನ್ನಿಕಾ ಪರಮೇಶ್ವರಿ ದೇವಸ್ಥಾನದ ವೃತ್ತದಿಂದ ಗೌರಿಶಂಕರ ಕಲ್ಯಾಣ ಮಂಟಪದ ವರೆಗೆ
ಡಾ.ಬಿ.ಆರ್. ಅಂಬೇಡ್ಕರ್ ಜೋಡಿ ರಸ್ತೆ	ನಾಡಪ್ರಭು ಕೆಂಪೇಗೌಡ ರಸ್ತೆ

ಸಹಿ/-ಪೌರಾಯುಕ್ತರು, ನಗರಸಭೆ, ಮಂಡ್ಯ.

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/468/2025-26

ಕರ್ನಾಟಕ ಸರಕಾರ

(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ-1&3/ಇ-ಟೆಂಡರ್ ಪ್ರಕಟಣೆ/2025-26/1441, ದಿನಾಂಕ:25.09.2025

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2024-25ನೇ ಸಾಲಿನ 5054 ಅಪೆಂಡಿಕ್ಸ್-ಇ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ (ಯೋಜನೆ) ಅಡಿಯಲ್ಲಿ ಯಾದಗಿರಿ ತಾಲೂಕಿನ (1)23122 ಮತ್ತು ಸುರಪೂರ ತಾಲೂಕಿನ (1)26545, (2)26540, (3)25555 ಹಾಗೂ (4)17663/4ನೇ ಕರೆ ಒಟ್ಟಾರೆ 5 (ಐದು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. 2) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.300.00 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 2ನೇ ದರ್ಜೆ ಹಾಗೂ ಮೇಲ್ಪಟ್ಟು 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಪ್ರೀ ಬಿಡ್ ಮೀಟಿಂಗ್ ದಿನಾಂಕ:** 03.10.2025 (11.30 ಗಂಟೆ ನಂತರ) 6) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 06.10.2025 (17.30 ಗಂಟೆವರೆಗೆ) 7) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 09.10.2025 (16.00 ಗಂಟೆವರೆಗೆ) 8) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 10.10.2025 (16.30 ಗಂಟೆ ನಂತರ) 9) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 14.10.2025 (11.30 ಗಂಟೆ ನಂತರ) 10) **ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) **ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/306/ಕೆ.ಎಸ್.ಎಂ.ಸಿ.&ಎ/2025-26

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123

ಇ-ಮೇಲ್: nelamangala.pa@gmail.com Phone No: 96630 46622

ಸಂಖ್ಯೆ:ನೆಯೋಪ್ರಾ: CLU:62:2025-26 ದಿನಾಂಕ: 24-09-2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13-02-2007 ರನ್ವಯ **ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಬ್ಯಾಡರಹಳ್ಳಿ ಗ್ರಾಮವು** "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ 'ಕೈಗಾರಿಕೆ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ" ವಲಯದಿಂದ "ಕೈಗಾರಿಕೆ" ಉದ್ದೇಶಕ್ಕೆ** ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	M/s SCA HEAVY EQUIPMENT PVT LTD REP. BY MANAGING DIRECTOR Sri.S.RAJGOPAL	ನೆಲಮಂಗಲ ತ್ಯಾಮಗೊಂಡ್ಲು, ಬ್ಯಾಡರಹಳ್ಳಿ	105/1	00-31½	ವ್ಯವಸಾಯ	ಕೈಗಾರಿಕೆ
2			105/2	00-31½		
3			108	00-38		

ಷರಾ:- ಪ್ರಶ್ನಿತ ಜಮೀನುಗಳಲ್ಲಿ ಕೈಗಾರಿಕೆ ಚಟುವಟಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ವ್ಯವಸಾಯ ವಲಯದಿಂದ ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾ.ಸಾ.ಸಂ.ಇ/ವಾಪ್ರ/3002/2025-26

ಕರ್ನಾಟಕ ಸರ್ಕಾರ

ಪಟ್ಟಣ ಪಂಚಾಯತ ಕಾರ್ಯಾಲಯ, ಬಬಲೇಶ್ವರ

ದೂರವಾಣಿ ಸಂಖ್ಯೆ: 08356-298933, www.babaleshwartown.gov.in

ಇ-ಮೇಲ್: itstaff_ulb_babaleshwar@yahoo.co.in,

ಕ್ರ.ಸಂ:ಪ.ಪಂ.ಬ./ಅಮೃತ-2.00/ಕೆ.ಪಿ.ಪಿ.ಪಿ/2025-26 ದಿನಾಂಕ:23.09.2025

ಇ-ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಯಾವತ್ತೂ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸನ್ 2025-26 ನೇ ಸಾಲಿನಲ್ಲಿ ಅಮೃತ-2.0 ಯೋಜನೆಯ ಅಡಿಯಲ್ಲಿ, ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಯನ್ನು ಕೈಕೊಳ್ಳಲು ಅರ್ಹ ಗುತ್ತಿಗೆದಾರರಿಂದ, ಐಟಂವಾರು ಟೆಂಡರ ಆಹ್ವಾನಿಸಲಾಗಿದ್ದು, ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ವೇಳಾ ಪಟ್ಟಿಯಂತೆ ಕೆ.ಪಿ.ಪಿ.ಪಿ ಇ-ಪೋರ್ಟಲ್ ಮೂಲಕ ಮಾತ್ರ ಕೆ.ಡಬ್ಲೂ-3 ರ ನಮೂನೆಯಲ್ಲಿ ತಮ್ಮ ಟೆಂಡರಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ತಾಂತ್ರಿಕ ವಿಭಾಗದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಕ್ರ ಸಂ.	ಕಾಮಗಾರಿ ಹೆಸರು	ಟೆಂಡರಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಮಗಾರಿ ಅವಧಿ	ಗುತ್ತಿಗೆದಾರರ ದರ್ಜೆ
ಅಮೃತ-2.00 ಯೋಜನೆಯ ಅಡಿ					
1	Development of Garden near KEB Khakandaki Road in Babaleshwar Town. (DMA/2025-26/OW/WORK_ INDENT 49371)	54.80	1,09,610/-	180 ದಿನಗಳು	ಅರ್ಹ ಗುತ್ತಿಗೆದಾರರು

ಸೂಚನೆಗಳು: ಟೆಂಡರ್ ದಾಖಲಾತಿ ಹಾಗೂ ಮಾಹಿತಿಗಾಗಿ ಕೆ.ಪಿ.ಪಿ ಪೋರ್ಟಲ್/ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ನಿಗಧಿಪಡಿಸಿದ ದಿನಾಂಕದಂತೆ ಆನ್‌ಲೈನ್ ಮೂಲಕ ಮಾತ್ರ ಟೆಂಡರ್ ಸಲ್ಲಿಸುವದು.

1)ಕೆ.ಪಿ.ಪಿ.ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:07.10.2025 ರ 4.30 ಗಂಟೆಯವರೆಗೆ.

2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.10.2025 ಸಾಯಂಕಾಲ 4.30 ಗಂಟೆಗೆ.

3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.10.2025 ಸಾಯಂಕಾಲ 4.30 ಗಂಟೆಗೆ,

ಹೆಚ್ಚಿನ ವಿವರಗಳಿಗಾಗಿ ಪಟ್ಟಣ ಪಂಚಾಯತ ಕಾರ್ಯಾಲಯದ ತಾಂತ್ರಿಕ ವಿಭಾಗದಲ್ಲಿ http://eproc.karnataka.gov.in ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/- ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಬಬಲೇಶ್ವರ | ಸಹಿ/- ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ಬಬಲೇಶ್ವರ

ವಾಸಾಸಂಇ/ವಿಜಯಪುರ/361/ಕೆಎಸ್‌ಎಂಸಿಎ/2025-26

ಪುರಸಭಾ ಕಾರ್ಯಾಲಯ, ಭಟ್ಕಳ (ಉ.ಕ.)

TOWN MUNICIPAL COUNCIL, BHATKAL (U.K.)

Ph/Fax: 08385-226408, Website: www.bhatkaltown.mrc.gov.in

Email: ka.bhatkal.tmc@gmail.com

ನಂ: ಪುಸಭ/ಕಾವಿ/ಅಮೃತ-2.0/ಟೆಂ-05/2025-26 ದಿನಾಂಕ: 25-09-2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಈ ಮೂಲಕ ಲೋಕೋಪಯೋಗಿ ಇಲಾಖೆಯಲ್ಲಿ ಪ್ರಸ್ತುತ 2025-26ನೇ ಸಾಲಿಗೆ ನೊಂದಾಯಿಸಿದ ಅರ್ಹ ಸಿವಿಲ್ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಪಾರದರ್ಶಕ ಕಾಯಿದೆ 1999 ಹಾಗೂ ನಿಯಮಾವಳಿ-2000 ರಂತೆ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಲ್ಲಿ ಮಂಜೂರಾಗಿರುವ ಉದ್ಯಾನವನ ಅಭಿವೃದ್ಧಿ ಕುರಿತಾದ ಕಾಮಗಾರಿಗೆ, ಇಂಡೆಂಟ್ ಸಂಖ್ಯೆ: DMA/2025-26/OW/WORK_INDENT49827 ರಲ್ಲಿ ಕೆಡಬ್ಲೂ-03 ನಿಬಂಧನೆಗೆ ಒಳಪಟ್ಟು ಐಟಂವಾರು ಟೆಂಡರನ್ನು ಈ ಮೂಲಕ ಕರೆಯಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ ದಿನಾಂಕ: 13-10-2025 ರ ಸಾಯಂಕಾಲ 5.00 ಘಂಟೆಯ ಒಳಗೆ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ ಹಾಗೂ ಸ್ವೀಕೃತ ಟೆಂಡರ್‌ನ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 14-10-2025 ರ ಸಾಯಂಕಾಲ 5.30 ಘಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ www.bhatkaltown.mrc.gov.in ರಲ್ಲಿ ಅಥವಾ ಕಛೇರಿ ಸಮಯದಲ್ಲಿ ಕಾರ್ಯಾಲಯವನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯಾಧಿಕಾರಿ ಪುರಸಭೆ ಭಟ್ಕಳ (ಉ.ಕ.)

DIPR/KWR/KSMCA/549/25-26 dt.26.09.25

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ

ಟೆಂಡರ್‌ಕ್ರ:ಉನಿಬೆ:ಮಮಅಇ:ಬೆ:ಉಮವನಿ:ಟೆ.ಪ್ರ:ಕು:2025-26, ದಿನಾಂಕ:24/09/2025

(ಇ-ಪ್ರೊಕ್ಯೂರ್‌ಮೆಂಟ್) ಟೆಂಡರ್ ಪ್ರಕಟಣೆ

ಬೆಳಗಾವಿ ನಗರ ವ್ಯಾಪ್ತಿಯಲ್ಲಿ ಮಹಿಳೆಯರ ಸುರಕ್ಷತಾ ಹಾಗೂ ಯೋಗ್ಯ ವಸತಿ ಸೌಕರ್ಯ ನೀಡುವ ನಿಟ್ಟಿನಲ್ಲಿ, ವಸತಿ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಬೆಳಗಾವಿಯಲ್ಲಿ ಪ್ರಾರಂಭಿಸಿರುವ 3 ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಲ್ಲಿ 2025-26ನೇ ಸಾಲಿಗಾಗಿ ಅವಶ್ಯವಿರುವ 27 ವಿವಿಧ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಮೇಲೆ ಪಡೆಯಲು ಅರ್ಹ ಹೊರಸಂಪನ್ಮೂಲ ಏಜೆನ್ಸಿಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ ಅರ್ಹ ಟೆಂಡರ್‌ದಾರರು/ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್‌ಗಳನ್ನು ಈ ಕೆಳಗೆ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ http://kppp. karnataka.gov.in ರ ಮೂಲಕ ಮಾತ್ರ ಸಲ್ಲಿಸತಕ್ಕದ್ದು.

ಟೆಂಡರ್ ವೇಳಾಪಟ್ಟಿ

1. ಟೆಂಡರ್ ಅರ್ಜಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಪ್‌ಲೋಡ್ ಮಾಡಿಕೊಂಡು ಸಲ್ಲಿಸಲು ಕೊನೆಯ ದಿನಾಂಕ ದಿನಾಂಕ:10/10/2025 5.00 PM http://kppp.karnataka.gov.in ಮೂಲಕ, 2. ಟೆಂಡರ್ ಒಟ್ಟು ಮೊತ್ತ ರೂ. 54.00 ಲಕ್ಷ, 3. ಇ.ಎಂ.ಡಿ. ಮೊತ್ತ ರೂ. 1.08 ಲಕ್ಷ, 4. ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ: 13/10/2025 11:00 AM, 5. ಇ-ಪೋರ್ಟಲ್‌ನಲ್ಲಿ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ: 16/10/2025 11:00 AM, 6. ಇ-ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಛೇರಿ ವಿವರ ಉಪ ನಿರ್ದೇಶಕರ, ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿವಾಜಿನಗರ, ಬೆಳಗಾವಿ.

ಸಹಿ/-ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಳಗಾವಿ

DIPR/BGM/RO-NO-1103/KSMCA/2025-26

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412

E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/33/2025-26 ದಿನಾಂಕ: 26-09-2025

ಸಾರ್ವಜನಿಕ ಪ್ರಕಟಣೆ

ವಿಷಯ: **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.**

ಶ್ರೀಮತಿ ದ್ಯಾವಮ್ಮ ಕೋಂ ಕೃಷ್ಣಪ್ಪ ಮತ್ತು ಶ್ರೀಮತಿ ಮುನಿಲಕ್ಷ್ಮಮ್ಮ ಕೋಂ ಮುನಿಶಾಮಪ್ಪ ಇವರುಗಳು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕೊಳತೂರು ಗ್ರಾಮದ ಸ.ನಂ. 221/4 ರಲ್ಲಿನ 01 ಎಕರೆ ಮತ್ತು ಸ.ನಂ. 274 ರಲ್ಲಿನ 15 ಗುಂಟೆ ವಿಸ್ತೀರ್ಣದ ಜಮೀನುಗಳನ್ನು **"ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆ / ವಸತಿ ಸಮುಚ್ಚಯ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನ / ಮನೆಗಳನ್ನು ಒದಗಿಸಿಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3017/ಅಡ್ವಟೋರ್/2025-26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ

ಅಖಂಡೇಶ್ವರ ಗಂಜ್, ಬೀದರ-ಬೆಂಗಳೂರು ಮುಖ್ಯ ರಸ್ತೆ, ಜೇವರ್ಗಿ-585310 ಜಿಲ್ಲೆ: ಕಲಬುರಗಿ

E-mail: apmcjewargi@gmail.com, apmcjewargi@outlook.com

ಸಂ: ಕೃಮಾಇ:ಕೃಉಮಾಸ:ಜೇ:ಅಭಿವೃದ್ಧಿ:231:2025-26 ದಿನಾಂಕ:26-09-2025

:: ಸಂಕ್ಷಿಪ್ತ ಇ_ಟೆಂಡರ್ ಪ್ರಕಟಣೆ ::

ಸಮಿತಿಯ 2024-25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅಡಿಯಲ್ಲಿ ಮಂಜೂರಾದ ಈ ಕೆಳಕಾಣಿಸಿದ ಅಭಿವೃದ್ಧಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇ_ಟೆಂಡರ್ ವೆಬ್‌ಸೈಟ್ https://kppp.karnataka.gov.in ರಲ್ಲಿ ಸ್ಪರ್ಧಾತ್ಮಕ ಐಟಂವಾರು ಟೆಂಡರ್‌ಗಳನ್ನು Standard Tender Document KW-4 (With Latest Amendments) ಷರತ್ತುಗಳನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಂಖ್ಯೆ: APMC/2025-26/RD/WORK_INDENT719 ಆಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

1) ಬಿಡ್ ಪೂರ್ವಭಾವಿ ಸಭೆ & ಟೆಂಡರ್ ತಕರಾರು ಸಮಜಾಯಸಿ ದಿನಾಂಕ: 24-10-2025 ಮಧ್ಯಾಹ್ನ 12:30 ಗಂಟೆಗೆ 2) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 28-10-2025 ಸಾಯಂಕಾಲ 04:00 ಗಂಟೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 29-10-2025 ಸಾಯಂಕಾಲ 04:30 ಗಂಟೆಗೆ 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 07-11-2025 ಸಾಯಂಕಾಲ 04:30 ಗಂಟೆಗೆ.

ಕಾಮಗಾರಿಯ ಹೆಸರು- ಜೇವರ್ಗಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 4ನೇ ಮುಖ್ಯ ರಸ್ತೆಗೆ ಸಿ.ಸಿ ರಸ್ತೆ, ಚರಂಡಿ & ಕಲ್ವರ್ಟ್ ನಿರ್ಮಿಸುವುದು ಮತ್ತು 1ನೇ ಅಡ್ಡ ರಸ್ತೆಯಿಂದ ಆಡಳಿತ ಕಚೇರಿಗೆ ಸಿ.ಸಿ ಸಂಪರ್ಕ ರಸ್ತೆ ನಿರ್ಮಿಸುವ ಕಾಮಗಾರಿ (GSB ಯನ್ನು ಪರಿಗಣಿಸಿ) Under Action Plan 2024-25. ಟೆಂಡರ್‌ಗಿಟ್ಟ ಮೊತ್ತ-1,52,80,907-58 (Exclusive of GST, Earnet Money Deposit Rs. (1.5%)-2,29,214-30, ಇ_ಪ್ರೊಸೆಸಿಂಗ್ ಫೀ-As per KPPP portal, ಕಾಮಗಾರಿ ಅವಧಿ-5.5Month's (Excluding Mansoon).

ಟೆಂಡರ್ ಪ್ರೊಸೆಸಿಂಗ್ ಫೀ ಇ_ಪೋರ್ಟಲ್‌ನ ನಿಯಮಗಳನ್ವಯ ಇದ್ದು ಟೆಂಡರ್ ಷರತ್ತು ಮತ್ತು ನಿಬಂಧನೆಗಳು ಇ_ಪೋರ್ಟಲ್ನಲ್ಲಿ ಇದ್ದು, ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಚೇರಿ ವೇಳೆಯಲ್ಲಿ ಕಚೇರಿಯಿಂದ ಅಥವಾ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/-ಆಡಳಿತಾಧಿಕಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ | ಸಹಿ/-ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ

ವಾ.ಸಾ.ಸಂ.ಇ/ಕಲಬುರಗಿ/567/ಕೆ.ಎಸ್.ಎಂ.ಸಿ.&ಎ/2025-26

ಸಮಾಚಾರ ಸಣ್ಣದಲ್ಲ

ಕಾರು ಹರಿದು ಇಬ್ಬರು ಗಂಭೀರ ಗಾಯ

ಹಾರೂಗೇರಿ: ಪಂಢರಪುರಕ್ಕೆ ಪಾದಯಾತ್ರೆ ಹೊರಟಿದ್ದ ಭಕ್ತರ ಗುಂಪಿನ ಮೇಲೆ ಕಾರು ಹರಿದ ಪರಿಣಾಮ ಇಬ್ಬರ ಪರಿಸ್ಥಿತಿ ಗಂಭೀರವಾಗಿದೆ. ರಾಯಬಾಗ ತಾಲೂಕಿನ ಹಿಡಕಲ್ ಮೂಲದ ಭಕ್ತರು ಅಥಣಿ ಮಾರ್ಗವಾಗಿ ಪಾದಯಾತ್ರೆ ತೆರಳುತ್ತಿದ್ದರು. ಈ ವೇಳೆ ಕೋಳಿಗುಡ್ಡ ಗ್ರಾಮದ ಸಮೀಪ ಕಾರು ಜೋರಾಗಿ ಬಂದು ಹೊಡೆದಿದ್ದು 6 ಜನ ಯುವಕರು ಅಪಘಾತದಲ್ಲಿ ಸಿಲುಕಿದ್ದಾರೆ. ಹಾರೂಗೇರಿ ಖಾಸಗಿ ಆಸ್ಪತ್ರೆಯಲ್ಲಿ ನಾಲ್ವರು ಚಿಕಿತ್ಸೆ ಪಡೆಯುತ್ತಿದ್ದರೆ ಗಂಭೀರವಾಗಿ ಗಾಯಗೊಂಡ ಇಬ್ಬರನ್ನು ಬೆಳಗಾವಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಹಾರೂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಶಾಂತಾ ಹೆಗಡೆ ನಿಧನ

ಬೆಳಗಾವಿ: ಹಿರಿಯ ಸಾಮಾಜಿಕ ಕಾರ್ಯಕರ್ತೆ, ನಿವೃತ್ತ ಪ್ರಾಚಾರ್ಯ ದಿವಂಗತ ಡಿ.ಎ.ಹೆಗಡೆವರ ಪತ್ನಿ ಶಾಂತಾ ಹೆಗಡೆ ಶುಕ್ರವಾರ ಚನ್ನಮ್ಮ ನಗರದ ಅವರ ನಿವಾಸದಲ್ಲಿ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು. ವಿವಿಧ ಮಹಿಳಾ ಮಂಡಳಗಳನ್ನು ಸ್ಥಾಪಿಸಿ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿದ್ದ ಶಾಂತಾ ಹೆಗಡೆ, 40 ವರ್ಷಗಳ ಹಿಂದೆ ಬೆಳಗಾವಿಯಲ್ಲಿ ಭುವನೇಶ್ವರಿ ಉತ್ಸವ ಆರಂಭಿಸಿ ಇಂದಿಗೂ ವಿಜೃಂಭಣೆಯಿಂದ ಮುನ್ನಡೆಸಿದ್ದರು. ಸುಮಾರು 50 ವರ್ಷಗಳಷ್ಟು ಹಳೆಯದಾದ ವನಿತಾ ವಿಕಾಸ್ ಮಂಡಲದ ಸ್ಥಾಪಕ ಸದಸ್ಯರೂ ಆಗಿದ್ದರು. ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡುತ್ತ, ಹಲವಾರು ಮಹಿಳೆಯರಿಗೆ ಸ್ಫೂರ್ತಿಯಾಗಿದ್ದರು. ಇಬ್ಬರು ಗಂಡು ಮಕ್ಕಳು ಮತ್ತು ಓರ್ವ ಮಗಳನ್ನು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕಾಂಗ್ರೆಸ್ ಸರಕಾರ ನಾಡಿಗೆ ದ್ರೋಹ

ಅಥಣಿ: ರಾಜ್ಯದಲ್ಲಿ ಗ್ಯಾರಂಟಿ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ನಾಡಿನ ಜನರಿಗೆ ಮೋಸ ಮಾಡಿದ್ದಲ್ಲದೆ, ಹಿಂದೂ ಸಂಸ್ಕೃತಿ ಬಗ್ಗೆ ಅರಿವಿಲ್ಲದ ವ್ಯಕ್ತಿಗಳಿಂದ ನಾಡಹಬ್ಬ ದಸರಾವನ್ನು ಉದ್ಘಾಟಿಸಿ ನಾಡಿಗೆ ದ್ರೋಹ ಮಾಡುತ್ತಿದೆ ಎಂದು ಬೆಳಗಾವಿ ಗ್ರಾಮೀಣ ಮತ ಕ್ಷೇತ್ರದ ಮಾಜಿ ಶಾಸಕ ಅಭಯ ಪಾಟೀಲ ಆರೋಪಿಸಿದರು. ಅವರು ಅಥಣಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಅಧಿಕಾರವನ್ನು ಗಟ್ಟಿ ಮಾಡಿಕೊಳ್ಳಲು ನಾಡಿನ ಮತ್ತು ದೇಶದ ಸಂಸ್ಕೃತಿಯನ್ನು, ಸಂಪ್ರದಾಯವನ್ನು ಧಿಕ್ಕರಿಸಿ ಒಂದು ಸಮುದಾಯವನ್ನು ಓಲೈಸುವುದಕ್ಕಾಗಿ ನಾಡಿಗೆ ದ್ರೋಹ ಎಸುಗುವುದು ಶೋಭೆಯಲ್ಲ. ಹಿಂದು ಸಂಸ್ಕೃತಿ, ಸಂಪ್ರದಾಯ ಮಾಹಿತಿ ಇರುವ ವ್ಯಕ್ತಿಗಳಿಂದ ಉದ್ಘಾಟನೆ ಮಾಡಿಸಿದ್ದರೆ ಶೋಭೆ ತರುತ್ತಿತ್ತು ಎಂದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಮಹೇಶ್ ಕುಮಟಳ್ಳಿ, ಅಥಣಿ ಮಂಡಲ ಬಿಜೆಪಿ ಅಧ್ಯಕ್ಷ ಗಿರೀಶ ಬುಟಾಳಿ, ಮುಖಂಡರಾದ ಸಿದ್ದಪ್ಪ ಮುದುಕಣ್ಣವರ, ಉಮೇಶ್ ಬಂಟೋಡಕರ, ಮಲ್ಲಪ್ಪ ಹಂಚಿನಾಳ, ಪ್ರಭಾಕರ ಚೌಹಾಣ, ರಮೇಶ್ ಗೌಡ ಪಾಟೀಲ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಎಲ್ಲ ದಾನಕಿಂತ ರಕ್ತದಾನ ಶ್ರೇಷ್ಠ

ಅಥಣಿ: ದಾನ ನೀಡಿದ ರಕ್ತದಿಂದ ಇನ್ನೊಬ್ಬರ ಜೀವ ಉಳಿಸಲು ಮತ್ತು ಶರೀರದಲ್ಲಿ ಹೊಸ ರಕ್ತ ಉತ್ಪಾದನೆಯಾಗಿ ಆರೋಗ್ಯ ಸುಧಾರಣೆಗೆ ಸಹಕಾರಿಯಾಗಲಿದೆ ಎಂದು ಮಾಜಿ ಶಾಸಕ ಮಹೇಶ್ ಕುಮಟಳ್ಳಿ ಹೇಳಿದರು. ಅವರು ಅಥಣಿ ಪಟ್ಟಣದ ಲೋಕಮಾನ್ಯ ಬಾಲ ಗಂಗಾಧರ ತಿಲಕ್ ಅವರ ಸ್ಮಾರಕ ಮಂದಿರದಲ್ಲಿ ಭಾರತೀಯ ಜನತಾ ಪಕ್ಷದಿಂದ ಪ್ರಧಾನಿ ನರೇಂದ್ರ ಮೋದಿಯವರ 75ನೇ ವರ್ಷದ ಹುಟ್ಟುಹಬ್ಬದ ನಿಮಿತ್ಯ ಆಯೋಜಿಸಲಾಗಿದ್ದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಅನೇಕ ಬಾರಿ ಅಪಘಾತ ಮತ್ತು ಇನ್ನಿತರ ತುರ್ತು ಪರಿಸ್ಥಿತಿಗಳಲ್ಲಿ ಜೀವದಾನ ನೀಡಲು ವರ್ಗದ ಅವಶ್ಯಕತೆ ಇರುತ್ತದೆ. ಪ್ರತಿಯೊಬ್ಬರು ರಕ್ತದಾನ ನೀಡುವ ಮೂಲಕ ಇನ್ನೊಬ್ಬರ ಜೀವದಾನಕ್ಕೆ ಸಹಕಾರ ನೀಡಬೇಕೆಂದು ಕರೆ ನೀಡಿದರು. ಈ ವೇಳೆ ರಮೇಶಗೌಡ ಪಾಟೀಲ,ನಿಂಗಪ್ಪ ಖೋಖಲೆ, ಗಿರೀಶ ಬುಟಾಳಿ,ಸಿದ್ದಪ್ಪ ಮುದಕನ್ನವರ,ಪುಟ್ಟು ಹಿರೇಮಠ, ಪ್ರಭಾಕರ ಚವ್ಹಾನ, ಸಿದ್ದು ಪಾಟೀಲ, ಬಸವರಾಜ ಬಾಳಿಕಾಯಿ, ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಯುವಜನರಿಗಾಗಿ ಉದ್ಯೋಗ ಮೇಳ

ಮೂಡಲಗಿ: ಅನೇಕ ಕೈಗಾರಿಕಾ ಹಾಗೂ ಕಂಪನಿಗಳಲ್ಲಿ ಉದ್ಯೋಗಾವಕಾಶಗಳಿವೆ. ಉದ್ಯೋಗ ಮೇಳ ಉದ್ಯೋಗಾಕಾಂಕ್ಷಿಗಳಿಗೆ ಒಂದು ಮುಖ್ಯ ವೇದಿಕೆಯಾಗಿದ್ದು ಇದರ ಸದುಪಯೋಗ ಪಡಿಸಿಕೊಳ್ಳಬೇಕ ಎಂದು ದಾಲ್ಮಿಯಾ ಸಿಮೆಂಟ್ ಕಂಪನಿಯ ಎಚ್. ಆರ್. ಡಿ. ಹಾಗೂ ಸಂಪನ್ಮೂಲ ವ್ಯವಸ್ಥಾಪಕ ವೀರಸಂಗಯ್ಯ ಬಾಗೋಜಿಮಠ ಹೇಳಿದರು. ಪಟ್ಟಣದ ಚೈತನ್ಯ ಸೋಷಿಯಲ್ ವೆಲ್ಫೇರ ಸೊಸಾ ಯಿಟಿಯ ಚೈತನ್ಯ ಐಟಿಐ ಕೇಂದ್ರದ ಆಶ್ರಯದಲ್ಲಿ ನಿರುದ್ಯೋಗ ಯುವಕ-ಯುವತಿಯರಿಗಾಗಿ ಉದ್ಯೋಗ ಮೇಳ ಆಯೋಜಿಸಿದ ಉದ್ಯೋಗ ಮೇಳ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದ ಅವರು ಎಲ್ಲ ಕಂಪನಿಗಳಲ್ಲಿಯೂ ಕೆಲವು ಸಣ್ಣ ಪುಟ್ಟ ಸಮಸ್ಯೆಗಳಿರುತ್ತವೆ. ಅದಕ್ಕೆ ನಿರಾಶೆಗೊಂಡು ಅರ್ಧಕ್ಕೆ ನೌಕರಿ ಬಿಡದೇ ಅವುಗಳನ್ನು ಎದುರಿಸಿಕೊಂಡು ಸಶಕ್ತ ಉದ್ಯೋಗಿಯಾಗಿ ಜೀವನ ರೂಪಿಸಿಕೊಳ್ಳಬೇಕೆಂದು ಹೇಳಿದರು. ಗೋಕಾಕ ಹಾಗೂ ಮೂಡಲಗಿ ತಾಲೂಕಾ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರಿ ಸಂಘದ ಅಧ್ಯಕ್ಷ ಯಲ್ಲಗೌಡ ಬಿ. ಪಾಟೀಲ, ನ್ಯಾಯವಾದಿಗಳು ಹಾಗೂ ಚೈತನ್ಯ ಸೋಷಿಯಲ್ ವೆಲ್ಫೇರ ಸೊಸಾಯಿಟಿಯ ಅಧ್ಯಕ್ಷ ಉದಯಕುಮಾರ ಜೋಕಿ, ಕರ್ನಾಟಕ ರಾಜ್ಯ ಸಹಕಾರಿ ಪತ್ತಿನ ಮಹಾಮಂಡಳದ ಸದಸ್ಯ ಝೂರೆ, ಚೈತನ್ಯ ಶಾಲೆ ಮತ್ತು ಐಟಿಐ ಸಿಬ್ಬಂದಿ, ವಿದ್ಯಾರ್ಥಿಗಳು, ತರಬೇತಿದಾರರು ಪಾಲ್ಗೊಂಡಿದ್ದರು.

ವಿರಾಮ
ಪ್ರತಿ ಭಾನುವಾರ

ಖರ್ಚು - ವೆಚ್ಚಗಳ ಕುರಿತು ಲೆಕ್ಕಪತ್ರ ಯಾವಾಗ ಬೇಕಾದರೂ ನೀಡುತ್ತೇವೆ! ಎದುರಾಳಿಗಳಿಗೆ ಸವಾಲು

ನಾವು ಲೆಕ್ಕ ತೋರಿಸಲು ಸಿದ್ಧ, ನೀವು ಸಿದ್ಧರಿದಿರಾ:ಬಾಲಚಂದ್ರ

ಹುಕ್ಕೇರಿ: ನಾವು ನಮ್ಮ ಲೆಕ್ಕವನ್ನು ತೋರಿಸಲು ಸಿದ್ಧರಿದ್ದೇವೆ. ನೀವೂ ಕೂಡ ಲೆಕ್ಕವನ್ನು ನೀಡಲು ಸಿದ್ಧರಿರಬೇಕು. ಈ ಚುನಾವಣೆಯೊಳಗೆ ಅಥವಾ ಚುನಾವಣೆ ಮುಗಿದ ಬಳಿಕ ನಾವುಗಳು ಮಾಡಿರುವ ಸಹಕಾರಿ ಸಂಸ್ಥೆಗಳ ಖರ್ಚು-ವೆಚ್ಚಗಳ ಕುರಿತು ಲೆಕ್ಕಪತ್ರ ನೀಡಲು ಯಾವಾಗ ಬೇಕಾದರೂ ನೀಡುತ್ತೇವೆ. ನೀವೂಗಳು ಸಹ ಲೆಕ್ಕಗಳನ್ನು ಸಾರ್ವಜನಿಕರ ಬಳಿ ಮುಂದಿಡುವಂತೆ ರಮೇಶ್ ಕತ್ತಿಗೆ ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಸವಾಲು ಹಾಕಿದರು.

ಗುರುವಾರ ತಾಲೂಕಿನ ಕೊಟಬಾಗಿ ಗ್ರಾಮದಲ್ಲಿ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಚುನಾವಣಾ ಪ್ರಚಾರ ನಿಮಿತ್ತ ಬೆಲ್ಲದ ಬಾಗೇವಾಡಿ- ಎಲಿಮುನೋಳಿ ಜಿ.ಪಂ.ವ್ಯಾಪ್ತಿಯ ಕಾರ್ಯಕರ್ತರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರ ಸೇವೆಗೆ ಮೀಸಲಿಡುವ ಬದಲು ವೈಯಕ್ತಿಕ ಟೀಕೆಗಳನ್ನು ಮಾಡುತ್ತಿರುವುದಕ್ಕೆ ಅವರು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ನೇತೃತ್ವದಲ್ಲಿರುವ ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ 30 ವರ್ಷಗಳ ಅವಧಿಯ ಲೆಕ್ಕ ನೀಡುತ್ತೇವೆ. ನೀವು ಸಂಕೇಶ್ವರ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, 10 ವರ್ಷಗಳ ಬಿಡಿಸಿಸಿ ಬ್ಯಾಂಕಿನ ಲೆಕ್ಕಪತ್ರವನ್ನು ಸಾರ್ವಜನಿಕರ ಮುಂದಿಡಬೇಕು. ನೀವು ಯಾವಾಗ ಹೇಳುತ್ತೀರೋ? ಅವಾಗ ಯಾವುದೇ ಸಮಯದಲ್ಲಿಯೂ ನಮ್ಮ ಕಾರ್ಖಾನೆಗಳ ಲೆಕ್ಕವನ್ನು ಕೊಡುತ್ತೇವೆ. ಇದಕ್ಕೆ ನೀವು ಸಿದ್ಧರಿರಬೇಕು. ಕೇವಲ ಭಾಷಣ ಮಾಡಿದರೆ ಸಾಲದು ಎಂದರು.

ಮತದಾನದ ದಿನದಂದು ಯಾರ ಭಯವಿಲ್ಲದೇ ಮುಕ್ತವಾಗಿ ಬಂದು ಮತದಾನ ಮಾಡಬೇಕು. ಹುಕ್ಕೇರಿ ಭಾಗದಲ್ಲಿ ದಿ. ಅಪ್ಪಣ್ಣಗೌಡ ಪಾಟೀಲರು ರೈತರ ಒಳತಿಗಾಗಿ ಎರಡು ಮುಖ್ಯವಾಗಿರುವ ಸಹಕಾರಿ ಸಂಘ- ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ ಮತ್ತು ಹುಕ್ಕೇರಿ ವಿದ್ಯುತ್ ಸಂಘವನ್ನು ಉಳಿಸಿಕೊಂಡು ಬೆಳೆಸಬೇಕಾದುದ್ದು ನಮ್ಮಗಳ ಕರ್ತವ್ಯವಾಗಿದೆ. ಈ ಮೂಲಕ ರೈತರ ಸೇವೆಯನ್ನು ಮಾಡುವ ಅವಕಾಶವು ನಮಗೆ ದೊರೆತಿದೆ. ನಮ್ಮ ಪ್ಯಾನಲ್‌ಗೆ ಆಶೀರ್ವಾದ ಮಾಡಿದರೆ ರೈತರ ಸೇವೆಗೆ ನಾವು ಬದ್ಧರಾಗಿ ಕೆಲಸವನ್ನು ಮಾಡುತ್ತೇವೆ. ಸಹಕಾರಿ ಸಂಘಗಳನ್ನು ಬೆಳೆಸಿ, ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬುದು ನಮ್ಮ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ, ಮಾಜಿ ಸಚಿವ ಶಶಿಕಾಂತ ನಾಯಿಕ, ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಅಜ್ಜಪ್ಪ ಕಲ್ಲಟ್ಟಿ, ಸಂಗಮ ಕಾರ್ಖಾನೆ ಅಧ್ಯಕ್ಷ ರಾಜೇಂದ್ರ ಪಾಟೀಲ, ಬೆಳಗಾವಿ ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಸುಭಾಸ ಢವಳೇಶ್ವರ, ನಿರ್ದೇಶಕ ರಾಜೇಂದ್ರ ಅಂಕಲಗಿ, ಅಶೋಕ ಪಟ್ಟಣಶೆಟ್ಟಿ, ಬಸಪ್ಪ ಮರಡಿ, ದಿ. ಅಪ್ಪಣ್ಣಗೌಡ ಪಾಟೀಲ ಸಹಕಾರಿ ಪ್ಯಾನಲ್ ಅಭ್ಯರ್ಥಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಚುನಾವಣಾ ಪ್ರಚಾರ ನಿಮಿತ್ತ ಬೆಲ್ಲದ ಬಾಗೇವಾಡಿ- ಎಲಿಮುನೋಳಿ ಜಿಪಂ ವ್ಯಾಪ್ತಿಯ ಕಾರ್ಯಕರ್ತರ ಸಮಾವೇಶ ನಡೆಯಿತು.

ಇನ್ನೂ ಕಾಲ ಮಿಂಚಿಲ್ಲ ನೀವೂ ಬನ್ನಿ, ನಾವೂ ಬರ್ತೀವಿ

ಕಳೆದ 10 ವರ್ಷಗಳಿಂದ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷರಿದ್ದಾಗ ಲೆಕ್ಕವನ್ನು ಕೇಳದ ನೀವುಗಳು, ಈಗ ನಿಮಗೆ ನಾವು ಬೇಡವಾದಾಗ ಲೆಕ್ಕವನ್ನು ಕೇಳುತ್ತಿರುವುದು ಯಾವ ನ್ಯಾಯ. ನಮ್ಮೊಂದಿಗಿದ್ದಾಗ ಆಗಲೇ ಇಂತಹ ಲೆಕ್ಕಗಳನ್ನು ಕೇಳಿದರೆ ಅದಕ್ಕೊಂದು ಅರ್ಥ ಬರುತ್ತಿತ್ತು. ಇನ್ನೂ ಕಾಲ ಮಿಂಚಿಲ್ಲ. ಅದಕ್ಕನೇ ನಾವೂ ಬರ್ತೀವಿ. ನೀವೂ ಬನ್ನಿ. ಎಲ್ಲಿ? ಯಾವ ಸ್ಥಳದಲ್ಲಿ ನಾವಿಬ್ಬರೂ ಸೇರಿ ಲೆಕ್ಕವನ್ನು ಮಾಡೋಣ. ತಪ್ಪುಗಳು ಯಾರದೇ ಇದ್ದರೂ ಅಂತಹವರು ಸಾರ್ವಜನಿಕರು ನೀಡುವ ಶಿಕ್ಷೆಗೆ ಬದ್ಧರಿರಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಸರಕಾರಿ- ಸಹಕಾರಿ ವಲಯಗಳ ಲೆಕ್ಕಗಳನ್ನು ಕೇಳುವ ಹಕ್ಕು ಇದ್ದೇ ಇರುತ್ತದೆ. ಇದನ್ನು ಪ್ರಶ್ನೆ ಮಾಡುವ ಹಕ್ಕು ನಮಗಿಲ್ಲ. ನಮ್ಮ ಸೇವಾವಧಿಯಲ್ಲಿ ನಡೆದಿರುವ ಒಂದೊಂದು ರುಪಾಯಿ ಲೆಕ್ಕವನ್ನು ನೀಡಲು ನಾವು ಯಾವಾಗಲೂ ಸಿದ್ಧರಿದ್ದೇವೆ ಎಂದು ವಿರೋಧಿಗಳನ್ನು ಕುಟುಕಿದರು.

ಚುನಾವಣೆ ನೆಪದಲ್ಲಿ ಮದ್ಯ ಗೋಷ್ಠಿ, ಭರ್ಜರಿ ಬಾಡೂಟ

ಹುಕ್ಕೇರಿ: ತಾಲೂಕಿನ ಜನರಲ್ಲಿ ಸ್ವಾಭಿಮಾನ ಸಂಸ್ಕಾರ, ಆಚಾರ್ಯವಿಚಾರಗಳೊಂದಿಗೆ ಧಾರ್ಮಿಕ ಕಾರ್ಯಕ್ರಗಳ ಆಚರಣೆಗಳು ಮಡಿಯಿಂದ ಮಾಡುತ್ತಾರೆ. ಸಹಕಾರಿ ಸಂಘದ ಚುನಾವಣೆ ನೆಪದಲ್ಲಿ ಜಮೀನುಗಳಲ್ಲಿ ಮತದಾರಿಗೆ ಮದ್ಯ, ಮಾಂಸ ದಡಿಗೆಯ ಬಾಡೂಟಮಾಡಿಸುತಿದ್ದಾರೆ. ನವರಾತ್ರಿ ನಿಮಿತ್ಯವಾಗಿ ಎಲ್ಲರ ಮನೆಗಳಲ್ಲಿ ದೇವರಿಗೆ ದೀಪ ಹಚ್ಚಿದಾರೆ. ಜನರಿಗೆ ಮಧ್ಯ, ಮಾಂಸದೂಟ ಮಾಡಿಸಿದವರನ್ನು ತಾಯಿ ದುರ್ಗಾದೇವಿ ಸರಿಯಾದ ಬುದ್ದಿಕಲಿಸುತ್ತಾಳೆ ಎಂದು ಮಾಜಿ ಸಂಸದ ರಮೇಶ ಕತ್ತಿ ಅವರು ಹೇಳಿದರು.

ಅವರು ತಾಲೂಕಿನ ಶಿರಗಾಂವ, ರಕ್ಷಿ, ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಚುನಾವಣೆಯಲ್ಲಿ ಮಾತನಾಡಿದ ಜಾರಕಿಹೊಳಿ ಸಹೋದರರು ಯುವಕರಿಗೆ ದುಶ್ಚಟಗಳನ್ನು ಕಲಿಸಿ ಸಂಸ್ಕಾರ ಹಾಳು ಮಾಡುವುದರ ಜೊತೆಗೆ ಮನೆಯಲ್ಲಿ ಅಶಾಂತಿ ಹಾಳು ಮಾಡುವುದರೊಂದಿಗೆ ಮಡಿಯಿಂದ ದೀಪಹಾಕಿದ ಮನೆಯಲ್ಲಿ ಜಗಳ ಹಚ್ಚಿ ಸಂಸ್ಕಾರ ಮುರಿಯುತ್ತಿದ್ದಾರೆ. ಇದು ಹೀಗೆ ಮುಂದುವರೆದಲ್ಲಿ ನಮ್ಮ ಯುಕರು ದಾರಿತಪ್ಪಿ ಸಂಸಾರಗಳು ಹಾಳುಗುತ್ತಿವೆ, ನಮ್ಮ ಮಕ್ಕಳು, ಕುಟುಂಬದ ಯಜಮಾನರನ್ನು ತಾಯಿಂದಿರು ಹಿಡಿತದಲ್ಲಿ ಇಟ್ಟುಕೊಳ್ಳಬೇಕು ಎಂದು ಹೇಳಿದರು.

ಮನೆ ಮುರಿಯುವ ಸಂಸ್ಕಾರ ಮುಂದುವರೆದಿದೆ. ಸ್ವಾಮಿಮಾನ ವಿಚಾರ ಸಂಸ್ಕಾರ ಇದೆ. ಮನೆಯಲ್ಲಿ ಮಡಿವಂತೆ ಮಾಡುತ್ತೇವೆ. ಹಿಂತ ಸಂಸರ್ಭದಲ್ಲಿ ಜಮೀನುಗಳಲ್ಲಿ ಮಾಂಸ ಮದ್ಯಸೇವನೆ ಮಾಡಿ ಮತದಾರರಿಗೆ ದಾರಿ ತಪ್ಪಿಸಿ ಸಂಸ್ಕಾರ ಹಾಳು ಮಾಡುವ ಕುಂತಂತ್ರಿಗಳಿಗೆ ಮತದಾರರು ಸರಿಯಾದ ಬುದ್ದಿ ಕಳಿಸಬೇಕಾಗಿದೆ ಎಂದು ರಮೇಶ ಕತ್ತಿ ಹೇಳಿದರು.

ಬಾಡೂಟಕ್ಕಾಗಿ ಮನೆಯ ಸಂಸ್ಕಾರ ಮುರಿಯಬಾರದು

ನಮ್ಮ ಕ್ಷೇತ್ರದಲ್ಲಿ ಶಾಸಕ ಚುನಾವಣೆ, ಸಹಕಾರಿ ಸಂಸ್ಥೆಗಳಲ್ಲಿ ಹಲಾವಾರು ವರ್ಷಗಳಿಂದ ಚುನಾವಣೆ ಜರುಗಿದ್ದರೂ ಕೂಡಾ ಯಾವುದೇ ಮಧ್ಯಸೇವನೆ, ಮಾಂಸ ಬಾಡೂಟ ನೇಡೆದಿಲ್ಲ. ಬೇರೆಯವರ ಜಮೀನದಲ್ಲಿ ಹೋತ, ಕುರಿ ಕೋಳಿ ಜೀವತೆಗೆದುಕೊಂಡು ಬಾಡೂಟಕ್ಕೆ ತಾಲೂಕಿನ ಮತದಾರರು ಮೊರೆಹೋಗಬಾರದು. ನವರಾತ್ರಿ ನಿಮತ್ಯವಾಗಿ ಮನೆಯಲ್ಲಿ ಮಹಿಳೆಯರು, ಪುರಷರು, ಉಪಾಸಮಾಡುವುದರ ಮೂಲಕ ದುರ್ಗಾದೇವಿ ಆರಾಧನೆ ಮಾಡುತ್ತಾರೆ. ಬಾಡೂಟಕ್ಕಾಗಿ ಮನೆಯಲ್ಲಿರುವ ಸಂಸ್ಕಾರ ಮುರಿಯಬಾರದು ಎಂದು ವಿನಂತಿಸಿದರು.



ನಮ್ಮ ಪ್ಯಾನೆಲ್ ಬಗ್ಗೆ ಸಂಶಯ ಬೇಡ

ಬೆಳಗಾವಿ: ನಮ್ಮ ಪ್ಯಾನೆಲ್‌ನ ಎಲ್ಲ 15 ಅಭ್ಯರ್ಥಿಗಳೂ ಅತ್ಯಂತ ಪ್ರಾಮಾಣಿಕತೆ ಯಿಂದ ಮಲಪ್ರಭಾ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಪಣತೊಟ್ಟಿದ್ದೇವೆ. ಈ ಬಗ್ಗೆ ಯಾರಿಗೂ ಸಂಶಯ ಬೇಡ. ಅಪಪ್ರ ಚಾರಗಳಿಗೆ ಕಿವಿಗೊಡಬೇಡಿ ಎಂದು ವಿಧಾನಪ ರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹೇಳಿದರು.

ಎಂ.ಕೆ.ಹುಬ್ಬಳ್ಳಿಯ ಮಲಪ್ರಭಾ (ರಾಣಿ ಶುಗರ್ಸ್) ಸಕ್ಕರೆ ಕಾರ್ಖಾನೆಯ ಚುನಾವಣೆಯ ಹಿನ್ನೆಲೆಯಲ್ಲಿ ಶುಕ್ರವಾರ ಖಾನಾಪುರ ತಾಲೂಕಿನ ಹಿರೇಮುನವಳ್ಳಿ, ತೋಲಗಿ, ಚಾಪಗಾಂವ್ ಗ್ರಾಮಗಳಲ್ಲಿ ಪ್ಯಾನಲ್ ನ ಸರ್ವ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ ಚನ್ನರಾಜ, ಶ್ರೀ ಮಲಪ್ರಭಾ ಸಹಕಾರಿ ಕಾರ್ಖಾನೆಯ ಪುನಶ್ಚೇತನ ರೈತರ ಪ್ಯಾನಲ್‌ನ್ನು ಬೆಂಬಲಿಸುವಂತೆ ಕಾರ್ಖಾನೆಯ ಷೇರುದಾರರಲ್ಲಿ ವಿನಂತಿಸಿದರು.

ನಮ್ಮಲ್ಲಿ ಯಾವುದೇ ಸ್ವಾರ್ಥವಿಲ್ಲ. ರೈತರು ಹಾಗೂ ಕಾರ್ಮಿಕರ ಹಿತವೇ ನಮ್ಮ ಉದ್ದೇಶ. ಕಾರ್ಖಾನೆ ಮತ್ತೆ ಮೊದಲಿನಂತೆ ಉಚ್ಛ್ರಾಯ ಸ್ಥಿತಿ ತಲುಪಬೇಕು. ರೈತರಿಗೆ ಸರಿಯಾದ ಸಮಯಕ್ಕೆ ಬಿಲ್ ಪಾವತಿಯಾಗಬೇಕು. ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ಸಂಬಳ ಸಿಗಬೇಕು. ಕಬ್ಬು ನುರಿಸುವ ಸಾಮರ್ಥ್ಯ ಹೆಚ್ಚಿಸಬೇಕು. ಈ ಬಗ್ಗೆ ಎಲ್ಲ ರೀತಿಯಿಂದಲೂ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದರು. ಈ ವೇಳೆ ಖಾನಾಪುರ ಶಾಸಕರಾದ ವಿಠ್ಠಲ ಹಲಗೇಕರ್, ಸ್ಥಳೀಯ ಮುಖಂಡರು, ಪ್ಯಾನಲ್ ಅಭ್ಯರ್ಥಿಗಳು ಉಪಸ್ಥಿತರಿದ್ದರು.

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಚುನಾವಣೆ 28ಕ್ಕೆ

ಹುಕ್ಕೇರಿ: ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಚುನಾವಣೆ 28 ರಂದು ಬೆಳ್ಳಿಗೆ.9ರಿಂದ 4 ಗಂ. ವರೆಗೆ ಜರುಗಲಿದ್ದು ಚುನಾವಣೆ ಬೇಕಾಗುವ ಎಲ್ಲ ಸಕಲ ಸಿದ್ದತೆಯನ್ನು ಮಾಡಿಕೊಳ್ಳಲಾಗಿದೆ ಎಂದು ಚುನಾವಣೆ ಸುಭಾಶ ಸಂಪಗಾಂವಿ ಅಧಿಕಾರಿಗಳು ಹೇಳಿದರು.

ಅವರು ಹುಕ್ಕೇರಿ ಸಹಕಾರಿ ವಿದ್ಯುತ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವಿದ್ಯುತ್ ಸಹಕಾರಿ ಸಂಘಕ್ಕೆ 15 ಸ್ಥಾನಗಳಿಗೆ ಚುನಾವಣೆ ಜರುಗಲಿದ್ದು ಅದರಲ್ಲಿ ಸಾಮಾನ್ಯ 9 ಮಹಿಳಾ ಸ್ಥಾನ 2 ಹಿಂದುಳಿದ ''ಅ'' ವರ್ಗದ 1 ಹಿಂದುಳಿದ ''ಬ'' ವರ್ಗದ 1 ಪಂ.ಜಾ. ಮಿಸಲು 1 ಪಂ. ಪಂಗಡ ಮೀಸಲು 1 ಸ್ಥಾನಕ್ಕೆ ಚುನಾವಣೆ ಜರುಗಲಿದೆ.

ಸುಸುಜೀತವಾಗಿ ಚುನಾವಣೆ ಜರುಗಿಸುವದಕ್ಕಾಗಿ ಪಟ್ಟಣದ ಎಸ್.ಹೈಸ್ಕೂಲ, ಶಿಕ್ಷಣ ಸಂಸ್ಥೆ 122 ಮಮತಟ್ಟೆಗಳು ಸಂಕೇಶ್ವರ ರಸ್ತೆಗೆ ಹೊಂದಿಕೊಂಡಿರುವ ಬಾಪೂಜಿ ಶಿಕ್ಷಣ ಸಂಸ್ಥೆ 2 ಕೇಂದ್ರಗಳಲ್ಲಿ ಚುನಾವಣೆ ಜರುಗಲಿದೆ. ಬಾಪೂಜಿ ಶಿಕ್ಷಣ ಸಂಸ್ಥೆಯಲ್ಲಿ 1 ರಿಂದ 67 ಮತಗಟ್ಟೆ, ಎಸ್.ಹೈಸ್ಕೂಲ, ಶಿಕ್ಷಣ ಸಂಸ್ಥೆ 68 ರಿಂದ 122 ಮತಗಟ್ಟೆ ಸಿದ್ದಪಡಿಸಲಾಗಿದೆ. ಬಾಪೂಜಿ ಶಿಕ್ಷಣ ಸಂಸ್ಥೆಯಲ್ಲಿ ಮತಗಟ್ಟೆಯಲ್ಲಿ 32964 ಹಾಗೂ ಎಸ್.ಹೈಸ್ಕೂಲ್, ಶಿಕ್ಷಣ ಸಂಸ್ಥೆ ಮರಗಟ್ಟೆಯಲ್ಲಿ 27082 ಮತದಾರರು ಸೇರಿದಂತೆ ಒಟ್ಟು 60046 ಮತದಾರರು ಮತಚಲಾಯಿಸಲಿದ್ದಾರೆ.

ಎರಡು ಕೇಂದ್ರಗಳ ಮತಗಟ್ಟೆಯಲ್ಲಿ 812 ಚುನಾವಣೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. 6 ವಿಶೇಷ ಮತಕೇಂದ್ರ ನಿರ್ಮಿಸಿ ಅವುಗಳಿಗೆ ಪ್ರತ್ಯೇಕವಾದ ಬಣ್ಣ ವಿಶೇಷ ಬಣ್ಣಗಳಿಂದ ನಿರ್ಮಿಸಲಾಗಿದೆ. ವಿದ್ಯುತ್ ಸಹಕಾರಿ ಚುನಾವಣೆಯಲ್ಲಿ ಶೇ. 100.ರಷ್ಟು ಮತದಾನವಾಗಬೇಕು ಎಂಬ ಹಿನ್ನೆಯಲ್ಲಿ ಮತದಾರರ ಮನೆಗಳಿಗೆ ಗುರುತಿನ ಚೀಟಿ ಹಾಗೂ ತಮ್ಮ ಮತ ಯಾವ ಕೇಂದ್ರದಲ್ಲಿ ಬರುತ್ತದೆ ಎಂದು ತಿಳವಳಿಕೆ ನೀಡಲಾಗಿದ್ದು ಎರಡು ಮತಗಗಟ್ಟೆ ಗೊಂದಲ ಆಗದಂತೆ ಮತದಾರರಿಗೆ ತಿಳುವಳಿಕೆ ನೀಡಲು ಚುನಾವಣೆ ನಿಯೋಜಿತ ಸಿಬ್ಬಂದಿಯನ್ನು ನೇಮಿಸಲಾಗಿದೆ.

ಹುಕ್ಕೇರಿ ಸಹಕಾರಿ ವಿದ್ಯುತ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಸಂಕೇಶ್ವರ ಶಾಲೆಯಲ್ಲಿ ಮತ ಎಣಿಕೆ

ಚುನಾವಣೆಯ ನಿಯಮಾವಳಿಯಂತೆ ಮತಗಟ್ಟೆ ಕೇಂದ್ರಗಳಲ್ಲಿ ಶುದ್ದ ಗಾಳಿ, ನೀರಿನ ವ್ಯವಸ್ಥೆ. ಆಸ್ಪತ್ರೆ, ಅಂಗವಿಕಲರಿಗೆ ಸಹಾಯಕ್ಕಾಗಿ ತ್ರೀಚಕ್ರ ಟ್ರಾಲಿ, ವ್ಯವಸ್ಥೆ ಮಾಡಲಾಗಿದೆ. ಸಂಜೆ 5 ರಿಂದ ಸಂಕೇಶ್ವರ ಬಾಪೂಜಿ ಶಿಕ್ಷಣ ಸಂಸ್ಥೆಯಲ್ಲಿ 122 ಮತಗಟ್ಟೆಯ ಮತ ಎಣಿಕೆ ನಡೆಯಲಿದ್ದು. ಅದಕ್ಕಾಗಿ ಮತಗಟ್ಟೆ ಸುಪ್ರವಾಯಸರ್. 1 ಹಾಗೂ 2 ಸಹಾಯಕ ಸೇರಿದಂತೆ 366 ಸಿಬ್ಬಂದ್ದಿ ಜೊತೆಗೆ 14 ಸಿಬ್ಬಂದಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲಿದ್ದು ಇದಕ್ಕಾಗಿ ಬೇಕಾಗುವ ಡಿವಾಯ್ ಎಸ್ಪಿ ಅವರ ನೇತ್ವದಲ್ಲಿ ಪೊಲೀಸ್ ಸಿಬ್ಬಂದಿನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ಸಮಾಜ ಸೇವೆಯೇ ಎನ್‌ಎಸ್‌ಎಸ್ ಗುರಿ

ಮೂಡಲಗಿ: ಶಿಕ್ಷಣದೊಂದಿಗೆ ಸೇವೆ ಮತ್ತು ಶಿಕ್ಷಣದೊಂದಿಗೆ ವ್ಯಕ್ತಿತ್ವ ವಿಕಸನ ಎಂಬ ಧ್ಯೇಯದೊಂದಿಗೆ ಗಾಂಧೀಜಿಯವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ 1969 ರಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಪ್ರಾರಂಭಗೊಂಡಿದೆ ಎಂದು ಗೋಕಾಕ ಜೆ.ಎಸ್.ಎಸ್. ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ. ರಾಜಶೇಖರ ಗುಣಕಿ ಹೇಳಿದರು.

ಅವರು ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ, ಕ್ರೀಡಾ ವಿಭಾಗ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಸಹಯೋಗದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಎನ್.ಎಸ್.ಎಸ್. ಸಂಸ್ಥಾಪನಾ ದಿನಾಚರಣೆ ಹಾಗೂ 6ನೇ ರಾಷ್ಟ್ರೀಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದ ಯೋಗ ಪಟುಗಳಿಗೆ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯು ಸಮುದಾಯದ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ, ಸಾಮಾಜಿಕ ಮತ್ತು ನಾಗರಿಕ ಜವಾಬ್ದಾರಿಗಳನ್ನು ಬೆಳೆಸಲು, ನಾಯಕತ್ವ ಮತ್ತು ಶ್ರಮದ ಮಹತ್ವ ಅರಿಯಲು ಹಾಗೂ ರಾಷ್ಟ್ರೀಯ ಏಕತೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಲು ಸಹಕಾರಿಯಾದೆ ಎಂದು ಅಭಿಪ್ರಾಯ ಪಟ್ಟರು.

ಯೋಗ ಶಿಕ್ಷಕ ಬಸಪ್ಪ ಬಡವಣ್ಣಿ ಮಾತನಾಡಿ, ಶರೀರದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳು ಯೋಗ, ಸಮಾಜದ ಸ್ವಾಸ್ಥ್ಯ ಕಾಪಾಡಲು ಎನ್ನೆಸ್ಸೆಸ್ ಅವಶ್ಯಕವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕ ಡಾ. ಎಂ.ಬಿ. ಕುಲಮೂರ, ಕ್ರೀಡಾ ಕಾರ್ಯದರ್ಶಿ ಬಿ.ಬಿ. ವಾಲಿ, ದೈಹಿಕ ನಿರ್ದೇಶಕ ಬಿ.ಕೆ. ಸೊಂಟನವರ, ವಿದ್ಯಾರ್ಥಿ ಒಕ್ಕೂಟ ಕಾರ್ಯದರ್ಶಿ ಡಿ.ಎಸ್. ಹುಗ್ಗಿ, ವಿ.ವಾಯ್. ಕಾಳೆ, ಆರ್.ಎಸ್. ಪಂಡಿತ, ವಿ.ಪಿ. ಕೆಳಗಡೆ, ಎಂ.ಎನ್. ಮುರಗೋಡ, ಬಿ.ಸಿ. ಮಾಳಿ, ಸಂತೋಷ ಬಂಡಿ, ಎ.ಎಸ್. ಮೀಶಿನಾಯಿಕ, ಎಂ.ಆರ್. ಕರಗಣ್ಣಿ, ಎಂ.ಬಿ. ಜಾಲಗಾರ ಉಪಸ್ಥಿತರಿದ್ದರು.

ಮೂಡಲಗಿ ಕಲ್ಲೋಳಿಯ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರುಗಿದ ಎನ್.ಎಸ್.ಎಸ್. ಸಂಸ್ಥಾಪನಾ ದಿನಾಚರಣೆಯಲ್ಲಿ ಡಾ. ರಾಜಶೇಖರ ಗುಣಕಿ ಮಾತನಾಡಿದರು.

ವಿದ್ಯಾರ್ಥಿಗಳು ಸದ್ಗುಣಗಳನ್ನು ಮೈಗೂಡಿಸಿಕೊಂಡು ಸಮಾಜ ಮತ್ತು ರಾಷ್ಟ್ರದ ಬೆಳವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಸಾಧನೆಗೆ ಸಂಸ್ಥೆಯು ಸಂಪೂರ್ಣ ಬೆಂಬಲ ಮತ್ತು ಸಹಾಯವನ್ನು ನೀಡುತ್ತದೆ.
-ಬಸಗೌಡ ಪಾಟೀಲ, ಅಧ್ಯಕ್ಷ

ಜಾತಿ ಗಣತಿ: ಲಿಂಗಾಯತ ಬರೆಸಿ

ರಾಮದುರ್ಗ: 128ಕ್ಕೂ ಹೆಚ್ಚು ಕಾಯಕ ಆಧಾರಿತ ಉಪ ಪಂಗಡಗಳನ್ನು ಹೊಂದಿದ ಲಿಂಗಾಯತ ಧರ್ಮದ ಮಾನ್ಯತೆಗೆ ಹಲವು ವರ್ಷಗಳಿಂದ ಹೋರಾಟ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರಕಾರ ಕೈಗೊಂಡ ಜಾತಿ ಸಮೀಕ್ಷೆಯ ಕಾಲಂ 11ರ ಇತರೆಯಲ್ಲಿ ಲಿಂಗಾಯತ ಧರ್ಮ ಎಂದೇ ಬರೆಯಿಸುವಂತೆ ಜಾಗತಿಕ ಲಿಂಗಾಯತ ಮಹಾಸಭಾದ ಹಿರಿಯ ಮುಖಂಡ ಡಾ.ವೈ.ಬಿ. ಕುಲಗೋಡ ಹೇಳಿದರು.

ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ಶುಕ್ರವಾರ ಜಾಗತಿಕ ಲಿಂಗಾಯತ ಮಹಾಸಭಾ ನೇತೃತ್ವದ್ದಲ್ಲಿ ಏರ್ಪಡಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗಾಯಿತ ಧರ್ಮ ಮಾನ್ಯತೆಗೆ ರಾಜ್ಯ ಸರಕಾರ ನಡೆಸುತ್ತಿರುವ ಗಣತಿ ಕಾರ್ಯದಲ್ಲಿ ಲಿಂಗಾಯತ ಧರ್ಮದ ಬರೆಯಿಸಿದಲ್ಲಿ ಮತ್ತಷ್ಟು ಧರ್ಮ ಹೋರಾಟಕ್ಕೆ ಮತ್ತಷ್ಟು ಬಲ ಬರಲಿದೆ. ರಾಜ್ಯ ಸರಕಾರದ ಸಮೀಕ್ಷೆಯಲ್ಲಿ ಲಿಂಗಾಯತ ಧರ್ಮದ ಎಲ್ಲ ಒಳ ಪಂಗಡಗಳು ಧರ್ಮದ ಕಾಲಂನಲ್ಲಿ ಲಿಂಗಾಯಿತ ಎಂದು, ಜಾತಿ ಕಾಲಂನಲ್ಲಿ ತಮ್ಮ ವೃತ್ತಿ ಆಧಾರಿತ ಜಾತಿ ಬರೆಸುವಂತೆ ಮನವಿ ಮಾಡಿದರು. ಲಿಂಗಾಯತ ಧರ್ಮದಲ್ಲಿರುವ ಎಲ್ಲ ಒಳಪಂಗಡಗಳ ಜನತೆ ಗೊಂದಲಕ್ಕೆ ಒಳಗಾಗದೆ ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದು ಬರೆಸಿ, ಲಿಂಗಾಯತ ಧರ್ಮ ಹೋರಾಟಕ್ಕೆ ಸ್ಫೂರ್ತಿ ನೀಡಿ, ಸರ್ವರೂ ಧರ್ಮದ ವಿಚಾರದಲ್ಲಿ ಒಗ್ಗಟ್ಟು ಪ್ರದರ್ಶಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ತಾಲೂಕಾಧ್ಯಕ್ಷ ಜಿ.ವ್ಹಿ. ನಾಡಗೌಡ್ರ, ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಎಂ. ಸಕ್ರಿ, ಮಹಿಳಾ ಘಟಕದ ಅಧ್ಯಕ್ಷೆ ಗೀತಾ ಆರಿಬೆಂಚಿ, ಕಾರ್ಯದರ್ಶಿ ಮಂಜುಳಾ ಮುಳ್ಳೂರ, ಮುಖಂಡರಾದ ಬಿ.ಆರ್. ದೊಡಮನಿ, ನ್ಯಾಯವಾದಿ ಆರ್.ಜಿ ವಜ್ಜರಮಟ್ಟಿ ಸೇರಿದಂತೆ ಇತರರಿದ್ದರು.

ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಡಾ.ವೈ.ಬಿ. ಕುಲಗೋಡ ಮಾತನಾಡಿದರು.

ಪೌಷ್ಟಿಕ ಆಹಾರ ಪದ್ಧತಿಯಿಂದ ಆರೋಗ್ಯ ವೃದ್ಧಿ

ರಾಮದುರ್ಗ: ಗರ್ಭಿಣಿ-ಬಾಣಂತಿಯರ, ಚಿಕ್ಕ ಮಕ್ಕಳ ಆರೋಗ್ಯ ರಕ್ಷಣೆಗೆ ವಿವಿಧ ಯೋಜನೆಗಳನ್ನು ಜಾರಿಗೊಳಿಸಿ, ಸರಕಾರ ಸಾಕಷ್ಟು ವೆಚ್ಚ ಮಾಡುತ್ತಿದೆ. ಜನತೆ ಅವುಗಳ ಸದ್ಬಳಕೆ ಮಾಡಿಕೊಂಡು ಪೌಷ್ಠಿಕ ಆಹಾರ ಸೇವನೆ ಮಾಡುವ ಮೂಲಕ ಆರೋಗ್ಯ ವೃದ್ಧಿಸಿಕೊಳ್ಳಬೇಕು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಂಕರ ಕುಂಬಾರ ಹೇಳಿದರು.

ತಾಲೂಕಿನ ಸಾಲಾಪೂರ ಗ್ರಾಮದಲ್ಲಿ ಏರ್ಪಡಿಸಿದ ಹೊಸಕೋಟಿ ವಲಯ ಮಟ್ಟದ ಪೋಷಣ ಮಾಸ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಪೌಷ್ಠಿಕ ಆಹಾರದಿಂದ ರಕ್ತ ಹೀನತೆ ತಡೆಗಟ್ಟುವ ಜೊತೆಗೆ ಶಾರೀರಿಕ ಹಾಗೂ ಮಾನಸಿಕ ಸದೃಢತೆ ಸಾಧಿಸಲು ಸಾಧ್ಯವಾಗುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಇಲಾಖೆಯ ಕಾರ್ಯಕರ್ತರು ಜನತೆಗೆ ಸಕಲ ಸೌಲಭ್ಯಗಳು ದೊರೆಯುವಂತೆ ಮಾಡಿ, ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ 6 ತಿಂಗಳು ತುಂಬು ಗರ್ಭಿಣಿಯರಿಗೆ ಸೀಮಂತ, ಮಕ್ಕಳಿಗೆ ಅನ್ನಪ್ರಾಶನ್ ಮಾಡಲಾಯಿತು. ಅಂಗನವಾಡಿ ಮಕ್ಕಳಿಂದ ವೇಷಭೂಷನ ಸ್ಪರ್ಧೆ ಸೇರಿದಂತೆ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿತ್ತು.

ಸಾಲಾಪೂರ ಗ್ರಾ.ಪಂ ಅಧ್ಯಕ್ಷ ಲಾಲಪ್ಪ ಲಮಾಣಿ, ಸದಸ್ಯರಾದ ದುಂಡಪ್ಪ ದೇವರಡ್ಡಿ, ಅನೀಲ ಚಾಕಲಬ್ಬಿ, ಆನಂದ ಕ್ವಾರಿ, ಕೃಷ್ಣಿ ಬಂಡಿವಡ್ಡರ, ನಿಂಗಪ್ಪ ಅವರಾದಿ, ಯಲ್ಲವ್ವ ಯರಗಟ್ಟಿ, ರುಕ್ಮವ್ವ ಸುಣಗದ, ಲಕ್ಷ್ಮೀ ಮೈಮನ್ನವರ, ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ ವಿಠ್ಠಲ ಸಜ್ಜನ, ಜಯಶ್ರೀ ಚಚಡಿ, ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು ಸೇರಿದಂತೆ ಇತರರಿದ್ದರು. ಎ.ಎಸ್. ಗಾಣಗಿ ಕಾರ್ಯಕ್ರಮ ನಿರೂಪಿಸಿದರು. ಮೇಲ್ವಿಚಾರಕಿ ಮುಕ್ತಾ ಜಂಬಾಳೆ ವಂದಿಸಿದರು.

ತಾಲೂಕಿನ ಸಾಲಾಪೂರ ಗ್ರಾಮದಲ್ಲಿ ಏರ್ಪಡಿಸಿದ ಹೊಸಕೋಟಿ ವಲಯದ ಪೋಷಣ ಮಾಸ ಅಭಿಯಾನ ಕಾರ್ಯಕ್ರಮವನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಂಕರ ಕುಂಬಾರ ಉದ್ಘಾಟಿಸಿದರು.

ಭೈರಪ್ಪನವರಿಗೆ ಸಾಹಿತ್ಯ ಪರಿಷತ್ತಿನ ನುಡಿ ನಮನ

ಬೈಲಹೊಂಗಲ: ಪಟ್ಟಣದ ತಾಲೂಕು ಪಂಚಾಯತಿಯ ಸಭಾಭವನದಲ್ಲಿ ನಮ್ಮನ್ನಗಲಿದ ನಾಡಿನ ಖ್ಯಾತ ಸಾಹಿತಿಗಳಾದ ಪದ್ಮಶ್ರೀ, ಪದ್ಮಭೂಷಣ ಡಾ. ಎಸ್.ಎಲ್.ಭೈರಪ್ಪ ಅವರಿಗೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಭಾವಪೂರ್ಣ ನುಡಿನಮನ ಸಲ್ಲಿಸಲಾಯಿತು.

ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಂಜೀವ ಜುನ್ನೂರ ಮಾತನಾಡಿ ನಾಡಿನ ಶ್ರೇಷ್ಠ ಸಾಹಿತಿಗಳಾದ ಭೈರಪ್ಪ ಅವರನ್ನು ಕಳೆದುಕೊಂಡಿದ್ದು ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು. ಬದುಕಿನಲ್ಲಿ ಸಾಕಷ್ಟು ನೋವುಗಳನ್ನು ಉಂಡು, ಸಂಕಷ್ಟಗಳನ್ನು ಎದುರಿಸಿ ಬೆಳೆದ ಭೈರಪ್ಪನವರ ಸಾಧನೆ ಹೆಮ್ಮೆಪಡುವಂತದ್ದು ಎಂದು ಅವರು ಅಭಿಪ್ರಾಯಪಟ್ಟರು.

ನುಡಿನಮನದಲ್ಲಿ ಕಸಾಪ ಗೌರವ ಕಾರ್ಯದರ್ಶಿಗಳಾದ ಮಂಜುಳಾ ಶೆಟ್ಟರ, ಗೌರವ ಕೋಶಾಧ್ಯಕ್ಷರಾದ ಮಹೇಶ ಕೋಟಗಿ, ಕಾರ್ಯಕಾರಿ ಸಮಿತಿ ಸದಸ್ಯರಾದ ರಂಗಕರ್ಮಿ ದುಂಡಪ್ಪ ಗರಗದ, ಸೋಮೇಶ್ವರ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾದ ಶ್ರೀಶೈಲ ಶರಣಪ್ಪನವರ, ಕನ್ನಡ ಜಾನಪದ ಪರಿಷತ್ತಿನ ತಾಲೂಕಾಧ್ಯಕ್ಷರಾದ ಚಂದ್ರಶೇಖರ ಕೊಪ್ಪದ, ಶಿಕ್ಷಣ ತಜ್ಞರಾದ ಎಸ್.ಎಲ್. ನಾಗನೂರ, ಕವಯಿತ್ರಿ ಸಾವಿತ್ರಿ ಹೊತ್ತಿಗಿಮಠ, ಕವಿ ಪ್ರಕಾಶ ಮರಿತಮ್ಮನವರ, ಉಡಿಕೇರಿ ಗ್ರಾಪಂ ಪಿಡಿಒ ಆಸೀಫ್ ಲತೀಫ್, ಮುರ್ಕಿಬಾವಿ ಗ್ರಾಪಂ ಪಿಡಿಒ ಶಕುಂತಲಾ ಮರಕುಂಬಿ, ತಾಪಂ ಸಿಬ್ಬಂದಿಗಳಾದ ರಮೇಶ ಮುನೆನ್ನಿ, ಪವನಕುಮಾರ ತುರಮರಿ ಇದ್ದರು.

ಪಟ್ಟಣದ ತಾಲೂಕು ಪಂಚಾಯತಿಯ ಸಭಾಭವನದಲ್ಲಿ ಡಾ. ಎಸ್.ಎಲ್.ಭೈರಪ್ಪ ಅವರಿಗೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಭಾವಪೂರ್ಣ ನುಡಿನಮನ ಸಲ್ಲಿಸಲಾಯಿತು.

ಭೈರಪ್ಪನವರು ಸಾಹಿತ್ಯದ ಜೊತೆಗೆ ತತ್ವಶಾಸ್ತ್ರ, ಸಂಗೀತದ ಮೇಲೂ ವಿಶೇಷ ಒಲವು ಹೊಂದಿದವರಾಗಿದ್ದು ಅವರ ಕೃತಿಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿರುವುದು ಕನ್ನಡಿಗರಾದ ನಮಗೆಲ್ಲ ಅಭಿಮಾನದ ಸಂಗತಿ.
-ಜಿ.ಕೆ ಗಾಂವಕರ, ಕೆ.ಆರ್.ಸಿ ಶಿಕ್ಷಣ ಸಂಸ್ಥೆಯ ಕಾಲೇಜಿನ ನಿವೃತ್ತ ಪ್ರಾಚಾರ್ಯ

ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪಠ್ಯಪುಸ್ತಕದಲ್ಲಿ ಭೈರಪ್ಪನವರ ಮೇರು ವ್ಯಕ್ತಿತ್ವವನ್ನು ಮಕ್ಕಳು ಓದುವಂತಾಗಬೇಕು ಮತ್ತು ಅವರ ಮೌಲಿಕ ಕೃತಿಗಳು ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯಗಳಾಗಬೇಕು.
-ಮೋಹನ ಬಸನಗೌಡ ಪಾಟೀಲ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ವಿಶ್ವ ಪ್ರವಾಸೋದ್ಯಮ ದಿನಾಚರಣೆ ನಾಳೆ

ಬಾಗಲಕೋಟೆ: ಜಿಲ್ಲಾಡಳಿತ, ಜಿಪಂ ಮತ್ತು ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ 2025 ಅನ್ನು ಸೆ.27ರಂದು ಐಹೊಳೆಯ ದುರ್ಗಾ ದೇವಾಲಯದ ಆವರಣದಲ್ಲಿ ಆಯೋಜಿಸಲಾಗಿದೆ. ಬೆಳಗ್ಗೆ 10.30ಕ್ಕೆ ನಡೆಯುವ ಈ ಕಾರ್ಯಕ್ರಮವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಅವರು ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರು ಉಪಸ್ಥಿತರಿರುವರು. ಬಾಗಲಕೋಟೆ ಶಾಸಕರು ಎಚ್.ವೈ. ಮೇಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಸಮಸ್ತ ಜನಪ್ರತಿನಿಧಿಗಳು ಮತ್ತು ಹಿರಿಯ ಅಧಿಕಾರಿಗಳು ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಲವೆಡೆ ವಿದ್ಯುತ್ ವ್ಯತ್ಯಯ ನಾಳೆ

ಬಾಗಲಕೋಟೆ: 110 ಕೆ.ವಿ ಕೆರೂರ ವಿವಿ ಕೇಂದ್ರದಿಂದ ಸರಬರಾಜುವಾಗುವ 11 ಕೆವಿ ಎಚ್.ಟಿ ಮಾರ್ಗಗಳ ವ್ಯಾಪ್ತಿಯಲ್ಲಿ ವಾಹಕಗಳ ಮರುಜೋಡನೆಯ ಕಾಮಗಾರಿ ಕೈಗೊಳ್ಳುವ ಪ್ರಯುಕ್ತ ಸೆಪ್ಟೆಂಬರ್ 28ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಬೆಳಗಂಟಿ, ಕೆರೂರು, ಉಗಲವಾಟ, ಹಳಗೇರಿ, ಮುಸ್ತಿಮುಸ್ತಿಗೇರಿ ಮಾರ್ಗಗಳ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಪ್ರಕಟಣೆ ತಿಳಿಸಿದೆ.

ದೇಸಿ ಸನ್ಮಾನ ಪ್ರಶಸ್ತಿಗೆ ಪ್ರೊ. ಪೋತೆ ಆಯ್ಕೆ

ಸಿಂದಗಿ: ಪಟ್ಟಣದ ನೆಲೆ ಪ್ರಕಾಶನ ಸಂಸ್ಥೆಯ ಎಂ.ಎಂ.ಪಡಶೆಟ್ಟಿ ಸಾಂಸ್ಕೃತಿಕ ಪ್ರತಿಷ್ಠಾನವು ಜಾನಪದ ವಿದ್ವಾಂಸರಿಗೆ ಕೊಡಮಾಡುವ ರಾಜ್ಯಮಟ್ಟದ ದೇಸಿ ಸನ್ಮಾನ ಪ್ರಶಸ್ತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ.ಪೋತೆ ಅವರಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು 11ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಇದರ ಜತೆಗೆ ಪ್ರಶಸ್ತಿ ಪುರಸ್ಕೃರ ಸಾಹಿತ್ಯ ಸಾಧನೆ ಕುರಿತು ಕಿರು ಗ್ರಂಥ ಪ್ರಟಕಣೆ ಮಾಡಲಾಗುವುದು ಎಂದು ಪ್ರತಿಷ್ಠಾನದ ಸಂಚಾಲಕ ಡಾ.ಚನ್ನಪ್ಪ ಕಟ್ಟಿ ತಿಳಸಿದ್ದಾರೆ.

ದೌರ್ಜನ್ಯ ಪ್ರಕರಣದಡಿ 44.25 ಲಕ್ಷ ಪರಿಹಾರ

ಬಾಗಲಕೋಟೆ: ಪ್ರಸಕ್ತ ಸಾಲಿನ ಆಗಸ್ಟ ಅಂತ್ಯಕ್ಕೆ 30 ದೌರ್ಜನ್ಯ ಪ್ರಕರಣಗಳ ಪೈಕಿ 26 ಪ್ರಕರಣಗಳಿಗೆ ಒಟ್ಟು 44.25 ಲಕ್ಷ ರು.ಗಳ ಪರಿಹಾರಧನ ವಿತರಣೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು. ಇಲ್ಲಿನ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಜಾಗೃತಿ ನಿಯಂತ್ರಣ ಹಾಗೂ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿಗೆ ಒಟ್ಟು 104 ಲಕ್ಷ ರು.ಗಳ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ಹಿಂದಿನ ಪ್ರಕರಣಗಳಿಗೆ 63.75 ಲಕ್ಷ ರು.ಗಳ ಪರಿಹಾರಧನ ನೀಡಲಾಗಿದೆ. ಪ್ರಸಕ್ತ ಸಾಲಿಗೆ 30 ಪ್ರಕರಣಗಳ ಪೈಕಿ 26 ಪ್ರಕರಣಗಳಿಗೆ ಒಟ್ಟು 44.25 ಲಕ್ಷ ರು.ಗಳ ಪರಿಹಾರಧನ ವಿತರಿಸಲಾಗಿದೆ. ಬಾಕಿ ಉಳಿದ ಪ್ರಕರಣಗಳಿಗೆ ಪರಿಹಾರಧನ ನೀಡಲು ಅನುದಾನಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.ದೌರ್ಜನ್ಯ ದಾಖಲಾದ ಒಟ್ಟು 30 ಪ್ರಕರಣ ಪೈಕಿ 15 ಪ್ರಕರಣಗಳು ನ್ಯಾಯಾಲಯಕ್ಕೆ ದೋಷರೋಪನೆ ಸಲ್ಲಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 10 ಪ್ರಕರಣಗಳಿಗೆ ಶಿಕ್ಷೆ ಆಗಿದೆ. ಉಪವಿಭಾಗ ಮತ್ತು ತಹಸೀಲ್ದಾರ ಹಂತದಲ್ಲಿ ಜಾಗೃತಿ ನಿಯಂತ್ರಣ ಸಮಿತಿ ಸಭೆ ನಡೆಸಿ, ಸಭೆಯ ನಡಾವಳಿಯನ್ನು ಪಡೆದುಕೊಂಡು ಜಿಲ್ಲಾ ಸಮಿತಿಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣಕ್ಕಾಗಿ ಕಾಯ್ದಿರಿಸಿದ ಅನುದಾನದಲ್ಲಿ ಶೇ.25 ರಷ್ಟು ಖರ್ಚು ಮಾಡಬೇಕಾಗಿದ್ದು, ಅಮೀನಗಡ, ಲೋಕಾಪೂರ ಪ.ಪಂ ಹಾಗೂ ಮಹಾಲಿಂಗಪೂರ ಪುರಸಭೆಗಳು ಕಡಿಮೆ ಪ್ರಗತಿ ಸಾಧಿಸಿವೆ. ಎಸ್.ಎಫ್.ಸಿ ಅನುದಾನದಲ್ಲಿ ಮುಖ್ಯವಾಗಿ ಕುಡಿಯುವ ನೀರು, ಶೌಚಾಲಯ ಹಾಗೂ ಚರಂಡಿಗಳಿಗೆ ಖರ್ಚು ಮಾಡಬೇಕು. ನಂತರ ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಬಳಕೆ ಮಾಡುವಂತೆ ಸೂಚನೆ ನೀಡಿದರು.ಜಿಪಂ ಸಿಇಒ ಶಶಿಧರ ಕುರೇರ ಮಾತನಾಡಿದರು.ನಾಮನಿರ್ದೇಶಿತ ಸದಸ್ಯರು ಸಭೆಗೆ ತಂದ ಸಮಸ್ಯೆಗಳಿಗೆ ಜಿಲ್ಲಾಧಿಕಾರಿಗಳು ಸ್ಪಂದಿಸಿ, ಸೂಕ್ತ ಕ್ರಮವಹಿಸುವುದಾಗಿ ತಿಳಿಸಿದರು.ಎಸ್ಪಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಪಂ ಉಪ ಕಾರ್ಯದರ್ಶಿ ಎನ್.ವೈ.ಬಸರಿಗಿಡದ, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ.ಎಂ ಸೇರಿದಂತೆ ನಾಮ ನಿರ್ದೇಶಿತ ಸದಸ್ಯರಾದ ಯಮನಪ್ಪ ಪೂಜಾರ, ಶಿವಾನಂದ ಮಾದರ, ಫಕೀರಪ್ಪ ಮಾದರ, ಬಸವರಾಜ ಪಾತ್ರೋಟ, ಗೋವಿಂದಪ್ಪ ಕೌಲಗಿ, ದ್ಯಾಮಣ್ಣ ಗಾಳಿ ಇತರರಿದ್ದರು.

{ ಕೆ.ವೆಂಕಟೇಶ್ } ರೇಷ್ಮೆ ಖಾತೆ ಸಚಿವ

ಕೃಷಿ ಕ್ಷೇತ್ರದ ಚಟುವಟಿಕೆಗಳು ದಿನ ಕಳೆದಂತೆ ದುಬಾರಿಯಾಗುತ್ತಿವೆ. ರೈತರು ಈ ವ್ಯವಸಾಯದ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಮೂಲಕ ಇದರ ಉಪಯೋಗ ಪಡೆದುಕೊಳ್ಳಬೇಕು. ರೈತರಿಗೆ ಕೃಷಿಯಲ್ಲಿನ ಆಧುನಿಕ ಪದ್ದತಿಗಳ ಬಳಕೆ ಬಗ್ಗೆ ತಿಳುವಳಿಕೆ ಮೂಡಿಸುವುದು ಕೃಷಿ ಇಲಾಖೆ ಜವಾಬ್ದಾರಿ ಆಗಬೇಕು.



ಬಾಗಲಕೋಟೆ ನಗರಸಭೆ ಸಾಮಾನ್ಯ ಸಭೆ | ಲೀಸ್ ಕುರಿತು ಬಿಜೆಪಿ-ಕಾಂಗ್ರೆಸ್ಸಿನ ನಡುವೆ ವಾಗ್ವಾದ

ಕಾಟನ್ ಮಾರುಕಟ್ಟೆ ಲೀಸ್‌ಗೆ ಕಾಂಗ್ರೆಸ್ ಪ್ರಬಲ ವಿರೋಧ

ಬಾಗಲಕೋಟೆ: ವಿವಾದಿತ ಕಾಟನ್ ಮಾರುಕಟ್ಟೆ ಲೀಸ್ ಅವಧಿ ವಿಸ್ತರಣೆ ವಿಷಯಕ್ಕೆ ಸಂಬಂಧಿಸಿದಂತೆ ಆಡಳಿತಾರೂಢ ಬಿಜೆಪಿ ಹಾಗೂ ಕಾಂಗ್ರೆಸ್ಸಿನ ಕೆಲವು ಸದಸ್ಯರ ನಡುವೆ ವಾಗ್ವಾದ ಜರುಗಿತು.

ಇಲ್ಲಿನ ನಗರಸಭೆಯಲ್ಲಿ ಹಮ್ಮಿಕೊಂಡಿದ್ದ ಸಾಮಾನ್ಯ ಸಭೆಯಲ್ಲಿ ಕಾಟನ್ ಮಾರುಕಟ್ಟೆ ಲೀಸ್ ಅವಧಿ ವಿಸ್ತರಣೆಗೆ ಬಿಜೆಪಿ ಸದಸ್ಯರು ಪಟ್ಟು ಹಿಡಿದರೇ ಕಾಂಗ್ರೆಸ್ ಸದಸ್ಯ ಹಾಜಿಸಾಬ್ ದಂಡಿನ ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಶ್ರೀಮಂತರು ಶ್ರೀ ಮಂತರಾಗುವುದು ಸಾಕು ಸಾಮಾಜಿಕ ನ್ಯಾಯ ಕಾಪಾಡಲು ಲೀಸ್ ರದ್ದುಪಡಿಸಿ ಮರು ಹಂಚಿಕೆ ಮಾಡಬೇಕೆಂದು ಒತ್ತಾಯಿಸಿದರು.

ಬಿಜೆಪಿ ಸದಸ್ಯರಾದ ಬಸವರಾಜ ಅವರಾದಿ, ವೀರಪ್ಪ ಶಿರಗಣ್ಣವರ, ಶ್ರೀನಾಥ ಸಜ್ಜನ ಹಾಗೂ ಮಹಿಳಾ ಸದಸ್ಯೆಯರು ಮಾತನಾಡಿ, ಈಗ ಅಲ್ಲಿ ಜನ ದುಡಿದು ತಿನ್ನುತ್ತಿದ್ದಾರೆ. ಅನೇಕ ಕೂಲಿಕಾರ್ಮಿಕರಿಗೂ ಕೆಲಸ ಸಿಕ್ಕಿದೆ ಅವರ ಹೊಟ್ಟೆ ಮೇಲೆ ಹೊಡೆಯುವ ಕೆಲಸವಾಗಬಾರದು ತಕ್ಷಣವೇ ಲೀಸ್ ಅವಧಿ ವಿಸ್ತರಣೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಆಗ ನಗರಸಭೆ ಅಧಿಕಾರಿಯೊಬ್ಬರು 2019ರ ಸುತ್ತೋಲೆ ಪ್ರಕಾರ ಮುಂದವರಿಸುವುದಕ್ಕಿರುವ ಪ್ರಕ್ರಿಯೆ ವಿವರಿಸಲು ಮುಂದಾದರು. ಮತದಾನಕ್ಕೆ ಹಾಕಿ ಬಿಜೆಪಿಯ ಅಷ್ಟೂ ಸದಸ್ಯರು ಲೀಸ್ ಅವಧಿ ವಿಸ್ತರಣೆ ಪರವಾಗಿದ್ದೇವೆ. ಕಾಂಗ್ರೆಸ್ಸಿನ ನಾಲ್ವರ ವಿರೋಧವಿದ್ದಾರೆ. ಅದನ್ನೂ ಪರಿಗಣಿಸಿ ಬಹುಮತವಿರುವುದನ್ನು ಪರಿಗಣಿಸಿ ಎಂದು ಪಟ್ಟು ಹಿಡಿದರು.

ಶಾಸಕ ಎಚ್.ವೈ.ಮೇಟಿ ಮಧ್ಯೆ ಪ್ರವೇಶಿಸಿ ಸೌಹಾರ್ದಯುತವಾಗಿ ಪರಿಹರಿಸುವ ವಿಷಯವಿದು. ಬಹುಮತ, ಸಂಘರ್ಷಕ್ಕೆಲ್ಲ ಇಳಿಯುವುದು ಬೇಡ ನಗರಸಭೆ ಅಧ್ಯಕ್ಷರು, ವಿಪ ಸದಸ್ಯ ಪಿ.ಎಚ್.ಪೂಜಾರ ಅವರೊಂದಿಗೆ ಚರ್ಚಿಸಿ ನಾವು ತೀರ್ಮಾನಿಸುತ್ತೇವೆ ಎಂದು ಅಲ್ಲಿಗೆ ವಾತಾವರಣ ತಿಳಿಗೊಂಡಿತು.

ಸದಸ್ಯ ವೀರಪ್ಪ ಶಿರಗಣ್ಣವರ ಮಾತನಾಡಿ, ವಾರ್ಡ್‌ಗಳಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರನ್ನು ಆಹ್ವಾನಿಸುವುದರ ಜತೆಗೆ ಆಯಾ ವಾರ್ಡ್‌ನ ಸದಸ್ಯರನ್ನು ಆಹ್ವಾನಿಸಬೇಕು. ಈ ಶಿಷ್ಟಾಚಾರವನ್ನು ಮರೆಯಕೂಡದು ಎಂದರು.

ಆರ್‌ಎಸ್‌ಎಸ್ ಪಥಸಂಚಲನ ಹಿನ್ನೆಲೆಯಲ್ಲಿ ನಗರವನ್ನು ಸ್ವಚ್ಛಗೊಳಿಸಿ ಅಲಂಕಾರಕ್ಕೆ ಅನುಕೂಲ ಕಲ್ಪಿಸಲು ಶ್ರೀನಾಥ ಸಜ್ಜನ ಕೋರಿದರು. ನಗರಸಭೆ ಅಧ್ಯಕ್ಷೆ ಸವಿತಾ ಲೆಂಕಣ್ಣವರ, ಉಪಾಧ್ಯಕ್ಷೆ ಶೋಭಾ ರಾವ್, ಸಭಾಪತಿ ಯಲ್ಲಪ್ಪ ನಾರಾಯಣಿ ಸೇರಿ ಇತರರಿದ್ದರು.

ಮೆಡಿಕಲ್ ಕಾಲೇಜ್ ತರುವುದರಲ್ಲಿ ಎಲ್ಲರ ಶ್ರಮವಿದೆ: ಸರಕಾರಿ ಮೆಡಿಕಲ್ ಕಾಲೇಜಿಗೆ ಪ್ರಯತ್ನಿಸಿದ ಮಹನೀಯರನ್ನು ಸದಸ್ಯ ದಂಡಿನ ಅಭಿನಂದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿಪ ಸದಸ್ಯ ಪಿ.ಎಚ್.ಪೂಜಾರ ಅವರು ಸರಕಾರಿ ಮೆಡಿಕಲ್ ಕಾಲೇಜಿಗೆ ನಿರಂತರ ಪ್ರಯತ್ನವಿದೆ. ಹಿಂದಿನ ನಮ್ಮ ಪಕ್ಷದ ಶಾಸಕರು ಕೂಡ ವಿಧಾನಸಭೆಯಲ್ಲಿ ಈ ವಿಷಯವಾಗಿ ಧ್ವನಿ ಎತ್ತಿರುವುದು ನನ್ನ ಗಮನಕ್ಕಿದೆ. ಈಗ ಸಾಕಾರಗೊಂಡಿದೆ. ಅದನ್ನು ತರುವುದರ ಹಿಂದೆ ಎಲ್ಲರ ಪ್ರಯತ್ನವೂ ಇದೆ ಎಂದರು.

ಬಾಗಲಕೋಟೆಯ ನಗರಸಭೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದ ಜರುಗಿತು.

ಪ್ರತಿ ವಾರ್ಡ್‌ಗೆ 8 ಲಕ್ಷ ರು.

ಶಾಸಕರ ವಿಶೇಷ ಅನುದಾನದಡಿ ಲಭ್ಯವಾಗಿರುವ 4.15 ಕೋಟಿ ರು.ಗಳ ಪೈಕಿ ಪ್ರತಿ ವಾರ್ಡ್‌ಗೆ ಪಕ್ಷಾತೀತವಾಗಿ 8 ಲಕ್ಷ ರು.ಗಳನ್ನು ಹಂಚಿಕೆ ಮಾಡಿ ಕ್ರಿಯಾ ಯೋಜನೆ ಪಡೆಯಲು ಶಾಸಕ ಎಚ್.ವೈ.ಮೇಟಿ ಸಭೆಯಲ್ಲಿ ಸಮ್ಮತಿ ಸೂಚಿಸಿದರು. ಇಂಜಿನಿಯರ್ ವಿಭಾಗದ ಅಧಿಕಾರಿ ಖಾಜಿ ಅವರು ಪ್ರತಿ ವಾರ್ಡ್‌ಗೆ 5 ಲಕ್ಷ ರು.ಗಳನ್ನು ಒದಗಿಸಲಾಗುವುದು ಎಂದಾಗ ಬಿಜೆಪಿ ಸದಸ್ಯರು ಪ್ರತಿ ವಾರ್ಡ್‌ಗೆ 10 ಲಕ್ಷ ರು. ಹಂಚಿ ಎಂದು ಪಟ್ಟು ಹಿಡಿದಾಗ ಪೌರಾಯುಕ್ತ ಆರ್.ವಾಸಣ್ಣ, 7 ಲಕ್ಷ ರು.ಗಳಂತೆ ಹಂಚಿಕೆ ಮಾಡಬಹುದು ಎಂದು ಸಲಹೆ ಮಾಡಿದರು. ಕೊನೆಗೆ ಶಾಸಕ ಮೇಟಿ ಅವರು, 8 ಲಕ್ಷ ರು. ನೀಡಲಾಗುವುದು. ಶಾಸಕರ ಅನುದಾನದಲ್ಲಿಯೂ ಸ್ವಲ್ಪ ಮೊತ್ತ ಉಳಿಯಲಿ ಮುಂದೆ ಅಗತ್ಯ ಬಿದ್ದಾಗ ಇತರೆ ಕಾಮಗಾರಿಗೆ ಒದಗಿಸುತ್ತೇನೆ ಎಂದರು. ಪ್ರತಿ ವಾರ್ಡ್‌ಗೆ ಅನುದಾನ ನೀಡಿದ್ದಕ್ಕೆ ಶಾಸಕ ಎಚ್.ವೈ.ಮೇಟಿ ಅವರನ್ನು ಸತ್ಕರಿಸಲಾಯಿತು.

ಮುದ್ದೇಬಿಹಾಳದ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ ಮೈದಾನದಲ್ಲಿ ನಡೆದ ಪುಸ್ತಕ ಮೇಳ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಬಿದರಕುಂದಿಯ ಶಿಕ್ಷಕಿಯರಾದ ಸುಮಲತಾ ಗಡಿಯಪ್ಪನವರ ಅವರು ಬರೆದ ಪುಟ್ಟನ ದಸರಾ ಕೃತಿ ಬಿಡುಗಡೆ ಆಯಿತು. ಈ ಸಂದರ್ಭದಲ್ಲಿ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ ಮಾನಸ. ಸಾಹಿತಿಗಳಾದ ಕೃಷ್ಣಮೂರ್ತಿ ಹನೂರು, ಪುರುಷೋತ್ತಮ ಬಿಳಿಮನೆ ಇನ್ನೂ ಮುಂತಾದ ಸಾಹಿತಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಮೊಬೈಲ್‌ನಿಂದ ಪೊಟೋಗ್ರಫಿ ವೃತಿಗೆ ಕುತ್ತು

ಇಳಕಲ್ಲ: ಇಂದಿನ ಮೊಬೈಲ್ ಬಳಕೆಯಿಂದಾಗಿ ಪೋಟೋ ಛಾಯಾಗ್ರಾಹಕರು ಈಗ ಕೆಲವೇ ಕೆಲವು ಕಾರ್ಯಕ್ರಮಗಳಿಗೆ ಸೀಮಿತವಾಗಿರುವುದರಿಂದ ಕೌಟುಂಬಿಕ ಜೀವನ ನಡೆಸುವುದು ಕಷ್ಟಕರವಾಗಿದೆ ಎಂದು ಇಳಕಲ್ಲ-ಚಿತ್ತರಗಿ ಸಂಸ್ಥಾನಮಠದ ಗುರುಮಹಾಂತ ಶ್ರೀಗಳು ಹೇಳಿದರು.

ಇಲ್ಲಿಯ ಗುಬ್ಬಿಪೇಟೆಯ ಶ್ರೀಶಂಕರಿ ರಾಮಲಿಂಗ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಇಳಕಲ್ಲ ತಾಲೂಕಾ ಛಾಯಾಚಿತ್ರ ಸಮೂಹ ಸಂಸ್ಥೆಯು 186ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಹಾಗೂ 24ನೇ ವಾರ್ಷಿಕೋತ್ಸವ ಅಂಗವಾಗಿ ಹಮ್ಮಿಕೊಳ್ಳಲಾದ ಛಾಯಾ ಹಬ್ಬ ಕಾರ್ಯಕ್ರಮದಲ್ಲಿ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು. ಛಾಯಾಗ್ರಾಹಕರಿಗೆ ಸರಕಾರದಿಂದ ಯಾವೂದೇ ರೀತಿ ಸಹಾಯವಿಲ್ಲದೇ ತಮ್ಮ ಸ್ವಂತ ದುಡಿಮೆಯನ್ನು ಅವಲಂಬಿಸಿ ತಮ್ಮ ವೃತ್ತಿ ಜೀವನ ನಡೆಸುತ್ತಿದ್ದಾರೆ. ಮೋಬೈಲ್‌ಗಳಲ್ಲಿ ಸೇರೆಹಿಡಿಯುವ ಚಿತ್ರಗಳಿಗಿಂತ ಇವರುಗಳ ಕ್ಯಾಮರಾದಿಂದ ಸೇರೆಹಿಡಿದ ಪೋಟೋಗಳು ಅಚ್ಚುಕಟ್ಟಾಗಿ ಹಾಗೂ ಸುಂದರವಾಗಿ ಮೂಡಿಬರುವುದರಿಂದ ಇವರುಗಳಿಗೆ ಸಾರ್ವಜನಿಕರ ಪ್ರೋತ್ಸಾಹ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ಛಾಯಾಚಿತ್ರ ಪ್ರತಿಭಾನ್ವಿತ ಮಕ್ಕಳನ್ನು ಗೌರವಿಸಿ ಸನ್ಮಾನಿಸ ಲಾಯಿತು.

ಛಾಯಾ ಹಬ್ಬ ಕಾರ್ಯಕ್ರಮದಲ್ಲಿ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ಛಾಯಾಚಿತ್ರ ಪ್ರತಿಭಾನ್ವಿತ ಮಕ್ಕಳನ್ನು ಗೌರವಿಸಿ ಸನ್ಮಾನಿಸಲಾಯಿತು.

> ಛಾಯಾಗ್ರಾಹಕರಿಗೆ ಸಮಾಜದಲ್ಲಿ ನಿಮಗೆ ಉತ್ತಮವಾದ ಸ್ಥಾನಮಾನವಿದ್ದು ಅದನ್ನು ನೀವುಗಳು ಉಳಿಸಿಕೊಳ್ಳಬೇಕು. ಸಾಮಾಜಿಕ ಕಾರ್ಯಗಳ ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರೊಂದಿಗೆ ಉತ್ತಮ ಒಡನಾಟ ಬೆಳೆಸಿಕೊಳ್ಳಬೇಕು. ನೀವುಗಳು ಆಚರಿಸುತ್ತಿರುವ ಈ ಛಾಯಾ ಹಬ್ಬ ಮೂಲಕ ನಿಮ್ಮಲ್ಲಿ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಿ.
>
> -ಗುರುಮಹಾಂತ ಶ್ರೀ

ಪಿಎಸ್‌ಐ ಸೇರಿ ಮೂರು ಹುದ್ದೆಗೆ ಆಯ್ಕೆ

ಕೆರೂರ: ಪ್ರಸ್ತುತ ದಿನಗಳಲ್ಲಿ ಯಾವುದಾದರೂ ಒಂದು ಸರಕಾರಿ ನೌಕರಿ ಸಿಕ್ಕರೆ ಸಾಕು, ಜೀವನ ನಡೆಸಬ ಹುದು ಎಂಬ ಆಲೋಚನೆ ಯುವ ಸಮುದಾಯಕ್ಕಿದೆ.ಒಬ್ಬ ಹಳ್ಳಿ ಯುವಕ ಏಕಕಾಲಕ್ಕೆ ಮೂರು ಸರಕಾರಿ ಹುದ್ದೆಗಳಿಗೆ ಆಯ್ಕೆಯಾಗಿ ಅಚ್ಚರಿ ಮೂಡಿಸಿದ್ದಾನೆ.

ಸಮೀಪದ ಕರಡಿಗುಡ್ಡ ಗ್ರಾಮದ ಯುವಕ ಬಸವರಾಜ್ ಸುರೇಶ ಹೊಸಕೋಟಿ ಪಿಎಸ್‌ಐ ಸೇರಿ ಮೂರು ಸರಕಾರಿ ಹುದ್ದೆಗಳಿಗೆ ಆಯ್ಕೆಯಾದ ಯುವಕ ಅಪ್ಪಟ ಗ್ರಾಮೀಣ ಪ್ರತಿಭೆ. ಕರಡಿಗುಡ್ಡ ಎಂಬ ಒಂದು ಸಣ್ಣ ಕುಗ್ರಾಮದಲ್ಲಿ ಬಸವರಾಜ ಪಿ ಎಸ್ ಐ ಆಯ್ಕೆಯಾಗಿ ಗ್ರಾಮದ ಜತೆ ತಂದೆ ತಾಯಿಗೆ ಕೀರ್ತಿ ಹೆಚ್ಚಿಸಿದ್ದಾನೆ.

ಈ ಗ್ರಾಮದಲ್ಲಿ ಸರಕಾರಿ ನೌಕರಸ್ಥರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಈ ಪೈಕಿ ಬಸವರಾಜ್ ಅತ್ಯಂತ ಕಿರಿಯವರು ಮತ್ತು ಪಿ ಎಸ್ ಐ ನೌಕರಿ ಪಡೆದ ಮೊದಲ ಯುವಕ ಎಂಬ ಖ್ಯಾತಿ ಹೊಂದಿದ್ದಾರೆ. ಬಿಎಂಟಿಸಿ ಕಂಡಕ್ಟರ್ ಬೆಂಗಳೂರು,ಗ್ರಾಮ ಲೆಕ್ಕಾಧಿಕಾರಿ ಕೋಲಾರ್, ಪಿಎಸ್‌ಐ ಬೆಂಗಳೂರು ಹೀಗೆ ಏಕ ಕಾಲದಲ್ಲಿ ಮೂರು ಹುದ್ದೆಗೆ ನೇಮಕವಾಗಿದ್ದಾರೆ.

ಮಂಜುಳಾ-ಸುರೇಶ ಹೊಸಕೋಟಿ ದಂಪತಿಗಳಿಗೆ ಇಬ್ಬರು ಜನ ಗಂಡು ಅವರಲ್ಲಿ ಬಸವರಾಜ ದೊಡ್ಡಮಗ,ಬಸವರಾಜ ಚಿಕ್ಕವಯಸ್ಸಿನಿಂದ ಕೆರೂರ ಪಟ್ಟಣದ ಕಿಲ್ಲಾ ಓಣಿಯ ಸೋದರ ಮಾವ ಈರಣ್ಣ ಶೆಟ್ಟರ ಆಶ್ರಯ ಹಾಗೂ ಮಾರ್ಗದರ್ಶನದಲ್ಲಿ ಶಿಕ್ಷಣ ಮುಗಿಸಿದ್ದಾನೆ. ತಂದೆ ತಾಯಿ ಹೋದರ ಮಾವನ ಆಸೆಯಂತ್ತೆ ಪಿ ಎಸ್ ಐ ಆಯ್ಕೆಯಾಗಿ ಅವರ ಕನಸು ಈಡೇರಿಸಿದ್ದಾನೆ.

ಕನ್ನಡ ಮಾಧ್ಯಮದಲ್ಲಿ ಶಿಕ್ಷಣ: 1ರಿಂದ ಪದವಿ ವರೆಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪೂರೈಸಿರುವ ಅವರು, ಧಾರವಾಡದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಪಡೆದು ಕಠಿಣ ಪರಿಶ್ರಮದಿಂದ ಸಾಧನೆ ತಮ್ಮದಾಗಿಸಿ ಕೊಂಡಿದ್ದಾರೆ. ಪ್ರಸ್ತುತ ಬೆಂಗಳೂರಿನ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ತರಬೇತಿ ಪಡೆಯುತ್ತಿದ್ದಾರೆ.



ಮೂರು ಸರ್ಕಾರಿ ಹುದ್ದೆಗೆ ಆಯ್ಕೆಯಾದ ಬಸವರಾಜ ಹೊಸಕೋಟಿ ಕುಟುಂಬ

> ಚಿಕ್ಕ ವಯಸ್ಸಿನಿಂದಲೂ ಪೊಲೀಸ್ ಇಲಾಖೆ ಸೇರಬೇಕೆಂಬ ಎಂಬುದು ಹಟ,ಚಲ ಅವನದಾಗಿತ್ತು ಪಿ ಎಸ್ ಐ ಆಯ್ಕೆ ಆಗಿರುವುದು ಅತ್ಯಂತ ಸಂತಸ ತರಿಸಿದೆ.
>
> -ಈರಣ್ಣ ಶೆಟ್ಟರ, ಸೋದರ ಮಾವ

> ಮೂರು ಸರ್ಕಾರಿ ಹುದ್ದೆಗಳಲ್ಲಿ ಪಿ ಎಸ್ ಐ ಹುದ್ದೆ ಆಯ್ಕೆ ಸಂತಸ ತಂದಿದೆ. ಕಠಿಣ ಪರಿಶ್ರಮ ಈ ಸಾಧನೆಗೆ ಪೋಷಕರೇ ಸ್ಫೂರ್ತಿ ಕಾರಣ. ಮಾನಸಿಕ ಸಾಮರ್ಥ್ಯವನ್ನು ಮನೆಯಲ್ಲಿಯೇ ಪ್ರತಿನಿತ್ಯ ಅಭ್ಯಾಸ ಮಾಡಬೇಕು. ಇದರಿಂದ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸುಲಭವಾಗಿ ಎದುರಿಸಬಹುದು.
>
> -ಬಸವರಾಜ್ ಹೊಸಕೋಟಿ, ಪಿಎಸ್‌ಐ (ಮೂರು ಹುದ್ದೆಗೆ ಆಯ್ಕೆಯಾದ ಯುವಕ)

ವೈದ್ಯರು ಮನುಕುಲಕ್ಕೆ ದೇವರು ಕೊಟ್ಟ ವರ

ವಿಜಯಪುರ: ಕಾಯಿಲೆಗಳನ್ನು ಗುಣಪಡಿಸಿ ನೋವುಗಳಿಂದ ಮುಕ್ತರನ್ನಾಗಿ ಮಾಡುವ ವೈದ್ಯರನ್ನು ದೇವರು ಮನುಕುಲಕ್ಕೆ ವರದಾನವಾಗಿ ನೀಡಿದ್ದಾನೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ್ ಹೇಳಿದರು.

ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರ ಆಯೋಜಿಸಿದ್ದ ಹಿರಿಯ ಪ್ರಾಧ್ಯಾಪಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ.ವೈ.ಎಂ.ಜಯರಾಜ ಮಾತನಾಡಿ, ಬಿ.ಎಲ್.ಡಿ.ಇ ಸಂಸ್ಥೆಯ ವ್ಯಾಪ್ತಿ ಈಗ ದೇಶಕ್ಕೆ ವಿಸ್ತರಿಸಿದೆ. ಸಂಸ್ಥೆಯ ಅಧ್ಯಕ್ಷ ಎಂ.ಬಿ.ಪಾಟೀಲ, ಡೀಮ್ಡ್ ವಿವಿ ಕುಲಾಧಿಪತಿ ಬಿ.ಎಂ.ಪಾಟೀಲ, ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ ಅವರ ದೂರದೃಷ್ಠಿಯ ಫಲವಾಗಿ ಉತ್ತರೋತ್ತರವಾಗಿ ಅಭಿವೃದ್ಧಿ ಯಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿರಿಯ ವೈದ್ಯರು ಮತ್ತು ಪ್ರಾಧ್ಯಾಪಕರಾದ ಡಾ. ಆರ್.ಸಿ.ಬಿದರಿ, ಡಾ.ತೇಜಶ್ವಿನಿ ವಲ್ಲಭ, ಡಾ.ಎಸ್.ಎಸ್. ದೇವರಮನಿ, ಡಾ.ವಿಜಯಕುಮಾರಾ ಟಿ. ಕಲ್ಯಾಣಪ್ಪಗೋಳ, ಡಾ.ಶೈಲಜಾ ಬಿದರಿ, ಡಾ.ಎಸ್.ಎನ್.ಬೆಂತೂರ, ಡಾ. ಎಸ್. ಆರ್. ಮುದನೂರ, ಡಾ.ಎಂ.ಎಸ್.ಮೂಲಿಮನಿ, ಡಾ.ಕುಸಾಲ ಕೆ. ದಾಸ, ಡಾ. ವಲ್ಲಭ, ಡಾ. ಎಸ್. ಪಿ. ಚೌಕಿಮಠ, ಡಾ. ಅಶೋಕ ನಾಯಕ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ, ಆಯುರ್ವೇದ ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ, ಕಾನೂನು ಕಾಲೇಜಿನ ಪ್ರಾಚಾರ್ಯ ರಘುವೀರ ಕುಲಕರ್ಣಿ ಸೇರಿದಂತೆ ನಾನಾ ಕಾಲೇಜುಗಳ ಪ್ರಾಚಾರ್ಯರು, ನಾನಾ ವಿಭಾಗಗಳ ಮುಖ್ಯಸ್ಥರು, ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಡೀಮ್ಡ್ ವಿವಿ ಕುಲಪತಿ ಡಾ.ಅರುಣ ಚಂ. ಇನಾಮದಾರ ಸ್ವಾಗತಿಸಿ ದರು. ಡಾ.ಉದಯ ಕುಮಾರ ಸಿ, ನುಚ್ಚಿ ಪರಿಚಯಿಸಿದರು. ಡಾ. ತನುಜಾ ಪಠನಕರ, ಡಾ.ಲತಾ ಮುಲ್ಲೂರ, ಡಾ. ಚಂದ್ರಿಕಾ ದೂಡಿಹಾಳ, ಡಾ.ಶ್ರೀಲಕ್ಷ್ಮೀ ಬಗಲಿ, ಡಾ. ಅಶ್ವಿನಿ ನುಚ್ಚಿ ನಿರೂಪಿಸಿದರು. ಡಾ. ಗಿರೀಶ ಕುಲ್ಲೊಳ್ಳಿ ವಂದಿಸಿದರು.

ಹಿರಿಯ ಪ್ರಾಧ್ಯಾಪಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಮಾತನಾಡಿದರು.

> ದೇವರು ಮಾನವನಿಗೆ ಆರೋಗ್ಯವೆಂಬ ಅಮೂಲ್ಯ ಸಂಪತ್ತನ್ನು ನೀಡಿದ್ದಾನೆ. ಈ ಸಂಪತ್ತನ್ನು ಬಾಧಿಸುವ ರೋಗಗಳನ್ನು ಗುಣಪಡಿಸಲು ವೈದ್ಯರ ರೂಪದಲ್ಲಿ ವರವನ್ನೂ ಕೊಟ್ಟಿದ್ದಾನೆ. ಕೊರೊನಾ ಸಂಕಷ್ಟ ಸಂದರ್ಭದಲ್ಲಂತೂ ವೈದ್ಯರು ತಮ್ಮ ಕುಟುಂಬಗಳನ್ನೂ ಲೆಕ್ಕಿಸದೇ ರೋಗಿಗಳಿಗೆ ನೀಡಿರುವ ಸೇವೆ ಸದಾ ಸ್ಮರಣೀಯವಾಗಿದೆ.
>
> - ಸುನೀಲಗೌಡ ಪಾಟೀಲ, ವಿಧಾನ ಪರಿಷತ್ ಶಾಸಕ

ನವರಾತ್ರಿ ಹಿನ್ನೆಲೆಯಲ್ಲಿ ಮುಚಖಂಡಿ ತಾಂಡಾದ ದುರ್ಗಾದೇವಿಗೆ ಸ್ಕಂದಮಾತಾ ರೂಪದಲ್ಲಿ ವಿಶೇಷ ಅಲಂಕಾರ ನೆರವೇರಿಸಲಾಯಿತು.

ಸಾಮಾಜಿಕ ನಡವಳಿಕೆ ಕಲಿಸುವ ಎನ್ನೆಸ್ಸೆಸ್ ಶಿಬಿರ

ತಾಳಿಕೋಟಿ: ಎಲ್ಲ ಸಮುದಾಯದವರು ನಾವೆಲ್ಲರೂ ಒಂದೇ ಎಂಬ ಭಾವ ಬೆಳೆಸಿಕೊಂಡಾಗ ಮಾತ್ರ ದೇಶ ಬಲಿಷ್ಟವಾಗಲಿದೆ ಎಂದು ರಾಷ್ಟ್ರೀಯ ಸೇವಾ ಯೋಜನೆಯ ಜಿಲ್ಲಾ ಸಂಯೋಜನಾಧಿಕಾರಿಗಳಾದ ಗಂಗಾಧರ ಅಗಸರ ಹೇಳಿದರು.ಪಟ್ಟಣದ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದಿಂದ ಆಶ್ರಯ ಕಾಲೋನಿಯಲ್ಲಿ ಏಳು ದಿನಗಳ ಕಾಲ ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಅವರು, ಧರ್ಮ, ಆಚಾರ ಸಂಸ್ಕಾರವನ್ನು ಯುವಕರು ಮೈಗೂಡಿಸಿಕೊಳ್ಳಬೇಕುಎಂದರು.ಮುರಿಗೆಪ್ಪ ಸರಶೆಟ್ಟಿ ಕಾರ್ಯದರ್ಶಿಗಳು ವೀರಶೈವ ವಿದ್ಯಾವರ್ಧಕ ಸಂಘ ತಾಳಿಕೋಟಿ ಅವರು ಸಮಾಜ ಸೇವೆ ಅತ್ಯಂತ ಪವಿತ್ರವಾದದ್ದು ನಿಸ್ವಾರ್ಥದಿಂದ ಸೇವೆ ಮಾಡುವ ಗುಣ ಯಾರಲ್ಲಿ ಇರುತ್ತದೆಯೋ ಅವರು ಸಮಾಜದಲ್ಲಿ ಒಬ್ಬ ಆದರ್ಶ ವ್ಯಕ್ತಿಯಾಗಿ ಬಾಳಲು ಸಾಧ್ಯ ಎಂದು ಹೇಳಿದರು. ಪ್ರಶಿಕ್ಷಣಾರ್ಥಿ ಭಾಗ್ಯವಂತಿ ಸ್ವಾಗತಿಸಿದರು ಪ್ರಶಿಕ್ಷಣಾರ್ಥಿ ಐಶ್ವರ್ಯ ದೊಡ್ಡಮನಿ ವಂದಿಸಿದರು .ಪ್ರಶಿಕ್ಷಣಾರ್ಥಿ ಕೀರ್ತಿ ಹಂದ್ರಾಳ ನಿರೂಪಿಸಿದರು.

ಮಕ್ಕಳಿಗೆ ಸಂಗೀತ ಶಿಕ್ಷಣ ಧಾರೆ ಎರೆಯುವ ಮಾನಪ್ಪ ಪತ್ತಾರ

ಮಂಜು ಕಲಾಲ

ವಿಜಯಪುರ: ಬರದ ನಾಡು ಎಂದು ಹಣೆ ಪಟ್ಟಿ ಕಟ್ಟಿಕೊಂಡಿರುವ ವಿಜಯಪುರ ಜಿಲ್ಲೆಯಲ್ಲಿ ಸಂಗೀತವನ್ನೆ ಉಸಿರಾಗಿಸಿಕೊಂಡು ಕಲೆಯನ್ನು ಉಳಿಸಿ ಬೆಳಸಬೇಕು ಎಂಬ ಸದುದ್ದೇಶದಿಂದ ಯಾವುದೇ ಫಲಾ ಪೇಕ್ಷೆ ಇಲ್ಲದೆ ಜನ ಸಾಮಾನ್ಯರಿಗೆ ಸಂಗೀತದ ಪಾಠ ಮಾಡುತ್ತಿರುವ ಮಾನಪ್ಪ ಪತ್ತಾರ (ರಾಂಪೂರ) ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದಾರೆ.

1947 ರಲ್ಲಿ ಲಕ್ಷ್ಮೀಬಾಯಿ ಮತ್ತು ಶಿವಪ್ಪ ದೇವಿಂದ್ರಪ್ಪ ಪತ್ತಾರ (ರಾಂಪೂರ) ಎಂಬ ಸಂಗೀತ ಕಲಾವಿಧರ ಸುಪುತ್ರನಾಗಿ ಸಿಂದಗಿಯಲ್ಲಿ ಜನಿಸಿದ ಇವರು ಚಿಕ್ಕ ವಯಸ್ಸಿನಲ್ಲಿಯೇ ಸಂಗೀತವನ್ನ ಮೈಗೂಡಿಸಿಕೊಂಡಿದ್ದಾರೆ, ತಂದೆಯ 3 ನೇ ಮಗನಾಗಿ ಹುಟ್ಟಿದ ಮಾನಪ್ಪ ಉಳಿದವರಿಗಿಂತ ಸಂಗೀತದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು ಇದನ್ನ ಅರಿತ ತಂದೆ ಹೆಚ್ಚಿನ ಪ್ರೋತ್ಸಾಹಿಸುವದನ್ನು ನೀಡಿದರು.

ಮನೆಯ ಮೊದಲು ಪಾಠ ಶಾಲೆ ಎಂಬಂತೆ ಮನೆಯಲ್ಲಿಯೇ ಸಂಗೀತ ಪಾಠ ಆರಂಭಿಸಿ ನಂತರ ಮನೆಯ ಹತ್ತಿರವಿರುವ ಊರಿನ ಹಿರಿಯ ಮಠದ ಪ್ರಶಾಂತವಾದ ವಾತಾವರಣದಲ್ಲಿ ಸಂಗೀತ ಪ್ರಾರಂಭವಾಯಿತು ಇವರ ಒಂದು ಸಂಗೀತ ಆಸಕ್ತಿಯನ್ನು ಕಂಡು ಶ್ರೀ ಮಠದ ಗುರುಗಳಾದ ಶಾಂತವೀರ ಪಟ್ಟಾಧ್ಯಕ್ಷರು ಇವರನ್ನು ಗದುಗಿನ ಪಂಡಿತ ಪುಟ್ಟರಾಜ ಗವಾಯಿಗಳ ಪುಣ್ಯಾಶ್ರಮದಲ್ಲಿ ಹೆಚ್ಚಿನ ಅಭ್ಯಾಸಕ್ಕಾಗಿ ಬಿಟ್ಟರು.

1960 ರಿಂದ 1968 ರವರೆಗೆ ಪೂಜ್ಯರ ನೆರಳಿನಲ್ಲಿ ಸಂಗೀತ ಕಲಿಯಲಾರಂಭಿಸಿ ಸಂಗೀತದಲ್ಲಿ ಜೂನಿಯರ್, ಸೀನಿಯರ್, ವಿದ್ವತ್ ಪೂರ್ಣಗೊಳಿಸಿದರು. ನಂತರ ಸಿಂದಗಿಯ ಶಾಂತವೀರ ಪಟ್ಟಾಧ್ಯಕ್ಷರು ಲಿಂಗೈಕ್ಯರಾದ ಸಂದರ್ಭದಲ್ಲಿ ಮರಳಿ ಸಿಂದಗಿ ಬಂದು ಅವರ ಒಂದು ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಂಗೀತ ಸೇವೆಯನ್ನು ಮೊದಲ ಬಾರಿಗೆ ನೀಡಿದರು.

1988 ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು ಸಂಸ್ಕೃತಿ ಭಾಂದವ್ಯ ಸಂಸ್ಥೆ ಅಥಣಿ ಯಲ್ಲಿ ಜಲತರಂಗ ವಾಧನ ಕಾರ್ಯಕ್ರಮ ನೀಡಿದರು, ಆದಾದ ನಂತರ 1993 ರಲ್ಲಿ ಜರುಗಿದ ಪಟ್ಟದಕಲ್ಲ ನವರಸಪೂರ ಉತ್ಸವದಲ್ಲಿ ಜಲತರಂಗ ವಾದನ ನುಡಿಸಿ ಜನ ಮನ ಗೆದ್ದರು.ಜಲತರಂಗ ವಾದನದಲ್ಲಿ ನೈಪುಣ್ಯತೆ ಹೊಂದಿರುವ ಇವರು ರಾಜ್ಯದ ಹಲವಾರು ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡುವ ಮೂಲಕ ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದರು.

ನಂತರದಲ್ಲಿ ಮರಳಿ ಸಿಂದಗಿಗೆ ಆಗಮಿಸಿ ಯಾವುದೇ ಫಲಾಪೇಕ್ಷವಿಲ್ಲದೆ ಶ್ರೀ ನೀಲಗಂಗಾ ಸಂಗೀತ ಪಾಠಶಾಲೆ ಆರಂಭಿಸಿ ಸಂಗೀತ ಸೇವೆಯನ್ನು ಮುಂದೆವರೆಸಿಕೊಂಡು ಹೋಗುತ್ತಿದ್ದಾರೆ.

ಇವರ ಹಿಂದುಸ್ತಾನಿ ಸಂಗೀತ ಮತ್ತು ಜಲತರಂಗವಾದನ ಕಲೆಯನ್ನು ಗುರುತಿಸಿದ ಜಿಲ್ಲಾಡಳಿತ 2010 ರಲ್ಲಿ ರಾಜೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ, ತಬಲಾ, ಸಿತಾರ, ಜಲತರಂಗ, ಕೊಳಲು, ಪಿಟೀಲು, ವೈಲನ್, ಹಾಡು ಹೀಗೆ ಸಕಲ ಕಲಾ ವಲ್ಲಭರಾದ ಮಾನಪ್ಪ ಅವರನ್ನು ಸರಕಾರ ಗುರುತಿಸದೇ ಇರುವುದೇ ವಿಪರ್ಯಾಸದ ಸಂಗತಿಯಾಗಿದೆ.

ಸ್ವಂತ ಸೂರಿಲ್ಲದ ಮಾನಪ್ಪ ತಮ್ಮ ಇಳಿವಯಸ್ಸಿನಲ್ಲೂ ಸರಕಾರದ ಕೇವಲ 2000 ಮಾಸಾಶನದಲ್ಲಿ ಸಿಂದಗಿಯ ಶ್ರೀ ಮಠದಲ್ಲಿ ಸಂಗೀತ ಸೇವೆಯನ್ನು ನೀಡುವ ಮೂಲಕ ಬದುಕು ಸಾಗಿಸುತ್ತಿದ್ದಾರೆ, ಸರಕಾರ ಇಂತಹ ತೆರೆ ಮರೆಯ ಕಾಯಿಯಂತಿರುವ ಸಾಧಕರನ್ನ ಗುರುತಿಸಿ ರಾಜ್ಯೋತ್ಸವದಂತಹ ಪ್ರಶಸ್ತಿಯನ್ನ ನೀಡಿ ಗೌರವಿಸಬೇಕು ಎನ್ನುವುದು ನಮ್ಮ ಆಶಯ.

ಮಕ್ಕಳಿಗೆ ಸಂಗೀತ ಪಾಠ ಮಾಡುತ್ತಿರುವ 78 ವಯಸ್ಸಿನ ಮಾನಪ್ಪ ಪತ್ತಾರ.

> 78 ವಯಸ್ಸಿನ ಮಾನಪ್ಪ ಪತ್ತಾರ ಅವರು ಸಕಲಕಲಾ ವಲ್ಲಭರಾಗಿದ್ದಾರೆ, ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದಾರೆ, ಸರಕಾರ ನವೆಂಬರ 1 ರಂದು ಕೊಡಮಾಡುವ ರಾಜ್ಯೋತ್ಸವ ಪ್ರಶಸ್ತಿಗೆ ಇಂತಹ ಸಾಧಕರನ್ನ ಗುರುತಿಸುವಂತಹ ಕೆಲಸ ಮಾಡಬೇಕು ಅಂದಾಗ ಮಾತ್ರ ಪ್ರಶಸ್ತಿಗೆ ನಿಜವಾದ ಗೌರವ ಸಲ್ಲುತ್ತದೆ.
>
> -ಮಲ್ಲಿಕಾರ್ಜುನ ಬ್ರಂಗಿಮಠ, ಸಾಹಿತಿಗಳು.

ಪ್ರಶಸ್ತಿಗಳು:

- 1988 ರಲ್ಲಿ ಸಂಸ್ಕೃತಿಕ ಭಾಂದವ್ಯ ಸಂಸ್ಥೆಯಿಂದ ಅಥಣಿ, ಪ್ರಶಸ್ತಿ,
- 2010, ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ,
- 2011 ರಲ್ಲಿ ಟಿಪ್ಪು ಸುಲ್ತಾನ ಜನ್ಮ ದಿನಾಚರಣೆ ನಿಮಿತ್ತ ರಾಜ್ಯಮಟ್ಟದ ಸದ್ಭವನಾ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಉಕ್ಕಿನ ಸ್ಥಾವರ ಕುಸಿತ: 6 ಸಾವು

ರಾಯ್ಪುರ: ಛತ್ತೀಸ್‌ಗಢದ ರಾಜಧಾನಿ ರಾಯ್ಪುರದಲ್ಲಿರುವ ಖಾಸಗಿ ಉಕ್ಕಿನ ಸ್ಥಾವರವೊಂದರಲ್ಲಿ ಶುಕ್ರವಾರ ಕಟ್ಟಡ ಕುಸಿದು ಕನಿಷ್ಠ ಆರು ಜನರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಛತ್ತೀಸ್‌ಗಢ ರಾಜಧಾನಿಯ ಹೊರವಲಯದಲ್ಲಿರುವ ಸಿಲ್ತಾರಾ ಕೈಗಾರಿಕಾ ಪ್ರದೇಶದಲ್ಲಿರುವ ಗೋದಾವರಿ ಇಸ್ಪಾತ್ ಲಿಮಿಟೆಡ್ ಫ್ಯಾಕ್ಟರಿಯಲ್ಲಿ ಈ ಘಟನೆ ನಡೆದಿದೆ. ಕಟ್ಟಡ ಕುಸಿತದ ಬಳಿಕ ರಕ್ಷಣಾ ಕಾರ್ಯಾಚರಣೆಯನ್ನು ತಕ್ಷಣವೇ ಪ್ರಾರಂಭಿಸಲಾಯಿತು ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಐದು ಕಾರ್ಮಿಕರು ಸಾವನ್ನಪ್ಪಿದರು ಮತ್ತು ಐದು ಮಂದಿ ಗಾಯಗೊಂಡರು ಎಂದು ಪೊಲೀಸರು ತಿಳಿಸಿದ್ದಾರೆ. ಗಾಯಗೊಂಡ ಎಲ್ಲಾ ಕಾರ್ಮಿಕರನ್ನು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಭಾರತೀಯ ಮೂಲದ ವೈದ್ಯನಿಗೆ 14 ವರ್ಷ ಜೈಲು

ದೆಹಲಿ: ಅಮೆರಿಕದಲ್ಲಿ ವೈದ್ಯಕೀಯ ಸೇವೆಯಲ್ಲಿ ಭಾರೀ ಅವ್ಯವಹಾರ ಪ್ರಕರಣದಲ್ಲಿ ದೋಷಿಯೆಂದು ಕಂಡುಬಂದ ಭಾರತೀಯ ಮೂಲದ ವೈದ್ಯ ನೀಲ್ ಕೆ. ಆನಂದ್‌ಗೆ 14 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ. 48 ವರ್ಷದ ಪೆನ್ಸಿಲ್ವೇನಿಯಾ ವೈದ್ಯ, ರೋಗಿಗಳಿಗೆ ಅನಗತ್ಯ ಔಷಧಿಗಳನ್ನು ನೀಡಿ, ವಿಮಾ ಪಾವತಿಗಳನ್ನು ಸುಲಿಗೆ ಮಾಡಿದ್ದಾರೆ. ನ್ಯಾಯಾಲಯದ ದಾಖಲೆಗಳ ಪ್ರಕಾರ, ಆನಂದ್ ತನ್ನ ಒಡೆತನದ ಫಾರ್ಮಸಿಗಳ ಮೂಲಕ ರೋಗಿಗಳಿಗೆ ಅನಗತ್ಯ ಔಷಧಿಗಳನ್ನು ವಿತರಿಸಿ, ಮೆಡಿಕೇರ್, ಯುಎಸ್ ಒಪಿಎಂ, ಇಂಡಿಪೆಂಡೆನ್ಸ್ ಬ್ಲೂ ಕ್ರಾಸ್ ಮತ್ತು ಆಂಥೆಮ್ ವಿಮಾ ಯೋಜನೆಗಳಿಂದ 2.4 ಮಿಲಿಯನ್ ಪಾವತಿಗಳನ್ನು ಪಡೆದಿದ್ದಾರೆ. ಹಾಗೆಯೇ ಅನಿಯಂತ್ರಿತ ಔಷಧಿಗಳಾದ ಒಕ್ಸಿಕೊಡೋನ್ ಅನ್ನು ವೈದ್ಯಕೀಯ ಉದ್ದೇಶವಿಲ್ಲದೆ ವಿತರಿಸಿದ್ದಾರೆ. ಒಂಬತ್ತು ರೋಗಿಗಳಿಗೆ 20,850 ಒಕ್ಸಿಕೊಡೋನ್ ಟ್ಯಾಬ್ಲೆಟ್‌ಗಳನ್ನು ನೀಡಿದ್ದಾರೆ. ಪರವಾನಗಿ ಇರದ ಇಂಟರ್ನ್‌ಗಳಿಗೆ ಆನಂದ್ ಮೊದಲೇ ಸಹಿ ಮಾಡಿದ ಖಾಲಿ ಫಾರ್ಮ್‌ಗಳಲ್ಲಿ ಔಷಧಿಗಳನ್ನು ಬರೆಯಲು ಅವಕಾಶ ನೀಡಿದ್ದರು ಎಂಬ ಆರೋಪದ ಹಿನ್ನೆಲೆಯಲ್ಲಿ ಶಿಕ್ಷೆ ಪ್ರಕಟವಾಗಿದೆ.

ಪಾಕ್ ನಾಯಕರನ್ನು ಕಾಯಿಸಿದ ಟ್ರಂಪ್

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಓವಲ್ ಕಚೇರಿಯಲ್ಲಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಸಭೆಗೂ ಮುನ್ನ ಟ್ರಂಪ್, ಷರೀಫ್ ಅವರನ್ನು ಮಹಾನ್ ನಾಯಕ ಎಂದು ಬಣ್ಣಿಸಿದ್ದಾರೆ. ಭೇಟಿ ಸಂದರ್ಭದಲ್ಲಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಕೂಡ ಉಪಸ್ಥಿತರಿದ್ದರು. ಮಾಧ್ಯಮಗಳ ವರದಿ ಪ್ರಕಾರ, ಟ್ರಂಪ್ ಕೆಲ ಕಾಲ ತಡವಾಗಿ ಓವಲ್ ಕಚೇರಿಗೆ ತೆರಳಿದ್ದಾರೆ. ಅಧ್ಯಕ್ಷ ಹಾಗೂ ಸೇನಾ ಮುಖ್ಯಸ್ಥ ಸುಮಾರು ಅರ್ಧಗಂಟೆಗೂ ಅಧಿಕ ಹೊತ್ತು ಕಾದಿದ್ದರು ಎಂದು ತಿಳಿದು ಬಂದಿದೆ. ಪಾಕಿಸ್ತಾನದ ಪ್ರಧಾನಿ ಮತ್ತು ಫೀಲ್ಡ್ ಮಾರ್ಷಲ್ ಇಬ್ಬರು ಒಳ್ಳೆಯ ವ್ಯಕ್ತಿ ಎಂದು ಟ್ರಂಪ್ ಬಣ್ಣಿಸಿದ್ದಾರೆ. ಅಮೆರಿಕ ಮತ್ತು ಪಾಕಿಸ್ತಾನ ನಡುವಿನ ವ್ಯಾಪಾರ ಒಪ್ಪಂದದ ನಂತರ ಈ ಸಭೆ ನಡೆಯಿತು ಮತ್ತು ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಟ್ರಂಪ್ ಮತ್ತು ಷರೀಫ್ ಅವರು ಬಹಳ ಸಂಕ್ಷಿಪ್ತವಾಗಿ ಭೇಟಿಯಾದ ಸ್ವಲ್ಪ ಸಮಯದ ನಂತರ ಈ ಸಭೆ ನಡೆಯಿತು.

ಅಭಿವೃದ್ಧಿಗೆ ಭಯೋತ್ಪಾದನೆ ನಿರಂತರವಾದ ಬೆದರಿಕೆ

ಜೋಯೆನ್ಸ್‌ಬರ್ಗ್: ಭಯೋತ್ಪಾದನೆಯು ಅಭಿವೃದ್ಧಿಗೆ ನಿರಂತರವಾದ ಬೆದರಿಕೆಯಾಗಿ ಉಳಿದಿದೆ. ಭಯೋತ್ಪಾದಕ ಚಟುವಟಿಕೆಗಳಿಗೆ ಜಗತ್ತು ಸಹಿಷ್ಣುವಾಗಿ ಅಥವಾ ಒಪ್ಪಿಗೆ ನೀಡಬಾರದು ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದರು.

ವಿಶ್ವಸಂಸ್ಥೆಯಲ್ಲಿ ನಡೆದ ಜಿ20 ವಿದೇಶಾಂಗ ಸಚಿವರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಯಾವುದೇ ಕ್ಷೇತ್ರದಲ್ಲಿ ಭಯೋತ್ಪಾದಕರ ವಿರುದ್ಧ ಹೋರಾಟ ನಡೆಸುವವರು ಇಡೀ ಅಂತಾರಾಷ್ಟ್ರೀಯ ಸಮುದಾಯಕ್ಕೆ ದೊಡ್ಡ ಸೇವೆಯನ್ನು ಸಲ್ಲಿಸುತ್ತಾರೆ. ಅಂತಾರಾಷ್ಟ್ರೀಯ ಶಾಂತಿ ಮತ್ತು ಜಾಗತಿಯ ಅಭಿವೃದ್ಧಿಯ ನಡುವಿನ ಪರಸ್ಪರ ಸಂಬಂಧ ಇತ್ತೀಚಿನ ದಿನಗಳಲ್ಲಿ ಸಮನಾಂತರವಾಗಿ ಹಾಳಾಗಿದೆ ಎಂದು ಅಭಿಪ್ರಾಯಪಟ್ಟರು.

ವಿರಾಮ
ಪ್ರತಿ ಭಾನುವಾರ

{ ಪ್ರಿಯಾಂಕಾ ಗಾಂಧಿ } ಸಂಸದೆ

ಬಿಜೆಪಿ ನೇತೃತ್ವದ ಎನ್‌ಡಿಎ ಬಿಹಾರಕ್ಕೆ ಸದ್ಯ ನೀಡುತ್ತಿರುವ ಕೊಡುಗೆಗಳಿಗೆ ಬಿಹಾರದವರು ಮರುಳಾಗಬೇಡಿ, ಅವರಿಗೆ ಮತದ ಮೇಲಷ್ಟೇ ಆಸಕ್ತಿಯಿದೆ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಿಜವಾದ ಉದ್ದೇಶಗಳನ್ನು ಅರ್ಥಮಾಡಿಕೊಂಡು, ಜಾಗೃತರಾಗಿರಿ.

ಬಿಹಾರದಲ್ಲಿ 75 ಲಕ್ಷ ಮಹಿಳೆಯರ ಖಾತೆಗೆ ತಲಾ 10 ಸಾವಿರ ರೂಪಾಯಿ ಜಮೆ

ರೋಜ್‌ಗಾರ್ ಯೋಜನೆಗೆ ಪ್ರಧಾನಿ ಚಾಲನೆ

ಪಟ್ನಾ: ಆರ್‌ಜೆಡಿ ಅಧಿಕಾರಾವಧಿಯಲ್ಲಿ ಬಿಹಾರದ ಮಹಿಳೆಯರು ಅರಾಜಕತೆ ಮತ್ತು ಭ್ರಷ್ಟಾಚಾರ ಕಂಡಿದ್ದು, ರಾಜ್ಯವು ಮತ್ತೆ ಆ ಕತ್ತಲೆಗೆ ಮುಳಗಲು ಬಿಡುವುದಿಲ್ಲ ಎಂದು ಜನತೆ ಪ್ರತಿಜ್ಞೆ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಬಿಹಾರದ 75 ಲಕ್ಷ ಮಹಿಳೆಯರ ಬ್ಯಾಂಕ್ ಖಾತೆಗೆ ತಲಾ 10 ಸಾವಿರ ರು. ಅನ್ನು ಜಮೆ ಮಾಡುವ 'ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆ'ಗೆ ಚಾಲನೆ ನೀಡಿ ಅವರು ಮಾತನಾಡಿದರು. ದೆಹಲಿಯಿಂದಲೇ ವರ್ಚುಯಲ್ ಆಗಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಟ್ಟಾರೆ 7,500 ಕೋಟಿ ಹಣವನ್ನು ಫಲಾನುಭವಿಗಳ ಖಾತೆಗೆ ವರ್ಗಾವಣೆ ಮಾಡಲಾಗಿದೆ ಎಂದರು.

- ಎನ್‌ಡಿಎ ಸರಕಾರದ ಘೋಷಣೆ
- ಮುಂದಿನ ತಿಂಗಳ ಬಿಹಾರದಲ್ಲಿ ಚುನಾವಣೆ
- ಸ್ವಸಹಾಯ ಗುಂಪುಗಳ ರಚನೆ
- ಸಹಕಾರಿ ಸಾಲ ಸೌಲಭ್ಯ

1990ರಿಂದ 2005ರ ವರೆಗಿನ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಆಳ್ವಿಕೆಯಲ್ಲಿ ಮಹಿಳೆಯರು ಅರಾಜಕತೆ ಮತ್ತು ಭ್ರಷ್ಟಾಚಾರ, ಭಯದಿಂದ ನಲುಗಿದರು. ವೈದ್ಯರೂ ಸೇರಿದಂತೆ ಯಾರು ಕೂಡ ಆರ್‌ಜೆಡಿಯ ಅರಾಜಕತೆಯಿಂದ ಪಾರಾಗಲು ಸಾಧ್ಯವಿರಲಿಲ್ಲ. ಆರ್‌ಜೆಡಿ ಆಡಳಿತದ ಸಮಯದಲ್ಲಿ ರಾಜ್ಯದ ಹದಗೆಟ್ಟ ರಸ್ತೆಗಳು ಮತ್ತು ಸೇತುವೆಗಳ ಕೊರತೆಯಿಂದಾಗಿ ಅನೇಕ ಗರ್ಭಿಣಿಯರು ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ತಲುಪದ ಅವ್ಯವಸ್ಥೆ ಬಗ್ಗೆ ಕೂಡ ಪ್ರಧಾನಿ ಉಲ್ಲೇಖಿಸಿದರು.

ಮಹಿಳೆಯರ ಏಳಿಗೆಗೆ ಕ್ರಮ: ಆಡಳಿತಾರೂಢ ಎನ್‌ಡಿಎ ಸರಕಾರವು ಹಗಲು-ರಾತ್ರಿ ಕಷ್ಟದ ಪರಿಸ್ಥಿತಿಯಲ್ಲಿ ಕೆಲಸ ಮಾಡುವ ಮೂಲಕ ಮಹಿಳೆಯರನ್ನು ಇಂತಹ ಕಠಿಣ ಪರಿಸ್ಥಿತಿಯಿಂದ ಹೊರ ತರಲು ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿನ ಮಹಿಳೆಯರ ಗೌರವ ಮತ್ತು ಘನತೆಯನ್ನು ಮೇಲೆರಿಸಲು ನಾನು ಮತ್ತು ಸಿಎಂ ನಿತೀಶ್ ಕುಮಾರ್ ಕಾರ್ಯ ನಿರ್ವಹಿಸುತ್ತಿದ್ದೇವೆ. ನಿಮ್ಮ ಕನಸನ್ನು ಪೂರ್ಣಗೊಳಿಸುವುದು ನಮ್ಮ ಏಕೈಕ ಗುರಿಯಾಗಿದೆ ಎಂದು ಪ್ರಧಾನಿ ಹೇಳಿದರು.

ಹಲವು ಯೋಜನೆಗಳನ್ನು ಉಲ್ಲೇಖಿಸಿದ ಮೋದಿ, ಪ್ರಧಾನ ಮಂತ್ರಿ ಗರಿಬ್ ಕಲ್ಯಾಣ್ ಯೋಜನೆಯಡಿ ಜನರಿಗೆ ಉಚಿತ ಪಡಿತರವನ್ನು ನೀಡಲಾಗುತ್ತಿದೆ. 13.07 ಕೋಟಿ ಜನಸಂಖ್ಯೆ ಹೊಂದಿರುವ ಬಿಹಾರದಲ್ಲಿ 8.5 ಕೋಟಿ ಜನರು ಇದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಉದ್ಯೋಗಕ್ಕೂ ರಹದಾರಿ

ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಹಣ ವರ್ಗಾವಣೆ ಉದ್ಯೋಗಕ್ಕೆ ದಾರಿಯಾಗಲಿದೆ. ಇದರಿಂದ ದಿನಸಿ ವಸ್ತುಗಳು, ಪಾತ್ರೆಗಳು, ಸೌಂದರ್ಯವರ್ಧಕಗಳು, ಆಟಿಕೆ ಮತ್ತು ಇತರ ವಸ್ತುಗಳ ಮಾರಾಟದ ಅಂಗಡಿ ತೆರೆಯಬಹುದು. ಅಥವಾ ಹಸುಗಳು, ಮೀನು, ಮೇಕೆಗಳು ಅಥವಾ ಕೋಳಿ ಸಾಕಾಣಿಕೆ ಮಾಡಬಹುದು. ಉದ್ಯಮ ಆರಂಭಿಸಲು ತರಬೇತಿ ಅವಶ್ಯಕತೆ ಇರುವವರಿಗೆ ಅಗತ್ಯ ಬೆಂಬಲ ನೀಡುವ ಗುರಿಯನ್ನೊಂದಿದೆ.

ಆರ್‌ಜೆಡಿ ನಾಯಕರ ಕುಟುಂಬ ಮಾತ್ರ ಏಳಿಗೆ: ನಿತೀಶ್

ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ ನಿತೀಶ್ ಕುಮಾರ್, ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಹೆಸರು ಉಲ್ಲೇಖಿಸದೆ ಹರಿಹಾಯ್ದರು. ಆರ್‌ಜೆಡಿ ಆಳ್ವಿಕೆಯ ಸಮಯದಲ್ಲಿ ಬಿಹಾರ ರಾಜ್ಯದ ಜನರ ಬದಲಾಗಿ, ರಾಜ್ಯದ ಆಳ್ವಿಕೆ ಮಾಡಿದ ನಾಯಕರ ಕುಟುಂಬದ ಏಳಿಗೆ ಆಗಿದೆ ಎಂದು ಟೀಕಿಸಿದರು. ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಯು ನಿತೀಶ್ ಕುಮಾರ್ ಅವರ ಕನಸಿನ ಯೋಜನೆಯಾಗಿದ್ದು, ಮಹಿಳೆಯರಿಗೆ ಉದ್ಯೋಗಾವಕಾಶ ನೀಡಲಾಗು ವುದು. ಈ ಯೋಜನೆಗೆ ರಾಜ್ಯ ಸರಕಾರ ಇಲ್ಲಿಯವರೆಗೆ 1.4 ಕೋಟಿ ಅರ್ಜಿ ಪಡೆದಿದ್ದು, ಮುಂದಿನ ದಿನದಲ್ಲಿ ಈ ಅರ್ಜಿ ಸಂಖ್ಯೆ ಹೆಚ್ಚಳವಾಗುವ ಸಾಧ್ಯತೆ ಇದೆ. ಈ ಯೋಜನೆ ಎಲ್ಲಾ ಸಮುದಾಯದ ಎಲ್ಲಾ ವರ್ಗದ ಮಹಿಳೆಯರನ್ನು ಒಳಗೊಂಡಿದೆ ಎಂಬುದು ಬಿಹಾರ ಸರಕಾರದ ನಿಲುವಾಗಿದೆ.

ಪ್ರಸಾದಕ್ಕೆ ಕಲಬೆರಕೆ ತುಪ್ಪ ಬಳಕೆ ಆರೋಪ

ತಿರುಪತಿ ಲಡ್ಡು ವಿವಾದ: ಸಿಬಿಐಗೆ ಸುಪ್ರೀಂ ಕ್ಲೀನ್‌ಚಿಟ್

ತಿರುಮಲ: ತಿರುಪತಿ ದೇವಸ್ಥಾನದಲ್ಲಿ ಪ್ರಸಾದ ತಯಾರಿಕೆಯಲ್ಲಿ ಕಲಬೆರಕೆ ತುಪ್ಪ ಬಳಸಲಾಗಿದೆ ಎಂಬ ಆರೋಪದ ತನಿಖೆಗೆ ಸಹಾಯ ಮಾಡಲು ನ್ಯಾಯಾಲಯ ರಚಿಸಿರುವ ವಿಶೇಷ ತನಿಖಾ ತಂಡದ ಹೊರಗೆ ಅಧಿಕಾರಿಯನ್ನು ನೇಮಿಸಿದ್ದಕ್ಕಾಗಿ ಕೇಂದ್ರೀಯ ತನಿಖಾ ದಳ (ಸಿಬಿಐ) ನಿರ್ದೇಶಕರನ್ನು ದೋಷಪೂರಿತಗೊಳಿಸಿದ ಆಂಧ್ರಪ್ರದೇಶ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಡೆಹಿಡಿದಿದೆ. ಎಸ್‌ಐಟಿ ವಿಶೇಷ ಅಧಿಕಾರಿಯನ್ನು ನೇಮಿಸಲು ಬಯಸಿದರೆ, ಅದರಲ್ಲಿ ಏನು ತಪ್ಪಿದೆ? ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠ ಪ್ರಶ್ನಿಸಿತು.

ಸಿಬಿಐ ನಿರ್ದೇಶಕರ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ತನಿಖೆಯಲ್ಲಿ ಭಾಗಿಯಾಗಿರುವ ಅಧಿಕಾರಿಯನ್ನು ಸುಪ್ರೀಂ ಕೋರ್ಟ್‌ನ 2024ರ ನಿರ್ದೇಶನಗಳ ಅಡಿಯಲ್ಲಿ ರಚಿಸಲಾದ ಎಸ್‌ಐಟಿಯ ಸದಸ್ಯರನ್ನಾಗಿ ಅಧಿಕೃತವಾಗಿ ನೇಮಿಸಲಾಗಿಲ್ಲ ಎಂದು ಹೈಕೋರ್ಟ್ ತೀರ್ಮಾನಿಸಿದ್ದು ತಪ್ಪು ಎಂದು ವಾದಿಸಿದರು. ಆಂಧ್ರ ಸಿಎಂ ಎನ್. ಚಂದ್ರಬಾಬು ನಾಯ್ಡು, ಹಿಂದಿನ ವೈ.ಎಸ್. ಜಗನ್ ಮೋಹನ್ ರೆಡ್ಡಿ ಆಡಳಿತದಲ್ಲಿ ತಿರುಪತಿ ಲಡ್ಡು ತಯಾರಿಸಲು ಪ್ರಾಣಿಗಳ ಕೊಬ್ಬನ್ನು ಬಳಸಲಾಗಿತ್ತು ಎಂದು ಆರೋಪಿಸಿದ್ದರು. ಸಮನ್ಸ್ ಜಾರಿ ಮಾಡಲು ಅಥವಾ ಯಾವುದೇ ಸ್ವತಂತ್ರ ತನಿಖೆ ನಡೆಸಲು ರಾವ್ ಅವರಿಗೆ ಅಧಿಕಾರವಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ಹೈಕೋರ್ಟ್ ಏನು ಹೇಳಿತ್ತು?

ತಿರುಪತಿ ದೇವಸ್ಥಾನದ ಪ್ರಸಾದ (ಧಾರ್ಮಿಕ ನೈವೇದ್ಯ) ತಯಾರಿಕೆಯಲ್ಲಿ ಕಲಬೆರಕೆ ತುಪ್ಪದ ಬಳಕೆಯನ್ನು ತನಿಖೆ ಮಾಡಲು ಜೆ. ವೆಂಕಟ್ ರಾವ್ ಅವರಿಗೆ ಅವಕಾಶ ನೀಡುವ ಮೂಲಕ ಸಿಬಿಐ ನಿರ್ದೇಶಕರು 2024ರ ಸುಪ್ರೀಂ ಕೋರ್ಟ್‌ನ ನಿರ್ದೇಶನಗಳಿಗೆ ವಿರುದ್ಧವಾಗಿ ವರ್ತಿಸಿದ್ದಾರೆ ಎಂದು ಹೈಕೋರ್ಟ್ ಹೇಳಿತ್ತು. ನಿರ್ದೇಶಕರು ನಾಮನಿರ್ದೇಶನ ಮಾಡುವ ಇಬ್ಬರು ಸಿಬಿಐ ಅಧಿಕಾರಿಗಳು, ರಾಜ್ಯವು ನಾಮನಿರ್ದೇಶನ ಮಾಡುವ ಆಂಧ್ರಪ್ರದೇಶ ಪೊಲೀಸ್‌ನ ಇಬ್ಬರು ಅಧಿಕಾರಿಗಳು ಮತ್ತು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಒಬ್ಬ ಹಿರಿಯ ಅಧಿಕಾರಿಯನ್ನು ಒಳಗೊಂಡ ಐದು ಸದಸ್ಯರ ಸ್ವತಂತ್ರ ವಿಶೇಷ ತನಿಖಾ ತಂಡವನ್ನು ರಚಿಸಲು ಆದೇಶಿಸಲಾಗಿದೆ ಎಂದು ಹೈಕೋರ್ಟ್ ತಿಳಿಸಿತ್ತು.

ಇಬ್ಬರಿಗೆ ಟ್ರಂಪ್ ಭಯ ಕಾಡುತ್ತಿದೆ ಎಂದ ನ್ಯಾಟೋ ಮುಖ್ಯಸ್ಥ

ಮೋದಿ-ಪುಟಿನ್ ದಿನಾಲೂ ಮಾತುಕತೆ

ವಾಷಿಂಗ್ಟನ್: ರಷ್ಯಾದ ತೈಲ ಖರೀದಿಗಾಗಿ ಭಾರತದ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಸುಂಕಗಳು, ಮಾಸ್ಕೋದ ಮೇಲೆ ದೊಡ್ಡ ಪರಿಣಾಮ ಬೀರುತ್ತಿವೆ ಎಂದು ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅಭಿಪ್ರಾಯಪಟ್ಟಿದ್ದಾರೆ. ಇದೇ ವಿಚಾರವಾಗಿ ಮೋದಿಯವರು ಪದೇ ಪದೇ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಕರೆ ಮಾಡಿ, ಮುಂದಿನ ರಣತಂತ್ರದ ಕುರಿತು ಪ್ರಶ್ನೆ ಕೇಳು ತ್ತಿದ್ದಾರೆ ಎಂದೂ ಮಾರ್ಕ್ ರುಟ್ಟೆ ಪ್ರತಿಪಾದಿಸಿದ್ದಾರೆ. ಡೊನಾಲ್ಡ್ ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಶೇ. 50ರಷ್ಟು ಸುಂಕ ಘೋಷಣೆ ಮಾಡಿದ ಬಳಿಕ, ಭಾರತದ ಪ್ರಧಾನಿಯವರು ವ್ಲಾಡಿಮಿರ್ ಪುಟಿನ್ ಅವರಿಗೆ ಉಕ್ರೇನ್ ಕುರಿತ ಕಾರ್ಯತಂತ್ರವನ್ನು ವಿವರಿಸಲು ಒತ್ತಾಯ ಮಾಡುತ್ತಿದ್ದಾರೆ ಎಂದರೆ ಟ್ರಂಪ್ ಅವರ ಸುಂಕಗಳು ಕೆಲಸ ಮಾಡಿವೆ ಎಂದರ್ಥ ಎಂದು ನ್ಯಾಟೋ ಮುಖ್ಯಸ್ಥ ಹೇಳಿದ್ದಾರೆ.ಭಾರತದ ಮೇಲಿನ ಅಮೆರಿಕದ ಸುಂಕಗಳು ರಷ್ಯಾದ ಮೇಲೆ ಪರಿಣಾಮ ಬೀರುತ್ತಿವೆ, ಏಕೆಂದರೆ ನವದೆಹ ಲಿಯು ನಿರಂತರವಾಗಿ ಮಾಸ್ಕೋ ಜೊತೆ ದೂರವಾಣಿ ಯಲ್ಲಿ ಮಾತನಾಡುತ್ತಿದ್ದು, ಉಕ್ರೇನ್ ಕಾರ್ಯತಂತ್ರದ ಕುರಿತು ಸ್ಪಷ್ಟನೆ ನೀಡುವಂತೆ ಒತ್ತಡ ಹೇರುತ್ತಿದೆ. ಹೀಗಾಗಿ ಡೊನಾಲ್ಡ್ ಟ್ರಂಪ್ ಅವರ ಊಹೆ ಸರಿಯಾಗಿದೆ ಎಂದು ಮಾರ್ಕ್ ರುಟ್ಟೆ ಅಮೆರಿಕದ ಅಧ್ಯಕ್ಷರು ಕೊಂಡಾಡಿದ್ದಾರೆ, ಆದರೆ ಭಾರತ ಇದನ್ನು ನಿರಾಕರಿಸಿದೆ.

ಡ್ರಗ್ಸ್ ಮೇಲೆ ಟ್ರಂಪ್ 100% ಸುಂಕ | ಐಟಿ, ಫಾರ್ಮಾ ಷೇರು ಭಾರೀ ಕುಸಿತ

ಷೇರುಪೇಟೆ ತಲ್ಲಣ: ಸೆನ್ಸೆಕ್ಸ್ 700 ಅಂಕ ಪತನ

ಮುಂಬೈ: ಸ್ಟಾಕ್ ಮಾರ್ಕೆಟ್‌ನಲ್ಲಿ ಶುಕ್ರವಾರ ಸೆನ್ಸೆಕ್ಸ್ ಮತ್ತು ನಿಫ್ಟಿ ಭಾರೀ ಕುಸಿತಕ್ಕೀಡಾಯಿತು. ಅಮೆರಿಕಕ್ಕೆ ಆಮದಾಗುವ ಬ್ರ್ಯಾಂಡೆಡ್ ಡ್ರಗ್ಸ್ ಆಮದಿನ ಮೇಲೆ 100% ಸುಂಕವನ್ನು ಘೋಷಿಸಿದ್ದು, ಇದರ ಬೆನ್ನಲ್ಲೇ ಷೇರು ಸೂಚ್ಯಂಕಗಳು ಕುಸಿದಿವೆ. ಸೆನ್ಸೆಕ್ಸ್ ಮಧ್ಯಂತರದಲ್ಲಿ 700 ಅಂಕ ಕುಸಿತಕ್ಕೀಡಾಯಿತು.



ಟೆಕ್ನಾಲಜಿ, ಫಾರ್ಮಾಸ್ಯುಟಿಕಲ್ಸ್, ಮಿಡ್-ಕ್ಯಾಪ್ ಮತ್ತು ಎನರ್ಜಿ ಸೆಕ್ಟರ್ ಷೇರುಗಳು ಇಳಿಯಿತು. ದಿನದ ಮುಕ್ತಾಯಕ್ಕೆ ಸೆನ್ಸೆಕ್ಸ್ 733 ಅಂಕ ಕಳೆದುಕೊಂಡು 80,426ಕ್ಕೆ ಸ್ಥಿರವಾದರೆ, ನಿಫ್ಟಿ 236 ಅಂಕ ನಷ್ಟದಲ್ಲಿ 24,654ಕ್ಕೆ ಸ್ಥಿರವಾಯಿತು. ಶುಕ್ರವಾರ ಔಷಧ ಕಂಪನಿಗಳ ಷೇರುಗಳ ದರದಲ್ಲಿ 5% ಇಳಿಕೆ ದಾಖಲಾಯಿತು. ಟ್ರಂಪ್ ಅವರು ಬ್ರಾಂಡೆಡ್ ಮತ್ತು ಪೇಟೆಂಟ್ ಇರುವ ಔಷಧಗಳ ಆಮದು ಮೇಲೆ 100% ಟ್ಯಾಕ್ಸ್ ವಿಧಿಸಿದ್ದಾರೆ. ಜತೆಗೆ ಹೆವಿ ಡ್ಯೂಟಿ ಟ್ರಕ್ಸ್‌ಗಳ ಮೇಲೆ 25%, ಕಿಚನ್ ಕ್ಯಾಬಿನೆಟ್ಸ್ ಮೇಲೆ 50% ಟ್ಯಾಕ್ಸ್ ವಿಧಿಸಿದ್ದಾರೆ.

ಭಾರತದ ಫಾರ್ಮಾಸ್ಯುಟಿಕಲ್ಸ್ ರಫ್ತಿನಲ್ಲಿ ಮೂರನೇ ಒಂದರಷ್ಟು ಪಾಲು ಅಮೆರಿಕಕ್ಕೆ ರಫ್ತಾಗುತ್ತಿದೆ. ಟ್ರಂಪ್ ಇದೀಗ 100% ಟ್ಯಾಕ್ಸ್ ವಿಧಿಸಿರುವುದರಿಂದ ಔಷಧ ಕಂಪನಿಗಳು ಆಫ್ರಿಕದ ರಾಷ್ಟ್ರಗಳು ಸೇರಿದಂತೆ ಇತರ ಮಾರುಕಟ್ಟೆಯನ್ನು ಅವಲಂಬಿಸುವ ನಿರೀಕ್ಷೆ ಇದೆ. ಸನ್ ಫಾರ್ಮಾ ಷೇರು ದರ ಅತಿ ಹೆಚ್ಚು ನಷ್ಟಕ್ಕೀಡಾಗಿ 5%ಗೂ ಹೆಚ್ಚು ಇಳಿಯಿತು. 52 ವಾರಗಳ ಕನಿಷ್ಠ ಮಟ್ಟಕ್ಕಿಳಿಯಿತು. 1,547 ರು.ಗೆ ಇಳಿಯಿತು. ಬಯೊಕಾನ್ ಷೇರು ದರ 344 ರು.ಗೆ ಇಳಿಯಿತು, ಜೂಡೂಸ್ ಲೈಫ್ ಸೈನ್ಸ್ 990/-ಕ್ಕೆ ತಗ್ಗಿತು.

ಟ್ರಂಪ್ ಸರಕಾರ ಎಚ್ -1ಬಿ ವೀಸಾ ಶುಲ್ಕವನ್ನು ಹೆಚ್ಚಿಸಿರುವುದು ಕೂಡ ನಕಾರಾತ್ಮಕ ಪ್ರಭಾವ ಬೀರಿದೆ. ಅಕ್ಟೋಬರ್ ಮತ್ತು ಡಿಸೆಂಬರ್‌ನಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ತನ್ನ ಬಡ್ಡಿ ದರ ಇಳಿಸುವ ಸಾಧ್ಯತೆ ಇದೆ. ಈ ವರ್ಷ ಇದುವರೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು 1 ಲಕ್ಷದ 44 ಸಾವಿರ ಕೋಟಿ ರುಪಾಯಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ದಸರಾ: ಕನ್ನಡ ಹಾಡನ್ನು ಹಂಚಿದ ಪ್ರಧಾನಿ ಮೋದಿ

ದೆಹಲಿ: ನವರಾತ್ರಿಯ ಸಂದರ್ಭದಲ್ಲಿ ಕನ್ನಡದಲ್ಲಿಯೇ ಮಾತೆ ಸರಸ್ವತಿ, ದುರ್ಗೆಗೆ ಸಂಬಂಧಿಸಿದಂತೆ ಸಾಕಷ್ಟು ಹಾಡನ್ನು ಪ್ರಧಾನಿ ಮೋದಿ ಹಂಚಿದ್ದಾರೆ. 1984ರಲ್ಲಿ ಬಿಡುಗಡೆಗೊಂಡ ಹೊಸ ಇತಿಹಾಸ ಚಿತ್ರದಲ್ಲಿ ಖ್ಯಾತ ಗಾಯಕಿ ಎಸ್. ಜಾನಕಿ ಅವರು ಹಾಡಿರುವ 'ಕಮಲದ ಮೊಗದೊಳೆ ಕಮಲದ ಕಣ್ಣೊಳೆ ಕಮಲವ ಕೈಯಲ್ಲಿ ಹಿಡಿದೊಳೆ' ಎಂಬ ಕನ್ನಡ ಭಕ್ತಿಗೀತೆ ಯನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡು ದೇಶದ ಎಲ್ಲಾ ನಾಗರಿ ಕರಿಗೆ ನವರಾತ್ರಿಗೆ ಶುಭ ಕೋರಿದ್ದಾರೆ.ಮೋದಿಯವರ ಅಧಿಕೃತ ಟ್ವಿಟರ್ ಖಾತೆಯಲ್ಲಿ ಕನ್ನಡದ ಈ ಪ್ರಸಿದ್ಧ ಭಕ್ತಿಗೀತೆಯ ವಿಡಿಯೋ ಹಂಚಿಕೊಳ್ಳಲಾಗಿದ್ದು, ಲಕ್ಷಾಂತರ ಜನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಶ್ರೀದೇವಿಯು ಎಲ್ಲಾ ಭಕ್ತರಿಗೆ ಸಂತೋಷ, ಸಮೃದ್ಧಿ ಮತ್ತು ಅದೃಷ್ಟವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಆಕೆಯ ಪ್ರೀತಿಯ ವಾತ್ಸಲ್ಯವು ಪ್ರತಿಯೊಬ್ಬರ ಜೀವನದಲ್ಲೂ ಹೊಸ ಶಕ್ತಿ ಮತ್ತು ಉತ್ಸಾಹವನ್ನು ತುಂಬಲಿ' ಎಂದು ಟ್ವೀಟ್ ಮಾಡಲಾ ಗಿದೆ. ಶುಕ್ರವಾರ ಬೆಳಗ್ಗೆ 9.48ಕ್ಕೆ ಹಂಚಿಕೊಂಡಿರುವ ಈ ಪೋಸ್ಟ್ ಈಗಾಗಲೇ 25ಲಕ್ಷಕ್ಕೂ ಅಧಿಕ ವೀಕ್ಷಣೆಯನ್ನು ಪಡೆದು ಕೊಂಡಿದೆ, ಜೊತೆಗೆ ಸಾಕಷ್ಟು ಕನ್ನಡಿಗರು ಇದು ಕನ್ನಡಿಗರ ಗರಿಮೆ ಎಂದು ಕಾಮೆಂಟ್ ಮಾಡಿದ್ದಾರೆ.

ಲಡಾಕ್: ಸೋನಮ್ ವಾಂಗ್‌ಚುಕ್ ಬಂಧನ

ಲಡಾಕ್: ಇಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಕನಿಷ್ಠ ನಾಲ್ವರು ಸಾವನ್ನಪ್ಪಿ, 90ಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಘಟನೆಗೆ ಮೂಲ ಕಾರಣ ಸೋನಮ್ ವಾಂಗ್‌ಚುಕ್ ಎಂದು ಆರೋಪಿಸಿ, ಲೇಹ್ ಪೊಲೀಸರು ಶುಕ್ರವಾರ ಅವರನ್ನು ಬಂಧಿಸಿದ್ದಾರೆ. ಲೇಹ್ ಅಪೆಕ್ಸ್ ಬಾಡಿ ಮತ್ತು ಕಾರ್ಗಿಲ್ ಡೆಮಾಕ್ರಟಿಕ್ ಅಲೈಯನ್ಸ್ ಜತೆಗೂಡಿ ವಾಂಗ್ಚುಕ್ ನೇತೃತ್ವದಲ್ಲಿ ಲಡಾಖ್‌ಗೆ ಪೂರ್ಣ ರಾಜ್ಯ ಸ್ಥಾನಮಾನ ಮತ್ತು ಭಾರತೀಯ ಸಂವಿಧಾನದ ಆರನೇ ವೇಳಾಪಟ್ಟಿಯ ಅಡಿಯಲ್ಲಿ ಸೇರ್ಪಡೆಗಾಗಿ ಈ ಪ್ರತಿಭಟನೆ ನಡೆಸಲಾಗಿತ್ತು. ಬೇಡಿಕೆಗಳನ್ನು ಮುಂದಿಟ್ಟುಕೊಂಡು, ವಾಂಗ್‌ಚುಕ್ ಸೆಪ್ಟೆಂಬರ್ 10ರಂದು ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರು. ಬುಧವಾರ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವಾಲಯ ತಡರಾತ್ರಿ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ಲಡಾಕ್‌ಗೆ ರಾಜ್ಯದ ಸ್ಥಾನಮಾನ ಮತ್ತು ಸಾಂವಿಧಾನಿಕ ರಕ್ಷಣೆಗೆ ಒತ್ತಾಯಿಸಿ ಉಪವಾಸ ನಡೆಸುತ್ತಿದ್ದ ವಾಂಗ್ಚುಕ್ ನೀಡಿದ ಹೇಳಿಕೆಗಳು ಯುವಕರನ್ನು ಹಿಂಸಾಚಾರಕ್ಕೆ ಪ್ರಚೋದಿಸಿದೆ ಎಂದು ಹೇಳಿದೆ. ಪ್ರತಿಭಟನೆಯಲ್ಲಿ ಶಾಲಾ ಬಾಲಕಿಯರು, ಕಾಲೇಜು ವಿದ್ಯಾರ್ಥಿಗಳು, ಸಾಧುಗಳು ಭಾಗವಹಿಸಿದ್ದರು.



ಬಿಹಾರ: ತೇಜ್ ಪ್ರತಾಪ್ ಹೊಸ ಪಕ್ಷ ಘೋಷಣೆ

ಪಾಟ್ನಾ: ಬಿಹಾರ ವಿಧಾನಸಭೆ ಚುನಾವಣೆಗೂ ಮುನ್ನ ಮಾಜಿ ಸಚಿವ ಹಾಗೂ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಅವರ ಪುತ್ರ ತೇಜ್ ಪ್ರತಾಪ್ ಯಾದವ್ ಅವರು ಶುಕ್ರವಾರ ಹೊಸ ರಾಜಕೀಯ ಪಕ್ಷವನ್ನು ಘೋಷಿಸಿದ್ದಾರೆ. ಲಾಲು ಪ್ರಸಾದ್ ಯಾದವ್ ಅವರು ಇತ್ತೀಚೆಗೆ ತೇಜ್ ಪ್ರತಾಪ್ ಯಾದವ್ ಅವರನ್ನು ಆರ್ ಜೆಡಿಯಿಂದ ಉಚ್ಚಾಟಿಸಿದ್ದರು. ಹೊಸ ಪಕ್ಷ ಘೋಷಿಸಿದ ತೇಜ್ ಪ್ರತಾಪ್, ಮುಂಬರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷ 'ಜನಶಕ್ತಿ ಜನತಾದಳ' ಎಂದಾಗಿದ್ದು, 'ಕಪ್ಪು ಹಲಗೆ'ಯನ್ನು ಚುನಾವಣಾ ಚಿಹ್ನೆಯಾಗಿಟ್ಟುಕೊಂಡು ಸ್ಪರ್ಧಿಸಲಿದೆ ಎಂದು ಹೇಳಿದ್ದಾರೆ. ನಾವು ಬಿಹಾರದ ಒಟ್ಟಾರೆ ಅಭಿವೃದ್ಧಿಗೆ ಸಂಪೂರ್ಣವಾಗಿ ಸಮರ್ಪಿತರಾಗಿದ್ದೇವೆ ಮತ್ತು ಸಿದ್ಧರಿದ್ದೇವೆ. ಬಿಹಾರದಲ್ಲಿ ಸಂಪೂರ್ಣ ಬದಲಾವಣೆ ತರುವುದು ನಮ್ಮ ಗುರಿಯಾಗಿದೆ. ಬಿಹಾರದ ಒಟ್ಟಾರೆ ಅಭಿವೃದ್ಧಿಗಾಗಿ ನಾವು ದೀರ್ಘ ಹೋರಾಟವನ್ನು ಮಾಡಲು ಸಿದ್ಧರಿದ್ದೇವೆ ಎಂದು ತೇಜ್ ಪ್ರತಾಪ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹಸಿರು ಪಟಾಕಿ ಬಳಕೆಗೆ ಷರತ್ತುಬದ್ಧ ಅನುಮತಿ

ದೆಹಲಿ: ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ (ಎನ್‌ಸಿಆರ್) ವಾಯುಮಾಲಿನ್ಯ ಹೆಚ್ಚುತ್ತಿದೆ ಎಂಬ ಕಳವಳದ ನಡುವೆಯೇ, ಹಸಿರು ಪಟಾಕಿ ಬಳಕೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಷರತ್ತುಬದ್ಧ ಅನುಮತಿ ನೀಡಿದೆ. ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಎಂ.ಸಿ ಮಹ್ತಾ ಅವರ 1985ರ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಕೋರ್ಟ್ ಈ ಆದೇಶ ನೀಡಿದೆ. ಆದರೆ ದೆಹಲಿಯಲ್ಲಿ ಹಸಿರು ಪಟಾಕಿಗಳನ್ನು ಅನುಮತಿ ಇಲ್ಲದೆ ಮಾರಾಟ ಮಾಡುವಂತಿಲ್ಲ ಎಂಬ ಷರತ್ತನ್ನು ನ್ಯಾಯಾಲಯ ವಿಧಿಸಿದೆ. 'ಮಾಲಿನ್ಯ ತಗ್ಗಿಸುವುದು ಅತ್ಯುನ್ನತವಾದರೂ, ಪಟಾಕಿಯ ಸಂಪೂರ್ಣ ನಿಷೇಧವು ಇದಕ್ಕೆ ಪ್ರಾಯೋಗಿಕ ಅಥವಾ ಮಾದರಿಯಾದ ಕ್ರಮವಲ್ಲ' ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ತ್ರಿಸದಸ್ಯ ಪೀಠ ಅಭಿಪ್ರಾಯಪಟ್ಟಿತು. ಬಿಹಾರದ ದೃಷ್ಟಾಂತ ನೀಡಿದ ನ್ಯಾಯಪೀಠ, ಅಲ್ಲಿ ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಿದ ನಂತರ, ಅಕ್ರಮ ಗಣಿಗಾರಿಕೆ ಮಾಫಿಯಾ ಹೇಗೆ ಶಕ್ತವಾಗಿ ಬೆಳೆಯಿತು ಎನ್ನುವುದನ್ನು ವಿವರಿಸಿತು. ಹೀಗಾಗಿ ದೆಹಲಿಯಲ್ಲಿ ಪಟಾಕಿ ಬಳಕಗೆ ಸಂಪೂರ್ಣ ನಿಷೇಧ ಹೇರುವ ಮೊದಲು, ಇಂತಹ ಪಟಾಕಿ ತಯಾರಿಕಾ ಘಟಕಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಜೀವನೋಪಾಯದ ಹಕ್ಕುಗಳನ್ನೂ ಗಮನದ ಲ್ಲಿಟ್ಟುಕೊಂಡು ಸಮತೋಲಿತ ಕ್ರಮ ಕೈಗೊಳ್ಳುವಂತೆ ಸೂಚಿಸಿತು.

ಮಿಗ್-21 ಯುದ್ಧ ವಿಮಾನಕ್ಕೆ ಭಾವುಕ ವಿದಾಯ

ದೆಹಲಿ: ಭಾರತೀಯ ವಾಯುಪಡೆಯು ಶುಕ್ರವಾರ ತನ್ನ ಪ್ರಖ್ಯಾತ ಮಿಗ್-21 ಯುದ್ಧ ವಿಮಾನವನ್ನು ಸುಮಾರು ಅರವತ್ತು ವರ್ಷಗಳ ಸೇವೆಯ ನಂತರ ನಿವೃತ್ತಿಗೊಳಿಸಿದೆ. ಭಾರತೀಯ ಮಿಲಿಟರಿ ವಾಯುಯಾನದಲ್ಲಿ ಒಂದು ಯುಗದ ಅಂತ್ಯವನ್ನು ಸೂಚಿಸುವ ಮೂಲಕ ಚಂಡೀಗಢದಲ್ಲಿ ನಡೆದ ಸಮಾರಂಭದಲ್ಲಿ ಐಕಾನಿಕ್ ಮಿಗ್-21 ಯುದ್ಧ ವಿಮಾನದ ಅಂತಿಮ ಹಾರಾಟ ನಡೆಸಲಾಯಿತು. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮಾರಂಭದಲ್ಲಿ ಭಾಗವಹಿಸಿ, ಆ ವಿಮಾನದ ಅಪ್ರತಿಮ ಪರಂಪರೆಗೆ ಗೌರವ ಸಲ್ಲಿಸಿದರು.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ದೀರ್ಘಕಾಲದಿಂದ, ಮಿಗ್-21 ಹಲವಾರು ವೀರ ಕಾರ್ಯಗಳಿಗೆ ಸಾಕ್ಷಿಯಾಗಿದೆ. ಅದರ ಕೊಡುಗೆ ಒಂದೇ ಘಟನೆ ಅಥವಾ ಒಂದೇ ಯುದ್ಧಕ್ಕೆ ಸೀಮಿತವಾಗಿಲ್ಲ ಎಂದು ಹೇಳಿದರು. 1971ರ ಯುದ್ಧ, ಕಾರ್ಗಿಲ್ ಯುದ್ಧ, ಬಾಲಕೋಟ್ ವೈಮಾನಿಕ ದಾಳಿ ಮತ್ತು ಆಪರೇಷನ್ ಸಿಂದೂರ್‌ನಲ್ಲಿಯೂ ಸಹ ಫೈಟರ್ ಜೆಟ್ ನಿರ್ಣಾಯಕ ಪಾತ್ರ ವಹಿಸಿದೆ. ಮಿಗ್-21 ನಮ್ಮ ಸಶಸ್ತ್ರ ಪಡೆಗಳಿಗೆ ಅಗಾಧ ಶಕ್ತಿಯನ್ನು ಒದಗಿಸದ ಒಂದು ಕ್ಷಣವೂ ಇರಲಿಲ್ಲ ಎಂದು ಸಿಂಗ್ ಹೇಳಿದರು. ಐತಿಹಾಸಿಕ ಕಾರ್ಯಾಚರಣೆಗಳು ನಡೆದಾಗಲೆಲ್ಲಾ, ಮಿಗ್ -21 ತ್ರಿವರ್ಣ ಧ್ವಜದ ಗೌರವವನ್ನು ಹೆಚ್ಚಿಸಿದೆ. ಆದ್ದರಿಂದ ಈ ವಿದಾಯವು ನಮ್ಮ ಸಾಮೂಹಿಕ ನೆನಪುಗಳು, ನಮ್ಮ ರಾಷ್ಟ್ರೀಯ ಹೆಮ್ಮೆ ಮತ್ತು ಧೈರ್ಯ, ತ್ಯಾಗ ಮತ್ತು ಶ್ರೇಷ್ಠತೆಯ ಕಥೆಯನ್ನು ಬರೆದ ಆ ಪ್ರಯಾಣದ ಬಗ್ಗೆಯೂ ಆಗಿದೆ ಎಂದು ಅವರು ಹೇಳಿದರು. ಇದು ಕೇವಲ ಫೈಟರ್ ಜೆಟ್ ಅಲ್ಲ, ಬದಲಾಗಿ ನಾವು ಆಳವಾದ ಬಾಂಧವ್ಯ ಹೊಂದಿರುವ ನಮ್ಮ ಕುಟುಂಬ ಸದಸ್ಯ. ಮಿಗ್-21 ನಮ್ಮ ವಿಶ್ವಾಸವನ್ನು ಹೆಚ್ಚಿಸಿದೆ, ನಮ್ಮ ಕಾರ್ಯತಂತ್ರವನ್ನು ಬಲಪಡಿಸಿದೆ ಮತ್ತು ಜಾಗತಿಕ ವೇದಿಕೆಯಲ್ಲಿ ನಮ್ಮನ್ನು ನಾವು ಸ್ಥಾಪಿಸಿಕೊಳ್ಳಲು ಸಹಾಯ ಮಾಡಿದೆ ಎಂದು ಸಿಂಗ್ ಇದೇ ವೇಳೆ ಹೇಳಿದರು.

ಯುದ್ಧ ವಿಮಾನವು ಕುಟುಂಬ ಸದಸ್ಯ ಎಂದು ವಿದಾಯ ಸಮಾರಂಭದ ವೇಳೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ವರ್ಣನೆ

- 1962ರಲ್ಲಿ ವಾಯುಪಡೆಗೆ ಮಿಗ್-21 ಸೇರ್ಪಡೆ
- 60 ವರ್ಷ ಕಾಲದ ಸೇವೆಯ ಬಳಿಕ ಯುಗಾಂತ್ಯ
- ಹೆಚ್ಚಿನ ಪ್ರಮುಖ ಕಾರ್ಯಾಚರಣೆಗಳಲ್ಲಿ ಪ್ರಮುಖ ಪಾತ್ರ
- ಶುಕ್ರವಾರ ನಡೆದ ಅಂತಿಮ ಹಾರಾಟ

ಪಾಕ್ ಫೈಟರ್ ಜೆಟ್ ಹೊಡೆದುರುಳಿಸಿದ್ದ ಮಿಗ್

1971ರ ಬಾಂಗ್ಲಾದೇಶ ವಿಮೋಚನಾ ಯುದ್ಧದಲ್ಲಿ ಮಿಗ್-21ಗಳು (ಟೈಪ್ 77 ಶ್ರೇಣಿ) ಭಾರತ ಮೇಲುಗೈ ಸಾಧಿಸಲು ಪ್ರಮುಖ ಪಾತ್ರ ವಹಿಸಿದ್ದವು. 1965ರ ಯುದ್ಧ ಮತ್ತು 1999ರ ಪಾಕಿಸ್ತಾನದೊಂದಿಗಿನ ಕಾರ್ಗಿಲ್ ಸಂಘರ್ಷದಲ್ಲಿ ಈ ಫೈಟರ್ ಜೆಟ್ ಐಎಎಫ್‌ನ ಪ್ರಮುಖ ಭಾಗವಾಗಿತ್ತು. 2019ರಲ್ಲಿ ಶ್ರೀನಗರ ಮೂಲದ 51ನೇ ಸಂಖ್ಯೆಯ ಸ್ಕ್ವಾಡ್ರನ್‌ನ ಗ್ರೂಪ್ ಕ್ಯಾಪ್ಟನ್ ಅಭಿನಂದನ್ ವರ್ಧಮಾನ್ ಮಿಗ್-21 ಬೈಸನ್ ಅನ್ನು ಹಾರಿಸುತ್ತಿದ್ದಾಗ, ಪಾಕಿಸ್ತಾನ ವಾಯುಪಡೆಯ ಎಫ್-16 ವಿಮಾನವನ್ನು ಹೊಡೆದುರುಳಿಸಿದ್ದರು, ಆಗ ಮಿಗ್‌ನ ಶೌರ್ಯ ಸಾಹಸ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿತ್ತು.

ಐಎಎಫ್‌ನ ಒಂದು ಯುಗದ ಅಂತ್ಯ

1962ರಲ್ಲಿ ಭಾರತೀಯ ವಾಯುಪಡೆಗೆ ಸೇರ್ಪಡೆಗೊಂಡ ಮಿಗ್-21 ಭಾರತದ ಮೊದಲ ಸೂಪರ್‌ಸಾನಿಕ್ ಯುದ್ಧವಿಮಾನವಾಗಿ, ದಶಕಗಳ ಕಾಲ ವಾಯುಪಡೆಯ ಬೆನ್ನೆಲುಬು ಎಂಬ ಖ್ಯಾತಿಯನ್ನು ಗಳಿಸಿತು. ವೇಗ ಮತ್ತು ಚುರುಕುತನಕ್ಕೆ ಹೆಸರುವಾಸಿಯಾದ ಇದು ಭಾರತಕ್ಕೆ ಬಹು ಯುದ್ಧಗಳು ಮತ್ತು ಕಾರ್ಯಾಚರಣೆಗಳಲ್ಲಿ ಭಾರತಕ್ಕೆ ಗಮನಾರ್ಹ ಮುನ್ನಡೆಯನ್ನು ನೀಡಿತು. ಮಿಗ್-21ರ ನಿವೃತ್ತಿಯು ವಾಯುಪಡೆಗೆ ಒಂದು ಐತಿಹಾಸಿಕ ಅಧ್ಯಾಯದ ಅಂತ್ಯವಾಗಿದೆ.

ಸಮಾಚಾರ ಸಣ್ಣದಲ್ಲ

ಕ್ರಿಕೆಟ್ ನನಗೆ ಸ್ಫೂರ್ತಿ: ಉಸೇನ್ ಬೋಲ್ಟ್

ಮುಂಬೈ: ನನ್ನ ಸಾಧನೆಗೆ ಕ್ರಿಕೆಟ್ ಆಟಗಾರರ ಪರಿಶ್ರಮವೇ ಸ್ಫೂರ್ತಿಯಾಗಿದೆ. ಅವರು ಕ್ರೀಡಾಂಗಣದಲ್ಲಿ ಸರ್ವಸ್ವವನ್ನು ನೀಡುವುದನ್ನು ನೋಡುತ್ತಲೇ ನಾನು ಅವರ ಹಾದಿಯಲ್ಲಿ ಸಾಗಲು ಪ್ರಯತ್ನಿಸಿದ್ದೆ ಎಂದು ಜಗತ್ತಿನ ವೇಗದ ಓಟಗಾರ ಖ್ಯಾತಿಯ ಉಸೇನ್ ಬೋಲ್ಟ್ ಅವರು ಹೇಳಿದ್ದಾರೆ. ನಾನು ಅತಿ ದೊಡ್ಡ ಕ್ರಿಕೆಟ್ ಅಭಿಮಾನಿ. ಕ್ರಿಕೆಟ್ ಪಂದ್ಯಗಳನ್ನು ನೋಡುತ್ತಲೇ ನನ್ನ ಬಾಲ್ಯವನ್ನು ಕಳೆದಿದ್ದೇನೆ. ಕ್ರಿಕೆಟಿಗರು ತಮ್ಮ ಪರಿಶ್ರಮದ ಮೂಲಕ ಬೆಳೆಯುವುದನ್ನು ಗಮನಿಸುತ್ತಾ, ನಾನು ಕೂಡ ಅವರ ದಾರಿಯಲ್ಲಿ ಸಾಗಲು ಪ್ರಯತ್ನಿಸಿದ್ದೇನೆ' ಎಂದು ಬೋಲ್ಟ್ ತಿಳಿಸಿದ್ದಾರೆ. ಕಠಿಣ ಪರಿಶ್ರಮ ಮತ್ತು ಕ್ರೀಡೆಗಾಗಿ ಸಮರ್ಪಣೆ ಮಾಡಿಕೊಂಡಿದ್ದರಿಂದ ಮಾತ್ರ ಸಾಧನೆ ಮಾಡಲು ಸಾಧ್ಯವಾಯಿತು. ನಾನು ಓಡುವುದನ್ನು ಇಷ್ಟಪಡುತ್ತೇನೆ, ನಾನು ಜಗತ್ತಿನ ನಂಬರ್ ಒನ್ ಓಟಗಾರನಾಗುವ ಗುರಿ ಹೊಂದಿದ್ದೆ. ಸತತ ಪರಿಶ್ರಮದಿಂದ ಅದು ಸಾಧ್ಯವಾಯಿತು ಎಂದು ಹೇಳಿದ್ದಾರೆ. ಕ್ರಿಸ್‌ಗೇಲ್, ಮೈಕೆಲ್ ಹೋಲ್ಡಿಂಗ್ ಕೋರ್ಟ್ನಿ ವಾಲ್ಷ್ ಸೇರಿದಂತೆ ಹಲವು ತಾರಾ ಕ್ರಿಕೆಟಿಗರು ಉಸೇನ್‌ಬೋಲ್ಟ್ ಅವರ ಸ್ವದೇಶ ಜಮೈಕಾ ಮೂಲದವರಾಗಿದ್ದಾರೆ. ಒಲಿಂಪಿಕ್‌ನಲ್ಲಿ 8 ಚಿನ್ನ ಹಾಗೂ 11 ವಿಶ್ವ ಚಾಂಪಿಯನ್‌ಶಿಪ್‌ಚಿನ್ನದ ಪದಕಗಳನ್ನು ಗೆದ್ದಿದ್ದ ಉಸೇನ್‌ಬೋಲ್ಟ್, ಕೇವಲ 9.58 ಸೆಕೆಂಡ್‌ಗಳಲ್ಲಿ 100 ಮೀ ಓಟವನ್ನು ಪೂರ್ಣಗೊಳಿಸಿ ವಿಶ್ವ ದಾಖಲೆ ಬರೆದಿದ್ದರು. ಅವರು 2017ರಲ್ಲಿ ನಿವೃತ್ತಿ ಘೋಷಿಸಿದ್ದರು.

ಆಟಕ್ಕೂ ಮುನ್ನವೇ ವಿಂಡೀಸ್‌ಗೆ ಆಘಾತ

ದೆಹಲಿ: ಗಾಯದ ಕಾರಣ ವೆಸ್ಟ್ ಇಂಡೀಸ್ ತಂಡದ ವೇಗದ ಬೌಲರ್ ಶಮರ್ ಜೋಸೆಫ್ ಭಾರತ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಯಿಂದ ಹೊರ ಬಿದ್ದಿದ್ದಾರೆ. ಈ ಹಿನ್ನೆಲೆಯಲ್ಲಿ ಟೆಸ್ಟ್ ಸರಣಿಗೂ ಮುನ್ನ ಪ್ರವಾಸಿ ವಿಂಡೀಸ್‌ಗೆ ಭಾರಿ ಹಿನ್ನಡೆಯಾಗಿದೆ. ಗಾಯಾಳು ಶಮರ್ ಜೋಸೆಫ್ ಅವರ ಸ್ಥಾನಕ್ಕೆ ಆಲ್‌ರೌಂಡರ್ ಜೋಹಾನ್ ಲೇನ್ ಅವರಿಗೆ ಟೆಸ್ಟ್ ತಂಡದಲ್ಲಿ ಸ್ಥಾನವನ್ನು ನೀಡಲಾಗಿದೆ. ಅಕ್ಟೋಬರ್ 2 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮೊದಲ ಪಂದ್ಯದ ಮೂಲಕ ಟೆಸ್ಟ್ ಸರಣಿ ಆರಂಭವಾಗಲಿದೆ.

ಭಾರತ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಶಮರ್ ಜೋಸೆಫ್ ಅವರು ವೆಸ್ಟ್ ಇಂಡೀಸ್ ತಂಡಕ್ಕೆ ಪ್ರಮುಖ ಬೌಲರ್ ಆಗಿದ್ದರು. ಅವರು ಇಲ್ಲಿಯವರೆಗೂ ಆಡಿದ ಮೂರು ಟೆಸ್ಟ್ ಪಂದ್ಯಗಳಿಂದ 22 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಈ ವರ್ಷ ಅತಿ ಹೆಚ್ಚು ಐದು ವಿಕೆಟ್ ಸಾಧನೆ ಮಾಡಿದ ಬೌಲರ್‌ಗಳ ಪೈಕಿ ಅಗ್ರ ಸ್ಥಾನವನ್ನು ಅಲಂಕರಿಸಿದ್ದಾರೆ. ಅಕ್ಟೋಬರ್ 18 ರಂದು ಪ್ರಾರಂಭವಾಗಲಿರುವ ಬಾಂಗ್ಲಾದೇಶ ವಿರುದ್ಧದ ಸೀಮಿತ ಓವರ್‌ಗಳ ಸರಣಿಗೆ ಮುಂಚಿತವಾಗಿ ಶಮರ್ ಜೋಸೆಫ್ ಮತ್ತೊಮ್ಮೆ ಫಿಟ್ನೆಸ್ ಪರೀಕ್ಷೆಗೆ ಒಳಗಾಗಲಿದ್ದಾರೆ. ಟೆಸ್ಟ್ ಬಳಿಕ ಮೂರು ಪಂದ್ಯಗಳ ಏಕದಿನ ಸರಣಿ ಮತ್ತು ಅಷ್ಟೇ ಪಂದ್ಯಗಳ ಟಿ20ಐ ಸರಣಿ ನಡೆಯಲಿದೆ.

ಏಷ್ಯಾಕಪ್ ಕ್ರಿಕೆಟ್ ಸೂಪರ್-4 ಕೊನೆಯ ಪಂದ್ಯ | ಮತ್ತೆ ಮಿಂಚಿದ ಅಭಿಷೇಕ್ ಶರ್ಮಾ

ಲಂಕಾಗೆ 203 ರನ್ ಗುರಿ

ಮತ್ತೆ ಮಿಂಚಿದ ಅಭಿಷೇಕ್

ತಿಲಕ್: ಬಿರುಸಿನ ಬ್ಯಾಟಿಂಗ್

ದುಬೈ: ಇಲ್ಲಿನ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಶುಕ್ರವಾರ ನಡೆದ ಏಷ್ಯಾಕಪ್ ಟಿ20 ಕ್ರಿಕೆಟ್ ಸೂಪರ್-4 ಕೊನೆಯ ಪಂದ್ಯದಲ್ಲಿ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್ ತಿಲಕ್ ವರ್ಮಾರವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿ, ಲಂಕಾಗೆ 203 ರನ್ ಗೆಲುವಿನ ಗುರಿ ನೀಡಿದೆ.

ಟಾಸ್ ಗೆದ್ದ ಲಂಕಾ ಮೊದಲು ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ಭಾರತಕ್ಕೆ ನಿರೀಕ್ಷಿತ ಆರಂಭ ಸಿಗಲಿಲ್ಲ. ಕೇವಲ 4 ರನ್ ಗಳಿಸಿದ ಆರಂಭಿಕ ಆಟಗಾರ ಶುಭ್‌ಮನ್ ಗಿಲ್ ತಂಡದ ಮೊತ್ತ 15 ಆಗಿದ್ದಾಗ ತಮ್ಮ ವಿಕೆಟ್ ಒಪ್ಪಿಸಿ ಪೆವಿಲಿಯನ್ ತೆರಳಿದರು. ಆ ಬಳಿಕ ನಾಯಕ ಸೂರ್ಯಕುಮಾರ್ ಯಾದವ್-ಅಭಿಷೇಕ್ ಮಧ್ಯೆ 3ನೇ ವಿಕೆಟ್ ಜತೆಯಾಟ ಸ್ವಲ್ಪ ಹೊತ್ತು ಮುಂದುವರಿಯಿತು. ಆದರೆ ತಂಡದ ಮೊತ್ತ 74 ತಲುಪಿದಾಗ 12 ರನ್ ಗಳಿಸಿದ್ದ ಸೂರ್ಯಕುಮಾರ್ ಯಾದವ್, ಹಸರಂಗ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯೂ ಬಲೆಯಲ್ಲಿ ಸಿಲುಕಿ ವಿಕೆಟ್ ಒಪ್ಪಿಸಿದರು.

ಆ ನಂತರ ಅಭಿಷೇಕ್ ಶರ್ಮಾ-ತಿಲಕ್ ವರ್ಮಾ ನಡುವೆ 4ನೇ ವಿಕೆಟ್‌ಗೆ 18 ರನ್‌ಗಳ ಜತೆಯಾಟ ಮೂಡಿಬಂತು. ಟೀಮ್ ಇಂಡಿಯಾದ ಮೊತ್ತ 92 ರನ್ ಆಗಿದ್ದಾಗ 31 ಬಾಲ್‌ಗಳಲ್ಲಿ ಬಿರುಸಾಗಿ 61 ರನ್ ಗಳಿಸಿದ್ದ ಅಭಿಷೇಕ್ ಶರ್ಮಾ ತಮ್ಮ ವಿಕೆಟ್ ಒಪ್ಪಿಸಿದರು. ಬಳಿಕ ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ 5ನೇ ವಿಕೆಟ್‌ಗೆ 66 ರನ್‌ಗಳ ಭರ್ಜರಿ ಜತೆಯಾಟ ಪ್ರದರ್ಶಿಸಿದರು ಭಾರತವು ಉತ್ತಮ ಮೊತ್ತ ದಾಖಲಿಸುವಲ್ಲಿ ನೆರವಾದರು. ಸಂಜು ಸ್ಯಾಮ್ಸನ್ 23 ಬಾಲ್‌ಗಳಲ್ಲಿ 39 ರನ್ ಗಳಿಸಿದ್ದ ವೇಳೆ ತಮ್ಮ ವಿಕೆಟ್ ಕಳೆದುಕೊಂಡರು.

ಆದರೆ ಆ ಬಳಿಕ ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ ಕೇವಲ 2 ರನ್ ಗಳಿಸಿದ್ದ ವೇಳೆ ಚಮೀರಾ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು. ಕೊನೆಯಲ್ಲಿ 34 ಬಾಲ್‌ಗಳಿಂದ 49 ರನ್ ಗಳಿಸಿದ್ದ ತಿಲಕ್ ವರ್ಮಾ ಮತ್ತು 15 ಬಾಲ್‌ಗಳಿಂದ 21 ರನ್ ಗಳಿಸಿದ್ದ ಅಕ್ಷರ್ ಪಟೇಲ್ ಅಜೇಯರಾಗುಳಿದರು.

ಭಾರತವು ತನ್ನ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 202 ರನ್ ಗಳಿಸಿತು.

ರಾಹುಲ್, ಸಾಯಿ ಸುದರ್ಶನ್ ಶತಕ, ಭಾರತಕ್ಕೆ 5 ವಿಕೆಟ್ ಜಯ

ಆಸೀಸ್ ವಿರುದ್ಧ ಭಾರತ ಎ ತಂಡಕ್ಕೆ ಗೆಲುವು

ದಹಲಿ: ಕೆಎಲ್ ರಾಹುಲ್ ಹಾಗೂ ಸಾಯಿ ಸುದರ್ಶನ್ ಅವರ ಶತಕಗಳ ಬಲದಿಂದ ಭಾರತ ಎ ತಂಡ, ಎರಡನೇ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಎ ವಿರುದ್ಧ 5 ವಿಕೆಟ್‌ಗಳ ಗೆಲುವು ದಾಖಲಿಸಿದೆ. ಆ ಮೂಲಕ ಭಾರತ ಎ ತಂಡ ಎರಡು ಪಂದ್ಯಗಳ ಅನಧಿಕೃತ ಟೆಸ್ಟ್ ಸರಣಿಯನ್ನು 1-0 ಅಂತರದಲ್ಲಿ ಮುಡಿಗೇರಿಸಿಕೊಂಡಿದ್ದು ಅಕ್ಟೋಬರ್ 2ರಂದು ಆರಂಭವಾಗುವ ಟೆಸ್ಟ್ ಸರಣಿಗೆ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಲಖನೌದ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ಎ ನೀಡಿದ್ದ 413 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಭಾರತ ಎ ತಂಡ, 91.3 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ ಗೆಲುವಿನ ದಡ ಸೇರಿತು. ಪ್ರಥಮ ಇನಿಂಗ್ಸ್‌ನಲ್ಲಿ ಕೇವಲ 11 ರನ್‌ಗಳಿಗೆ ವಿಕೆಟ್ ಒಪ್ಪಿಸಿದ್ದ ಕೆ.ಎಲ್ ರಾಹುಲ್, ದ್ವಿತೀಯ ಇನಿಂಗ್ಸ್‌ನಲ್ಲಿ ಅಜೇಯ 176 ರನ್‌ಗಳನ್ನು ಕಲೆ ಹಾಕುವ ಮೂಲಕ ಭಾರತದ ಗೆಲುವಿನಲ್ಲಿ ಮಹತ್ತರ ಪಾತ್ರವನ್ನು ವಹಿಸಿದರು.

ಕೆ.ಎಲ್ ರಾಹುಲ್ ಜೊತೆಗೆ ಮತ್ತೊಂದು ತುದಿಯಲ್ಲಿ ದೀರ್ಘಾವಧಿ ಸಾಥ್ ನೀಡಿದ ಸಾಯಿ ಸುದರ್ಶನ್ ಅವರು ಎರಡನೇ ಇನಿಂಗ್ಸ್‌ನಲ್ಲಿ ಅದ್ಭುತ ಆಟವನ್ನು ಪ್ರದರ್ಶಿಸಿದರು. ಅವರು ಆಡಿದ್ದ 172 ಎಸೆತಗಳಲ್ಲಿ 100 ರನ್‌ಗಳನ್ನು ಬಾರಿಸಿದರು. ಇದಕ್ಕೂ ಮುನ್ನ ಪ್ರಥಮ ಇನಿಂಗ್ಸ್‌ನಲ್ಲಿ 75 ರನ್‌ಗಳನ್ನು ಗಳಿಸಿದ್ದರು. ಈ ಇಬ್ಬರೂ ಬ್ಯಾಟ್ಸ್‌ಮನ್‌ಗಳು ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಯ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಮೂರನೇ ದಿನ 74 ರನ್ ಳಿಸಿದ ಬಳಿಕ ರಿಟೈರ್ಡ್ ಹರ್ಟ್ ಆಗಿದ್ದ ಕೆ.ಎಲ್ ರಾಹುಲ್, ನಾಲ್ಕನೇ ಹಾಗೂ ಅಂತಿಮ ದಿನ ಕ್ರೀಸ್‌ಗೆ ಬಂದು ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದರು. ಅವರು 143 ಎಸೆತಗಳಲ್ಲಿ ತಮ್ಮ ಪ್ರಥಮ ದರ್ಜೆ ಕ್ರಿಕೆಟ್ ವೃತ್ತಿ ಜೀವನದ 22ನೇ ಶತಕವನ್ನು ಪೂರ್ಣಗೊಳಿಸಿದರು. ಒಟ್ಟಾರೆಯಾಗಿ ಅವರು ಆಡಿದ 210 ಎಸೆತಗಳಲ್ಲಿ ನಾಲ್ಕು ಸಿಕ್ಸರ್ ಹಾಗೂ 16 ಬೌಂಡರಿಗಳೊಂದಿಗೆ ಅಜೇಯ 176 ರನ್‌ಗಳನ್ನು ಬಾರಿಸಿದರು. ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗೂ ಮುನ್ನ ಈ ಇನಿಂಗ್ಸ್ ಕೆ.ಎಲ್ ರಾಹುಲ್‌ಗೆ ಹೆಚ್ಚಿನ ವಿಶ್ವಾಸವನ್ನು ಮೂಡಿಸಿದೆ.

ಆಸ್ಟ್ರೇಲಿಯಾ ಎ ತಂಡ ಪ್ರಥಮ ಇನಿಂಗ್ಸ್‌ನಲ್ಲಿ 420 ರನ್‌ಗಳನ್ನು ಕಲೆ ಹಾಕಿದ ಬಳಿಕ ಪ್ರಥಮ ಇನಿಂಗ್ಸ್ ಮಾಡಿದ್ದ ಭಾರತ ಎ ತಂಡ ಕೇವಲ 194 ರನ್‌ಗಳಿಗೆ ಆಲ್‌ಔಟ್ ಆಗಿತ್ತು. ಆದರೆ, ಭಾರತ ಎ ತಂಡ ದ್ವಿತೀಯ ಇನಿಂಗ್ಸ್‌ನಲ್ಲಿ ಅದ್ಭುತವಾಗಿ ಕಮ್‌ಬ್ಯಾಕ್ ಮಾಡಿತು. ದ್ವಿತೀಯ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ಎ ತಂಡವನ್ನು ಕೇವಲ 185 ರನ್‌ಗಳಿಗೆ ಆಲೌಟ್ ಮಾಡಿತ್ತು. ಆ ಮೂಲಕ ಆತಿಥೇಯ ತಂಡಕ್ಕೆ 413 ರನ್‌ಗಳ ಗುರಿಯನ್ನು ಆಸೀಸ್ ನೀಡಿತ್ತು.

ವೆಸ್ಟ್ ಇಂಡೀಸ್ ಟೆಸ್ಟ್ ಸರಣಿಯಲ್ಲಿ ಭಾರತ ತಂಡಕ್ಕೆ ಮೊದಲ ಆಯ್ಕೆಯ ವಿಕೆಟ್ ಕೀಪರ್ ಆಗಿರುವ ಧ್ರುವ್ ಜುರೆಲ್ ಅವರು ಕೂಡ ಬ್ಯಾಟಿಂಗ್‌ನಲ್ಲಿ ತಂಡಕ್ಕೆ ಉಪಯುಕ್ತ ಕೊಡುಗೆಯನ್ನು ನೀಡಿದ್ದಾರೆ. ಅವರು ಆಡಿದ 66 ಎಸೆತಗಳಲ್ಲಿ 56 ರನ್‌ಗಳನ್ನು ಗಳಿಸಿದರು. ಆದರೆ, ಭಾರತ ಟೆಸ್ಟ್ ತಂಡದಲ್ಲಿ ಸ್ಥಾನವನ್ನು ಪಡೆದಿರುವ ಧ್ರುವ್ ಜುರೆಲ್ ಅವರು ಪ್ರಥಮ ಇನಿಂಗ್ಸ್‌ನಲ್ಲಿ 1 ಮತ್ತು ದ್ವಿತೀಯ ಇನಿಂಗ್ಸ್‌ನಲ್ಲಿ 5 ರನ್ ಗಳಿಸಿ ನಿರಾಶೆ ಮೂಡಿಸಿದ್ದರು.

ಅನಧಿಕೃತ ಟೆಸ್ಟ್ ಸರಣಿಯನ್ನು ಮುಗಿಸಿರುವ ಭಾರತ ಎ ಮತ್ತು ಆಸ್ಟ್ರೇಲಿಯಾ ಎ ತಂಡಗಳು ಇದೀಗ ಅನಧಿಕೃತ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಕಾದಾಟ ನಡೆಸಲಿವೆ. ಸೆಪ್ಟಂಬರ್ 30, ಅಕ್ಟೋಬರ್ 3 ಹಾಗೂ ಅಕ್ಟೋಬರ್ 5 ರಂದು ಮೂರೂ ಪಂದ್ಯಗಳು ಕಾನ್ಪುರದ ಗ್ರೀನ್ ಪಾರ್ಕ್‌ನಲ್ಲಿ ನಡೆಯಲಿವೆ.

ಮುಂಬೈ ಇಂಡಿಯನ್ಸ್ ತಂಡಕ್ಕೆ ಕೈಟ್ಲಿ ಕೋಚ್

ಮುಂಬಯಿ: ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮಹಿಳಾ ತಂಡ ಮುಂಬರುವ ಆವೃತ್ತಿಗೂ ಮುನ್ನ, ಆಸ್ಟ್ರೇಲಿಯಾದ ಮಾಜಿ ಮಹಿಳಾ ಕ್ರಿಕೆಟರ್ ಮತ್ತು ಎರಡು ಬಾರಿಯ ವಿಶ್ವಕಪ್ ವಿಜೇತೆ ಲಿಸಾ ಕೈಟ್ಲಿ ಅವರನ್ನು ತಂಡದ ನೂತನ ಮುಖ್ಯ ಕೋಚ್ ಆಗಿ ನೇಮಿಸಿದೆ. 1997 ಮತ್ತು 2005ರಲ್ಲಿ ಮಹಿಳೆಯರ ಏಕದಿನ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡದ ಭಾಗವಾಗಿದ್ದ ಕೈಟ್ಲಿ, ಮಹಿಳಾ ಕ್ರಿಕೆಟ್‌ನಲ್ಲಿ ಅತ್ಯಂತ ಗೌರವಾನ್ವಿತ ತರಬೇತುದಾರರಲ್ಲಿ ಒಬ್ಬರಾಗಿದ್ದಾರೆ.

ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ಉನ್ನತ ಜಾಗತಿಕ ಟಿ20 ಲೀಗ್‌ಗಳಲ್ಲಿನ ಶ್ರೇಷ್ಠ ಆಟದ ವೃತ್ತಿಜೀವನ ಮತ್ತು ತರಬೇತಿ ಅನುಭವದೊಂದಿಗೆ ಅವರು, ಮುಂಬೈ ಇಂಡಿಯನ್ಸ್ ತಂಡಕ್ಕೆ ಅಪ್ರತಿಮ ಅನುಭವ ಮತ್ತು ದೃಷ್ಟಿಕೋನವನ್ನು ತರಲಿದ್ದಾರೆ. ಮುಂಬೈ ಇಂಡಿಯನ್ಸ್ ಮಹಿಳಾ ತಂಡವು ಈಗಾಗಲೆ ಡಬ್ಲ್ಯುಪಿಎಲ್ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ತಂಡವಾಗಿದ್ದು, ಕೇವಲ ಮೂರು ಆವೃತ್ತಿಗಳಲ್ಲಿ ಎರಡು ಚಾಂಪಿಯನ್‌ಶಿಪ್‌ಗಳನ್ನು ಗೆದ್ದುಕೊಂಡಿದೆ. ಮುಂಬೈ ಇಂಡಿಯನ್ಸ್ ತಂಡ 2023 ಮತ್ತು 2025ರಲ್ಲಿ ಡಬ್ಲ್ಯುಪಿಎಲ್ ಚಾಂಪಿಯನ್ ಆಗಿದೆ.

ಭಾರತವನ್ನು ಕೆಣಕುವ ಚಾಳಿ ಬಿಡದ ಪಾಕಿಸ್ತಾನ ನಾಯಕ

ನಾಳೆ ಏಷ್ಯಾಕಪ್ ಫೈನಲ್

ದುಬೈ: ಭಾರತ ಹಾಗೂ ಪಾಕಿಸ್ತಾನ ತಂಡ 2025ರ ಏಷ್ಯಾಕಪ್ ಟೂರ್ನಿಯಲ್ಲಿ ಮೂರನೇ ಬಾರಿಗೆ ಮುಖಾಮುಖಿಯಾಗುತ್ತಿವೆ. ಹೀಗಿರುವಾಗಲೇ ಫೈನಲ್ ಪಂದ್ಯಕ್ಕೂ ಮುನ್ನ ಪಾಕಿಸ್ತಾನ ನಾಯಕ ಸಲ್ಮಾನ್ ಅಲಿ ಅಘಾ, ಭಾರತ ತಂಡಕ್ಕೆ ನೇರ ಎಚ್ಚರಿಕೆ ನೀಡಿದ್ದಾರೆ. ಸೆಪ್ಟೆಂಬರ್ 28ರ ಭಾನುವಾರ ದುಬೈ ಅಂತಾ ರಾಷ್ಟ್ರೀಯ ಮೈದಾನದಲ್ಲಿ ಏಷ್ಯಾಕಪ್ ಫೈನಲ್ ನಿಗದಿಯಾಗಿದೆ. ಕ್ರಿಕೆಟ್ ಜಗತ್ತಿನ ಬದ್ಧ ಎದುರಾಳಿಗಳಾದ ಭಾರತ ಹಾಗೂ ಪಾಕಿಸ್ತಾನ ತಂಡಗಳು ಪ್ರಶಸ್ತಿಗಾಗಿ ಕಾದಾಡಲಿವೆ.

ಬಾಂಗ್ಲಾಗೆ ಸೋಲುಣಿಸಿದ ಪಾಕ್: ಸೆಪ್ಟೆಂಬರ್ 25ರಂದು ಒಂದು ರೀತಿ ವರ್ಚುವಲ್ ಸೆಮಿಫೈನಲ್ ಎಂದೇ ಬಿಂಬಿತವಾಗಿದ್ದ ಬಾಂಗ್ಲಾದೇಶ ಹಾಗೂ ಪಾಕಿಸ್ತಾನ ನಡುವಿನ ಪಂದ್ಯದಲ್ಲಿ ಪಾಕಿಸ್ತಾನ 11 ರನ್ ರೋಚಕ ಜಯ ಸಾಧಿಸುವ ಮೂಲಕ ಫೈನಲ್ ಪ್ರವೇಶಿಸಿದೆ. ಪಾಕಿಸ್ತಾನ ತಂಡವು ಫೈನಲ್ ಪ್ರವೇಶಿಸುತ್ತಿದ್ದಂತೆಯೇ, ಪಾಕ್ ನಾಯಕ ಸಲ್ಮಾನ್ ಅಲಿ ಅಘಾ, ಭಾರತ ತಂಡಕ್ಕೆ ಎಚ್ಚರಿಕೆ ನೀಡಿದ್ದಲ್ಲದೆ ಫೈನಲ್ ಕುರಿತಂತೆ ಭವಿಷ್ಯ ನುಡಿದಿದ್ದಾರೆ.

ಬೌಲಿಂಗ್ ಬಲಿಷ್ಠ ಎಂದ ಪಾಕ್ ನಾಯಕ

ಬಾಂಗ್ಲಾದೇಶ ಎದುರು ಗೆಲುವು ದಾಖಲಿಸಿದ ಬಳಿಕ ಮಾತನಾಡಿದ ಸಲ್ಮಾನ್ ಅಲಿ ಅಘಾ, ಈ ರೀತಿ ಪಂದ್ಯವನ್ನು ಗೆಲ್ಲಬೇಕೆಂದರೆ, ಒಂದು ತಂಡವಾಗಿ ಆಡಬೇಕಾಗುತ್ತದೆ. ಎಲ್ಲರೂ ತುಂಬಾ ಚೆನ್ನಾಗಿ ಆಡಿದರು. ಬ್ಯಾಟಿಂಗ್‌ನಲ್ಲಿ ಕೊಂಚ ಸುಧಾರಣೆ ಕಂಡುಕೊಳ್ಳಬೇಕಿದೆ. ಆ ಬಗ್ಗೆ ಗಮನ ಹರಿಸುತ್ತೇವೆ ಎಂದಿದ್ದಾರೆ.

ಶಾಹೀನ್ ಅಫ್ರಿದಿ ಒಳ್ಳೆಯ ಆಟಗಾರರಾಗಿದ್ದು, ತಂಡ ಅವರಿಂದ ಏನನ್ನು ನಿರೀಕ್ಷೆ ಮಾಡುತ್ತಿತ್ತೋ ಅದನ್ನೇ ಮಾಡುತ್ತಿದ್ದಾರೆ. ಅವರ ಪ್ರದರ್ಶನದ ಬಗ್ಗೆ ನಮಗೆ ಖುಷಿ ಇದೆ ಎಂದು ಪಾಕ್ ನಾಯಕ ಹೇಳಿದ್ದಾರೆ. ನಾವು ಹೊಸ ಚೆಂಡಿನಲ್ಲಿ ಚೆನ್ನಾಗಿ ಬೌಲಿಂಗ್ ಮಾಡಿದ್ದೇವೆ. ನಾವು ಈ ರೀತಿಯೇ ಬೌಲಿಂಗ್ ಮಾಡಿದರೇ ಖಂಡಿತವಾಗಿಯೂ ನಾವು ಸುಲಭವಾಗಿ ಮ್ಯಾಚ್ ಗೆಲ್ಲಬಹುದು ಎಂದು ಸಲ್ಮಾನ್ ಅಘಾ ಹೇಳಿ ದ್ದಾರೆ. ನಾವು ಯಾವುದೇ ತಂಡವನ್ನು ಸೋಲಿ ಸುವ ಕ್ಷಮತೆ ಹೊಂದಿದ್ದೇವೆ. ನಾವು ಭಾನುವಾರ ಕಮ್‌ಬ್ಯಾಕ್ ಮಾಡುತ್ತೇವೆ. ಹಾಗೆಯೇ ಇದೇ ರೀತಿಯ ಫಲಿತಾಂಶ ತರಲು ಪ್ರಯತ್ನಿಸುತ್ತೇವೆ ಎಂದು ಸಲ್ಮಾನ್ ಅಘಾ ಹೇಳಿದ್ದಾರೆ.

ಹ್ಯಾಟ್ರಿಕ್ ಗೆಲುವಿನ ಮೇಲೆ ಕಣ್ಣಿಟ್ಟ ಭಾರತ: ಸೂರ್ಯಕುಮಾರ್ ಯಾದವ್ ನೇತೃತ್ವದ ಟೀಮ್ ಇಂಡಿಯಾ, ಬದ್ಧ ಎದುರಾಳಿ ಪಾಕಿಸ್ತಾನ ಎದುರು ಗ್ರೂಪ್ ಹಂತದಲ್ಲಿ ಹಾಗೂ ಸೂಪರ್-4 ಹಂತದಲ್ಲಿ ಗೆಲುವು ಸಾಧಿಸಿದ್ದು ಪಾಕಿಸ್ತಾನಕ್ಕೆ ಸೋಲುಣಿಸಿದ್ದು, ಇದೀಗ ಹ್ಯಾಟ್ರಿಕ್ ಗೆಲುವಿನೊಂದಿಗೆ 9ನೇ ಏಷ್ಯಾಕಪ್ ಗೆಲ್ಲುವ ವಿಶ್ವಾಸದಲ್ಲಿದೆ.

ಮಾರುತ ಸ್ತುತಿಸಿದ ಎಲ್ಲಮ್ಮನ ಗಾನ

ಖ್ಯಾತ ನಿರ್ದೇಶಕ ಎಸ್.ನಾರಾಯಣ್ ನಿರ್ದೇಶನದ ಮಾರುತ ತೆರೆಗೆ ಸಿದ್ಧವಾಗಿದೆ. ತಾರಾಗಣದಲ್ಲಿಯೇ ಗಮನಸೆಳೆದ ಈ ಸಿನಿಮಾದಲ್ಲಿ ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ನಾಯಕರಾಗಿ ನಟಿಸಿದ್ದು, ಬೃಂದಾ ಆಚಾರ್ಯ ನಾಯಕಿಯಾಗಿ ಅಭಿನಯಿಸಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತಾರಾ, ರಂಗಾಯಣ ರಘು, ಸಾಧು ಕೋಕಿಲ, ಕಲ್ಯಾಣಿ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಸುಜಯ್ ಶಾಸ್ತ್ರಿ ಹೀಗೆ ದೊಡ್ಡ ತಾರಾಬಳಗವೇ ಇದೆ.

ಮಾರುತ ಚಿತ್ರಕ್ಕಾಗಿ ಎಸ್.ನಾರಾಯಣ್ ಅವರೆ ಬರೆದು ಸಂಗೀತ ಸಂಯೋಜಿಸಿರುವ ನಮ್ಮಮ್ಮ ಸವದತ್ತಿ ಎಲ್ಲಮ್ಮ.. ಎಂಬ ಹಾಡು ನವರಾತ್ರಿಯ ಸಂದರ್ಭದಲ್ಲಿ ಬಿಡುಗಡೆಯಾಗಿದೆ. ಅನನ್ಯಾ ಭಟ್ ಗಾಯನದಲ್ಲಿ ಮೂಡಿಬಂದಿರುವ ಈ ಹಾಡು ಕೇಳಲು ಮಧುರವಾಗಿದೆ. ಬೃಂದಾ ಆಚಾರ್ಯ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ.

ನಿರ್ದೇಶಕ ಎಸ್.ನಾರಾಯಣ್ ಅವರ ಶಿಸ್ತು ಎಲ್ಲರಿಗೂ ಮಾದರಿ. ನಾನು ಅವರಿಂದ ಈ ಚಿತ್ರದಲ್ಲಿ ಸಾಕಷ್ಟು ಕಲಿತಿದ್ದೇನೆ. ನವರಾತ್ರಿಯ ಸಂದರ್ಭದಲ್ಲಿ ನಾಡಿನ ಜನತೆಗೆ ಒಂದೊಳ್ಳೆಯ ಭಕ್ತಿಗೀತೆಯನ್ನು ನಿರ್ದೇಶಕರು ನೀಡಿದ್ದಾರೆ. ಇಡೀ ತಂಡದ ಸಹಕಾರದಿಂದ ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದು ಶ್ರೇಯಸ್ ಮಂಜು ಹೇಳಿದರು. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಿತ್ರವನ್ನು ನಿರ್ಮಿಸಿರುವುದಕ್ಕೆ ಬಹಳ ಖುಷಿಯಿದೆ. ನಮ್ಮಮ್ಮ ಎಲ್ಲಮ್ಮ... ಹಾಡು ಮಧುರವಾಗಿ ಮೂಡಿಬಂದಿದೆ ಎಂದು ನಿರ್ಮಾಪಕ ರಮೇಶ್ ಯಾದವ್ ತಿಳಿಸಿದರು. ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ಮಾರುತ ಚಿತ್ರ ನಿರ್ಮಾಣವಾಗಿದ್ದು ಅಕ್ಟೋಬರ್ 31ರಂದು ತೆರೆಗೆ ಬರಲಿದೆ.

> ಮಾರುತ ಕೌಟುಂಬಿಕ ಕಥೆಯ ಸಿನಿಮಾವಾಗಿದ್ದು, ಯುವಜನತೆಗೆ ಒಳ್ಳೆಯ ಸಂದೇಶವೂ ಅಡಕವಾಗಿದೆ. ಸಾಮಾಜಿಕ ಜಾಲತಾಣಗಳಿಂದ ಎಷ್ಟು ಉಪಯೋಗ ವಿದೆಯೊ, ಅದಕ್ಕಿಂತ ಹೆಚ್ಚು ಅಪಾಯವಿದೆ. ಈ ನಿಟ್ಟನಲ್ಲಿ ಪೋಷಕರು ಯುವಜನತೆಯ ಮೇಲೆ ಹೆಚ್ಚು ಗಮನ ನೀಡಬೇಕು ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ.
> -ಎಸ್.ನಾರಾಯಣ್
> ನಿರ್ದೇಶಕ

ಗ್ರಾಮೀಣ ಕಥೆಗೆ ಥ್ರಿಲ್ಲಿಂಗ್ ಸ್ಪರ್ಶ

ಕುಂಟೆಬಿಲ್ಲೆ ಇದು ಗ್ರಾಮೀಣ ಕಥೆಯ ಸಿನಿಮಾ ಎಂದುಕೊಂಡರೆ ನಿಮಗೆ ಅಚ್ಚರಿ ಖಚಿತ. ಯಾಕೆಂದರೆ ಇಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಕಥೆ ಬೆರೆತಿದ್ದು, ಪ್ರೇಕ್ಷಕರಿಗೆ ರುಚಿಸುತ್ತದೆ. ನಾಯಕ ಹಾಗೂ ನಾಯಕಿ ಬಾಲ್ಯದ ಗೆಳೆಯರು, ಆ ಗೆಳೆತನ ಮುಂದೆ ಪ್ರೀತಿಗೆ ತಿರುಗುತ್ತದೆ. ಗಾಢವಾದ ಪ್ರೀತಿಗೆ ಮದುವೆಯ ಮುದ್ರೆ ಒತ್ತಲು ಇಬ್ಬರು ಸಿದ್ಧವಾಗಿರುತ್ತಾರೆ. ಇನ್ನೇನು ಮದುವೆ ಆಯ್ತು, ಅನ್ನುಕೊಳ್ಳುತ್ತಿರುವಾಗ ನಾಯಕಿ ಕಾಣೆಯಾಗುತ್ತಾಳೆ. ಯಾರೋ ಆಕೆಯನ್ನು ಕೊಲೆ ಮಾಡಿರುತ್ತಾರೆ. ಅಲ್ಲಿಂದ ಕಥೆ ಹೊಸ ತಿರುವು ಪಡೆದುಕೊಳ್ಳುತ್ತದೆ. ಕೊಲೆಯ ಹಿಂದಿನ ಜಾಡು ಬೆನ್ನಟ್ಟಿದಾಗ ಕುತೂಹಲಕಾರಿ ಸ್ಟೋರಿ ತೆರೆದುಕೊಳ್ಳುತ್ತದೆ. ಅಷ್ಟಕ್ಕೂ ನಾಯಕಿ ಕೊಲೆಯಾಗಿದ್ದು ಯಾಕೆ, ಕೊಲೆ ಮಾಡಿದ್ದು ಯಾರು, ಅದರ ಹಿಂದಿನ ಕಾರಣ ಏನು ಹೀಗೆ ಹಲವು ಪ್ರಶ್ನೆಗಳು ಕಾಡುತ್ತವೆ. ಅದೆಲ್ಲದಕ್ಕೂ ಸಿನಿಮಾ ನೋಡಿಯೇ ಉತ್ತರ ತಿಳಿಯಬೇಕು.

ಸಮಾಜದಲ್ಲಿ ಇಂದಿಗೂ ನಡೆಯುವ ಕೆಲವು ಗಂಭೀರ ವಿಚಾರಗಳನ್ನು ಆಯ್ದುಕೊಂಡು ಅದಕ್ಕೆ ಲವ್, ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಎಲ್ಲರಿಗೂ ಹಿಡಿಸುವಂತೆ ತೆರೆಯಲ್ಲಿ ಕಟ್ಟಿಕೊಡುವಲ್ಲಿ ನಿರ್ದೇಶಕ ಸಿದ್ದೇಗೌಡ ಯಶಸ್ವಿಯಾಗಿದ್ದಾರೆ. ಯದು ನಾಯಕನಾಗಿ ನಟಿಸಿದ್ದು, ಚೊಚ್ಚಲ ಚಿತ್ರದಲ್ಲಿಯೇ ಅಭಿನಯದ ಮೂಲಕ ಮನಗೆದ್ದಿದ್ದಾರೆ. ಮೇಘಶ್ರೀ ನಾಯಕಿಯಾಗಿ ಕಾಣಿಸಿಕೊಂಡಿದ್ದು, ಮುಗ್ಧ ಹುಡುಗಿಯಾಗಿ ಮೆಚ್ಚುವ ಅಭಿನಯ ತೋರಿದ್ದಾರೆ. ಸುಚೇಂದ್ರ ಪ್ರಸಾದ್ ಪೊಲೀಸ್ ಅಧಿಕಾರಿಯಾಗಿ ತಮ್ಮ ಪಾತ್ರಕ್ಕೆ ಜೀವ ತುಂಬಿದ್ದಾರೆ. ಉಳಿದಂತೆ ಸುಧಾ ಬೆಳವಾಡಿ, ಶಂಕರ್ ಅಶ್ವತ್ಥ್, ಭವಾನಿ ಪ್ರಕಾಶ್ ಎಲ್ಲರೂ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಚಿತ್ರದ ಹಾಡುಗಳು ಪ್ರೇಕ್ಷಕರಿಗೆ ರುಚಿಸುತ್ತವೆ. ಒಟ್ಟಾರೆ ಕುಂಟೆಪಿಲ್ಲೆ ಥ್ರಿಲ್ಲರ್ ಕಥೆಯಾದರೂ ಕುಟಂಬ ಸಮೇತ ಕುಳಿತು ನೋಡಬಹುದಾದ ಸಿನಿಮಾವಾಗಿದೆ.

ಚಿತ್ರ :ಕುಂಟೆಬಿಲ್ಲೆ
ನಿರ್ದೇಶನ : ಸಿದ್ದೇಗೌಡ
ನಿರ್ಮಾಣ :ಶಿವ, ಕುಮಾರ್ ಗೌಡ
ತಾರಾಗಣ : ಯಧು, ಮೇಘಶ್ರೀ, ಸುಚೇಂದ್ರ ಪ್ರಸಾದ್, ಸುಧಾ ಬೆಳವಾಡಿ ಮುಂತಾದವರು.
ರೇಟಿಂಗ್ : ★

ಜಾಕಿಯ ಟಗರು ಕಾಳಗ

ಮಡ್ ರೇಸಿಂಗ್ ಕುರಿತ ಚಿತ್ರವನ್ನು ನಿರ್ದೇಶಿಸಿದ್ದ ಡಾ.ಪ್ರಗಭಾಲ್ ಇದೀಗ ಮತ್ತೊಂದು ವಿಶಿಷ್ಟ ಹಾಗೂ ಸಾಹಸಭರಿತ ಕಥೆಯನ್ನು ಹೊತ್ತುಬರುತ್ತಿದ್ದಾರೆ. ಜಾಕಿ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಈ ಚಿತ್ರವನ್ನು ಪಿಕೆ7 ಸ್ಟುಡಿಯೋಸ್‌ನಲ್ಲಿ ಪ್ರೇಮಾ ಕೃಷ್ಣದಾಸ್ ಮತ್ತು ಸಿ.ದೇವದಾಸ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಸಾಂಪ್ರದಾಯಿಕ ಮದುರೈ ಟಗರು ಕಾಳಗವನ್ನೇ ಆಧಾರವಾಗಿಟ್ಟುಕೊಂಡು ಈ ಕಥೆ ಹೆಣೆಯಲಾಗಿದೆ. ಸದ್ಯ ಈ ಚಿತ್ರದ ಮೊದಲ ಮೋಷನ್ ಪೋಸ್ಟರ್ ಬಿಡುಗಡೆಯಾಗಿದ್ದು ಕುತೂಹಲ ಮೂಡಿಸಿದೆ.

ಮದುರೈ ಪ್ರವಾಸದ ವೇಳೆ ಟಗರು ಕಾಳಗವನ್ನು ನೋಡಿದ್ದೆ. ಅದು ಕೇವಲ ಕ್ರೀಡೆ ಅಲ್ಲ, ಟಗರು ಹಾಗೂ ಅದರ ಪಾಲಕರ ನಡುವಿನ ಆಳವಾದ ಬಾಂಧವ್ಯದ ಸಾಂಸ್ಕೃತಿಕ ಅಭಿವ್ಯಕ್ತಿಯಾಗಿತ್ತು. ಮೂರು ವರ್ಷದಿಂದ ಮದುರೈನಲ್ಲಿ ನೆಲೆಸಿ ಸಂಶೋಧನೆ ನಡೆಸಿ, ಕಥೆಯನ್ನು ಸಿದ್ಧಪಡಿಸಿದ್ದೇನೆ ಎನ್ನುತ್ತಾರೆ ನಿರ್ದೇಶಕ ಡಾ.ಪ್ರಗಭಾಲ್.

ಚಿತ್ರ ನೈಜವಾಗಿ ಮೂಡಿಬರಬೇಕು ಎಂಬ ನಿಟ್ಟಿನಲ್ಲಿ ಪಾತ್ರಧಾರಿಗಳು ಟಗರುಗಳ ಜತೆಗೆ ಒಡನಾಟ ಬೆಳೆಸಿಕೊಂಡು ಚಿತ್ರದಲ್ಲಿ ನಟಿಸಿದ್ದಾರೆ. ಸಿನಿಮಾ ಸಲುವಾಗಿಯೇ ಒಂದಷ್ಟು ಟಗರುಗಳನ್ನು ಖರೀದಿಸಿ, ಅವುಗಳ ಜತೆ ದಿನನಿತ್ಯ ಬೆರೆತು, ತರಬೇತಿ ಕೊಡಿಸಲಾಗಿದೆಯಂತೆ. ಯುವನ್ ಕೃಷ್ಣ ಮತ್ತು ರಿಧನ್ ಕೃಷ್ಣಾಸ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು, ಈ ಚಿತ್ರಕ್ಕಾಗಿಯೇ ನಟರು ಮಧುರೈನಲ್ಲಿ ವಾಸವಿದ್ದು ಟಗರುಗಳ ಜತೆ ತರಬೇತಿ ಪಡೆದಿದ್ದಾರೆ. ಅಮ್ಮು ಅಭಿರಾಮಿ ನಾಯಕಿಯಾಗಿ ಬಣ್ಣಹಚ್ಚಿದ್ದು, ಮಧುಸೂಧನ್ ರಾವ್ ವಿಶೇಷ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ಮದುರೈನ ನಿವಾಸಿಗಳು ಹಾಗೂ ಟಗರುಗಳ ಮಾಲೀಕರೂ ಚಿತ್ರತಂಡಕ್ಕೆ ಸಹಕಾರ ನೀಡಿದ್ದಾರೆ. ಹೀರೋ ಹಾಗೂ ಅವನ ಟಗರಿನ ನಡುವಿನ ಬಾಂಧವ್ಯ ಕಥೆಯ ಹೃದಯವಾಗಿದ್ದು, ಖಳನಾಯಕನ ಪಾತ್ರವೂ ಅದೇ ಮಟ್ಟಿಗೆ ಬಲಿಷ್ಠವಾಗಿದೆ ಎನ್ನುತ್ತಾರೆ ನಿರ್ದೇಶಕರು. ಇದೀಗ ಮೂರು ವರ್ಷಗಳ ಪರಿಶ್ರಮದ ಫಲವಾಗಿ ಜಾಕಿ ಸಿನಿಮಾ, ಟಗರು ಕಾಳಗದ ಪೈಪೋಟಿ ಜತೆಗೆ ಮಧುರೈ ಸಂಸ್ಕೃತಿಯನ್ನ ವಿಶ್ವದ ಮುಂದೆ ತೆರೆದಿಡುವ ಪ್ರಯತ್ನ ನಡೆಯುತ್ತಿದೆ. ಸದ್ಯ ಬಿಡುಗಡೆಯಾಗಿರುವ ಮೋಷನ್ ಪೋಸ್ಟರ್ ಅದಕ್ಕೆ ಪುಷ್ಠಿ ನೀಡಿದೆ.



ಅಧೀರ ಯುಗ ಆರಂಭ

ವಿಭಿನ್ನ ಕಥೆಯ ಮೂಲಕ ಟಾಲಿವುಡ್‌ನಲ್ಲಿ ಗಮನಸೆಳೆದಿರುವ ನಿರ್ದೇಶಕರ ಸಾಲಿನಲ್ಲಿ ಪ್ರಶಾಂತ್ ವರ್ಮ ಕೂಡ ಒಬ್ಬರು. ಟಾಲಿವುಡ್‌ನಲ್ಲಿ ಜಾಂಬಿ ಪ್ರಕಾರದ ಹೊಸ ಅಧ್ಯಾಯವನ್ನು ಪರಿಚಯಿಸಿ, ಭಾರತದ ಮೊದಲ ಸೂಪರ್ ಹೀರೊ ಸಿನಿಮಾ ಹನುಮಾನ್ ಮೂಲಕ ಹೊಸತನ ತಂದಿದ್ದ ಪ್ರಶಾಂತ್ ವರ್ಮ, ಈಗ ಮತ್ತೊಂದು ಹೊಸ ಕಥೆ ಬರೆದಿದ್ದು, ಅಧಿರ ಶೀರ್ಷಿಕೆಯಲ್ಲಿ ಮತ್ತೊಂದು ಹೊಸ ಚಿತ್ರವನ್ನು ಪ್ರೇಕ್ಷಕರ ಮುಂದಿಡಲು ತಯಾರಿ ನಡೆಸಿದ್ದಾರೆ. ಆ್ಯಕ್ಷನ್ ಜತೆಗೆ ಫ್ಯಾಂಟಸಿ ಸ್ಟೋರಿಯೂ ಬೆರೆತಿರುವ ಈ ಚಿತ್ರವನ್ನು ಶರಣ್ ಕೋಪಿಸೆಟ್ಟಿ ನಿರ್ದೇಶನ ಮಾಡುತ್ತಿದ್ದಾರೆ. ಅಧಿರ ಆರ್‌ಕೆಡಿ ಸ್ಟುಡಿಯೋಸ್‌ನಲ್ಲಿ ನಿರ್ಮಾಣವಾಗುತ್ತಿದ್ದು, ಪ್ರಶಾಂತ್ ವರ್ಮ ಕೂಡ ಕೈ ಜೋಡಿಸಿದ್ದಾರೆ. ಕಲ್ಯಾಣ್ ದಾಸರಿ ನಾಯಕನಾಗಿ ನಟಿಸುತ್ತಿದ್ದು, ಜತೆಗೆ ಹಿರಿಯ ನಟ ಎಸ್.ಜೆ.ಸೂರ್ಯ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಭಾರತೀಯ ಇತಿಹಾಸ ಮತ್ತು ಆಧುನಿಕ ಸಿನಿಮಾ ಶೈಲಿಯನ್ನು ಒಟ್ಟುಗೂಡಿಸಿಕೊಂಡು ಅಧಿರ ಸಿನಿಮಾ ಮೂಡಿಬರಲಿದೆ. ಅಧೀರನ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆಯಾಗಿದ್ದು, ಕುತೂಹಲ ಮೂಡಿಸಿದೆ. ಸೂರ್ಯ ಜತೆಗೆ ಕಲ್ಯಾಣ್ ದಾಸರಿ ಸಹ ಸೂಪರ್ ಹೀರೊ ರೀತಿ ಕಾಣಿಸಿಕೊಂಡು ಅಚ್ಚರಿ ಮೂಡಿಸಿದ್ದಾರೆ. ಧರ್ಮವನ್ನು ರಕ್ಷಿಸಲು ಹೋರಾಡುವ ಹೊಸ ಸೂಪರ್ ಹೀರೊ ಕಥೆಯೇ ಈ ಅಧಿರ. ಸಿಡಿಲಿನಂತಿರುವ ಆ್ಯಕ್ಷನ್, ಉಸಿರು ಬಿಗಿಸುವ ದೃಶ್ಯ ವೈಭವ, ಮನ ಸೆಳೆಯುವ ಸಂಗೀತ ಹಾಗೂ ಭವ್ಯ ನಿರೂಪಣೆಯೊಂದಿಗೆ ಈ ಚಿತ್ರವು ಪ್ರೇಕ್ಷಕರಿಗೆ ಹೊಸ ಅನುಭವ ನೀಡಲಿದೆ.

ಪ್ರೇಮಿಯ ಕರೆತಂದ ಪ್ರದೀಪ್

ಕನ್ನಡದಲ್ಲಿ ಪ್ರೇಮ ಕಥೆಯ ಹಲವು ಸಿನಿಮಾಳು ತೆರೆಗೆ ಬಂದಿವೆ. ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನ ಪ್ರೇಮ ಕಥಾಹಂದರ ಹೊಂದಿರುವ ಪ್ರೇಮ ಕಥಾನಕವೊಂದು ಈಗ ನಿರ್ಮಾಣವಾಗುತ್ತಿದೆ. ಎಸ್.ಪ್ರದೀಪ್ ವರ್ಮ ಸಾರಥ್ಯದಲ್ಲಿ ಮುಡಿಬರುತ್ತಿರುವ ಈ ಚಿತ್ರಕ್ಕೆ ಪ್ರೇಮಿ ಎಂದು ಶೀರ್ಷಿಕೆ ಇಡಲಾಗಿದೆ. ಚಿತ್ರೀಕರಣ ಮುಗಿಸಿರುವ ಪ್ರೇಮಿ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ.

ಅದ್ವಿಕ್ ನಾಯಕನಾಗಿ ನಟಿಸಿದ್ದು, ಸಾತ್ವಿಕಾ ನಾಯಕಿಯಾಗಿ ಕಾಣಿಸಿಕೊಂಡಿದಾರೆ. ಉಳಿದಂತೆ ಶೋಭಿತಾ, ಎಸ್.ಪ್ರದೀಪ್ ವರ್ಮ, ಹರೀಶ್ ಉಕ್ಕಡಗಾತ್ರಿ, ಶಂಕರ್ ಅಂಬಿ, ದ್ವಿತಾ, ಸಂಗಮೇಶ್ ದೇವರಬೆಳ್ಕೆರೆ, ಕಲ್ಕಿ, ಮಾಸ್ಟರ್ ಹರೀಶ್, ಸಮರ್ಥ್ ರಾಘವೇಂದ್ರ, ಸುರೇಶ್ ಬಾಬು ಮುಂತಾದವರು ಪ್ರೇಮಿ ಚಿತ್ರದ ತಾರಾಬಳಗದಲ್ಲಿದ್ದಾರೆ.

ಜ್ಯೋತಿಷ್ಯದ ಮೂಲಕ ಪ್ರೀತಿಯನ್ನು ಹುಡುಕುವ ವಿಭಿನ್ನ ಕಥಾಹಂದರ ಹೊಂದಿರುವ ಈ ಪ್ರೇಮಿ ಚಿತ್ರಕ್ಕೆ ಟಿಎಸ್ ಅಕ್ಕಮಹಾದೇವಿ ಕಥೆ ಬರೆದಿದ್ದಾರೆ. ಎಸ್ ಪ್ರದೀಪ್ ವರ್ಮ ನಿರ್ದೇಶನ ಮಾಡಿದ್ದಾರೆ. ಐದು ಹಾಡುಗಳಿರುವ ಈ ಚಿತ್ರಕ್ಕೆ ಪ್ರದೀಪ್ ವರ್ಮ ಅವರೆ ಸಂಗೀತ ಸಂಯೋಜಿಸಿದ್ದಾರೆ. ವಿಮಲ್ ರಾಜ್ ಸಂಭಾಷಣೆ, ಗೌತಮ್ ಮಟ್ಟಿ ಛಾಯಾಗ್ರಹಣ, ಸಂಜೀವ್ ರೆಡ್ಡಿ ಸಂಕಲನ ಹಾಗೂ ರಾಮ್ ದೇವ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ದಾವಣಗೆರೆ, ದೇವರಬೆಳಕೆರೆ, ಗೋಕರ್ಣ, ಕನಕಪುರ, ಚಿಕ್ಕಮಗಳೂರು ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಸಲಾಗಿದೆ. ಶ್ರೀಗುರು ಕಾಲಭೈರವೇಶ್ವರ ಪ್ರೊಡಕ್ಷನ್ ಲಾಂಛನದಲ್ಲಿ ಬಿ.ಸಿದ್ದಲಿಂಗಯ್ಯ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.